## ಬೆಳ್ಳೂರು ಗ್ರಾಮ ಪಂಚಾಯತು
## 9ನೇ ಪಂಚವಾರ್ಷಿಕ ಯೋಜನೆ

# ಅಭಿವೃದ್ಧಿ ವರದಿ











ಬೆಳ್ಳೂರು ಗ್ರಾಮ ಪಂಚಾಯತು 9ನೇ ಪಂಚವಾರ್ಷಿಕ ಯೋಜನೆಯ ಏಕದಿನ ಶಿಬಿರವನ್ನು ಕಾಸರಗೋಡು ಜಿಲ್ಲಾ ಪಂಚಾಯತು ವೆಲ್‌ಫೇರ್ ಕಮಿಟಿ ಅಧ್ಯಕ್ಷೆ ಶ್ರೀಮತಿ ಜಯಲಕ್ಷ್ಮೀ ಯಸ್. ಭಟ್ ಉದ್ಘಾಟಿಸಿದರು.



ಬೆಳ್ಳೂರು ಗ್ರಾಮ ಪಂಚಾಯತು ಏಕದಿನ ತರಬೇತಿ ಶಿಬಿರದ ವೇದಿಕೆಯಲ್ಲಿ ಪಾಲ್ಗೊಂಡ ಪಂಚಾಯತ್ ಸದಸ್ಯರು.

# BELLOOR GRAMA PANCHAYAT

# HYDRO GEOMORPHOLOGY MAP




## REFERENCE

| | |
|---|---|
| DHL | Denudational hill lour |
| DHSL | Denudational hill side slope |

## Lateritic Plateau

| | | |
|---|---|---|
| L 4 | - | 81-120m |
| L5 | - | 121-160m |
| VF | - | Valley Fills |

# BELLOOR GRAMA PANCHAYAT

## Transport, Aetionplan and Soil Map.




**REFERENCE**

------Roads

- 5 Paddy Pulses, Oil seeds Vegitables
- 7 Agricutural plantations
- 9 Evergreen, Semi Evergreen Forests
- 2 Soil-Clayeg, skalotal Kaolinitic haglohumic Eutrorthoxs
- 3 Clayeg sheletal, Kaolinitic lithic Troporthents
- 4 bandy, Mixed lithic Troporthints

-Road

# ಅನುಕ್ರಮಣಿಕೆ


1. ಮುನ್ನುಡಿ
2. ಗ್ರಾಮ ಪಂಚಾಯತಿನ ಮಾಹಿತಿ
3. ಆಡಳಿತ ಸಮಿತಿ ಸದಸ್ಯರು
4. ಸಾಮಾಜಿಕ ಮತ್ತು ಸಾಂಸ್ಕೃತಿಕ ಚರಿತ್ರೆ
5. ಭೂ ಪ್ರಕೃತಿ ಜನ ಪ್ರಕೃತಿ ಜಲ ಪ್ರಕೃತಿ
6. ಕೃಷಿಯೂ ನೀರಾವರಿಯೂ
7. ಮೃಗ ಸಂರಕ್ಷಣೆ
8. ವ್ಯವಸಾಯ
9. ವಿದ್ಯಾಭ್ಯಾಸ
10. ಕುಡಿನೀರು, ಆರೋಗ್ಯ ಹಾಗೂ ಪರಿಸರ ಶುಚಿತ್ವ
11. ಸಾರಿಗೆ ಸೌಕರ್ಯ
12. ಇಂಧನ
13. ವಸತಿ ಮತ್ತು ಸಾಮಾಜಿಕ ಕ್ಷೇಮ
14. ಸಂಸ್ಕೃತಿ
15. ಮಹಿಳಾ ಕ್ಷೇಮ
16. ಸಹಕಾರಿ ಕ್ಷೇತ್ರ
17. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ
18. ಸಂಪನ್ಮೂಲಗಳ ಸಂಗ್ರಹ
19. ಉಪ ಸಂಹಾರ



ಭಾರತಕ್ಕೆ ದೊರಕಿದ ಸ್ವಾತಂತ್ರ್ಯ ಮತ್ತು
ಅವಕಾಶಗಳನ್ನು ಗ್ರಾಮಗಳಿಗೆ ಬಿಟ್ಟು ಬಿಡಿ

**- ಗಾಂಧೀಜಿ**

## ಅಭಿವೃದ್ಧಿ ವರದಿಯ ಅಂಗೀಕಾರ

P. R. No. 271/96 Dt. 25-11-96

# 1

# ಮುನ್ನುಡಿ

ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರು ಭಾರತಕ್ಕೆ ಸ್ವಾತಂತ್ರ್ಯ ದೊರಕುವ ಮೊದಲೇ "ಸಂಪೂರ್ಣ ಜನ ಸಹಭಾಗಿತ್ವ ಮತ್ತು ಪ್ರಾದೇಶಿಕ ಮಟ್ಟದಿಂದ ಯೋಜನೆಯ ತಯಾರಿ" ಎಂಬ ಆಶಯವನ್ನು 1930ರಲ್ಲಿ "ಯಂಗ್ ಇಂಡಿಯ" ಮತ್ತು "ಹರಿಜನ" ಎಂಬ ಪತ್ರಿಕೆಗಳಿಗೆ ಬರೆದ ಲೇಖನಗಳಲ್ಲಿ ವ್ಯಕ್ತಪಡಿಸಿದ್ದರು. ಗ್ರಾಮ ಸ್ವರಾಜ್ಯ ಗಾಂಧೀಜಿಯವರ ಸ್ವಪ್ನವಾಗಿತ್ತು. ಭಾರತಕ್ಕೆ ಸ್ವಾತಂತ್ರ್ಯ ದೊರಕುವ ಮೊದಲೇ ಗಾಂಧೀಜಿಯವರ ಅಂಬೋಣ ಹೀಗಿತ್ತು.

* ಗ್ರಾಮಗಳ ಆಡಳಿತ ನಡೆಸಬೇಕಾದುದು ಪಂಚಾಯತ್ ಆಗಿರಬೇಕು.
* ಜನರು ಸ್ವಾವಲಂಬಿಗಳೂ, ಸ್ವಯಂ ಪರ್ಯಾಪ್ತತೆ ಯುಳ್ಳವರೂ ಆಗಿರಬೇಕು.
* ಪ್ರತಿಯೊಂದು ಗ್ರಾಮವೂ ಆಗತ್ಯವಿರುವಷ್ಟು ಆಹಾರ, ಬಟ್ಟೆಯನ್ನು ಉತ್ಪಾದಿಸಬೇಕು.
* ಪ್ರತಿಯೊಂದು ಗ್ರಾಮದಲ್ಲೂ ಆಟದ ಬಯಲುಗಳೂ, ವಿದ್ಯಾಲಯಗಳೂ, ಸಭಾಂಗಣಗಳೂ, ಹುಲ್ಲುಗಾವಲುಗಳೂ, ಶುದ್ಧ ಜಲಪೂರೈಕೆಯೂ ಇರಬೇಕು.
* ಎಲ್ಲಾ ಆರ್ಥಿಕ ಕಾರ್ಯಕ್ರಮಗಳೂ ಸಹಕಾರಿ ತಳಹದಿ ಯಲ್ಲಿರಬೇಕು.
* ಆಡಳಿತ ವಿಕೇಂದ್ರೀಕರಣವಾದಾಗಲೇ ನಿಜವಾದ ಪ್ರಜಾಪ್ರಭುತ್ವದ ಉದಯವಾಗುವುದು.
* ಗ್ರಾಮ ಸ್ವರಾಜ್ಯವೇ ಎಲ್ಲಾ ಅಭಿವೃದ್ದಿ ಕಾರ್ಯಕ್ರಮಗಳ ಮುಖ್ಯ ಗುರಿಯಾಗಿರಬೇಕು.

ಸ್ವತಂತ್ರ ಭಾರತದಲ್ಲಿ ಸ್ವಯಂ ಆಡಳಿತ ಸಂವಿಧಾನವನ್ನು ಜ್ಯಾರಿಗೊಳಿಸುವುದು ಪ್ರಾಂತ್ಯಗಳ ಹೊಣೆಗಾರಿಕೆಯಾಗಿದೆ. ಆದುದರಿಂದ 1959ರಿಂದ ಪಂಚಾಯತ್ ರಾಜ್ ವ್ಯವಸ್ಥೆಯು ಭಾರತದ ಪ್ರಾಂತ್ಯಗಳಲ್ಲಿ ಅನುಷ್ಠಾನವಾಗತೊಡಗಿತು. ಆದರೆ ಆ ಸಂದರ್ಭದಲ್ಲಿ ಪಂಚಾಯತ್ ರಾಜ್‌ಗೆ ಭರಣ ಘಟನೆಯಲ್ಲಿ ನಿಯಮಪರವಾದ ಅಧಿಕಾರಗಳು ವಿಧಿಸಲ್ಪಟ್ಟಿರಲಿಲ್ಲ. ಮಾತ್ರವಲ್ಲ ಆಡಳಿತ ವಿಕೇಂದ್ರೀಕರಣದಿಂದಾಗಿ ತಮ್ಮ ಅಧಿಕಾರ ವ್ಯಾಪ್ತಿ ಕುಗ್ಗುವುದೆಂಬ ಭಯದಿಂದಾಗಿ ಅಧಿಕಾರದ ಉನ್ನತ ಸ್ತರಗಳಲ್ಲಿ ರುವವರಿಗೆ ಪಂಚಾಯತ್ ರಾಜ್‌ನಲ್ಲಿರುವ ಆಸಕ್ತಿ ಕಡಿಮೆಯಾಯಿತು.

ಅಧಿಕಾರ ವಿಕೇಂದ್ರೀಕರಣಕ್ಕಾಗಿ ಭಾರತದ ಭರಣ ಘಟನೆಯನ್ನು ಬದಲಾವಣೆ ಮಾಡಬೇಕಾಗಿ ಬಂತು. ಆದುದರಿಂದ 1992 ದಶಂಬರದಲ್ಲಿ 73ನೇ ನಿಬಂಧನೆಯ ತಿದ್ದುಪಡಿಯನ್ನು ತರಲಾಯಿತು. ರಾಷ್ಟ್ರಪತಿಯವರ ಅಂಕಿತ ದೊರೆತು 1993 ಎಪ್ರಿಲ್ 24ರಂದು ಇದು ಶಾಸನಾತ್ಮಕ ಸ್ವರೂಪ ಪಡೆಯಿತು. ಭರಣ ಘಟನೆಯ 73ನೇ ತಿದ್ದುಪಡಿಯ ಮೂಲಕ ಗ್ರಾಮಾಭಿವೃದ್ಧಿಗೆ ಸಂಬಂಧಿಸಿದ 29 ನಿಬಂಧನೆಗಳುಳ್ಳ ಕಾರ್ಯಕ್ರಮವನ್ನು ಪಂಚಾಯತುಗಳಿಗೆ ನೀಡಲಾಯಿತು. ಮತ್ತು ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಜನರ ಸಹಭಾಗಿತ್ವವನ್ನು ದೃಢಗೊಳಿಸುವುದಕ್ಕಾಗಿ ಪ್ರತಿಯೊಂದು ಪಂಚಾಯತಿನಲ್ಲೂ ಸಂಪೂರ್ಣ ಮತದಾರರು ಸದಸ್ಯರಾಗಿರುವ ಗ್ರಾಮ ಸಭೆಗಳು ರೂಪೀಕರಿಸಲ್ಪಟ್ಟವು.

ಕೇರಳ ಪಂಚಾಯತ್ ರಾಜ್ ನಿಯಮವು 1994 ಎಪ್ರಿಲ್ 23ರಂದು ರೂಢಿಗೆ ಬಂತು. ಈ ನಿಯಮ ಪ್ರಕಾರ ಗ್ರಾಮ ಸಭೆಗಳಿಗೆ ಈ ಕೆಳಗಿನ ಜವಾಬ್ದಾರಿಗಳು ನೀಡಲ್ಪಟ್ಟಿತು.

* ಪ್ರಾದೇಶಿಕ ಅಭಿವೃದ್ಧಿಗೆ ಅಗತ್ಯವಾದ ಯೋಜನೆಗಳನ್ನು ಜ್ಯಾರಿಗೊಳಿಸಲು ಪಂಚಾಯತುಗಳಿಗೆ ಸಹಾಯ ನೀಡುವುದು.
* ಯೋಜನಾನುಗುಣವಾದ ಕೆಲಸ ಕಾರ್ಯಗಳ ಮೇಲ್ನೋಟ ವಹಿಸುವುದು ಮತ್ತು ಪ್ರೋತ್ಸಾಹ ನೀಡುವುದು.
* ಯೋಜನೆಯ ಕಾರ್ಯಕ್ರಮಗಳಿಗೆ ಜನರ ಸಹಕಾರವನ್ನು ಸಂಘಟಿಸುವುದು ಸಂಪನ್ಮೂಲಗಳನ್ನು ಸಂಗ್ರಹಿಸುವುದು
* ಜನರು ಪರಸ್ಪರ ಸ್ನೇಹ ಸೌಹಾರ್ದಗಳನ್ನು ಬೆಳೆಸಿಕೊಳ್ಳುವಂತೆ ನೋಡಿಕೊಳ್ಳುವುದು.
* ಅಭಿವೃದ್ಧಿ ಯೋಜನೆಗಳ ಫಲಾನುಭವಿಗಳನ್ನು ಗುರುತಿಸಿ ಕೊಳ್ಳುವುದು
* ಅಭಿವೃದ್ಧಿ ಕಾರ್ಯಕ್ರಮಗಳಿಗಿರುವ ಸಲಹೆ ಸೂಚನೆಗಳನ್ನು ಸಮರ್ಪಿಸುವುದು.
* ಪಂಚಾಯತಿನ ಕಾರ್ಯಕ್ರಮಗಳ ಮೌಲ್ಯ ನಿರ್ಣಯ

1951ರ ಒಂದನೇ ಪಂಚವಾರ್ಷಿಕ ಯೋಜನೆ ಮೊದಲ್ಗೊಂಡು 45 ವರ್ಷಗಳ ಶಾಸ್ತ್ರೀಯವಾದ ಯೋಜನೆಗಳಿಂದ ಭಾರತ ದೇಶವು ಹಲವು ರಂಗಗಳಲ್ಲಿ ಬಹಳಷ್ಟು ಅಭಿವೃದ್ಧಿ ಹೊಂದಲು ಸಾಧ್ಯವಾಯಿತು. ಆದರೆ ಕಳೆದ 8 ಪಂಚವಾರ್ಷಿಕ ಯೋಜನೆಗಳಲ್ಲೂ ಅಭಿವೃದ್ಧಿ ಕಾರ್ಯಕ್ರಮಗಳು ಕೇಂದ್ರೀಕರಿಸಲ್ಪಟ್ಟಿದ್ದವು. ಯೋಜನೆ, ಕಾರ್ಯಕ್ರಮಗಳ ಕಾರ್ಯತತ್ಪರತೆ ಕಡಿಮೆಯಾಯಿತು. ಯೋಜನೆಯ ಪ್ರಯೋಜನ ಅರ್ಹರಾದವರಿಗೆ ದೊರೆಯಲಿಲ್ಲ. ಸರಕಾರವೂ, ಉದ್ಯೋಗಸ್ಥರೂ, ಅಭಿವೃದ್ಧಿ ಕಾರ್ಯಕ್ರಮಗಳೂ ಸಾಮಾನ್ಯ ಜನರಿಂದ ದೂರವಾಗುತ್ತದೆ ಎಂಬ ತಿಳುವಳಿಕೆಯುಂಟಾಯಿತು. ಈ ನ್ಯೂನತೆಗಳನ್ನು ಪರಿಹರಿಸಲು ಕೇರಳ ಸರಕಾರ 9ನೇ ಪಂಚ

ವಾರ್ಷಿಕ ಯೋಜನೆಯನ್ನು ಜನರ ಸಹಕಾರದಿಂದ ನಡೆಸುವ ಉದ್ದೇಶವನ್ನಿರಿಸಿಕೊಂಡಿದೆ. ಆದುದರಿಂದ ಸರಕಾರ ಹಾಗೂ ರಾಜ್ಯ ಯೋಜನಾ ಆಯೋಗವು ಜೊತೆ ಸೇರಿ ಜನ ಯೋಜನಾ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಈ ಕಾರ್ಯಕ್ರಮವು 1996 ಆಗೋಸ್ತು 17ರಂದು ತಿರುವಂತನಪುರದಲ್ಲಿ ಉದ್ಘಾಟಿಸಲ್ಪಟ್ಟಿತು. 9ನೇ ಪಂಚವಾರ್ಷಿಕ ಯೋಜನೆಯ ಪ್ರಕಾರ ಪ್ರಾಂತ್ಯಗಳಿಗೆ ಬಿಡುಗಡೆಯಾದ ಒಟ್ಟಾರೆ ಮೊತ್ತದ 35ರಿಂದ 40 ಶೇಕಡಾ ಮೊಬಲಗು ಪಂಚಾಯತುಗಳಿಗೆ ಲಭ್ಯವಾಗುವುದು. ಆ ಮೊತ್ತಕ್ಕೆ ಅನುಗುಣವಾದ ಯೋಜನೆಗಳನ್ನು ಗ್ರಾಮ ಮಟ್ಟದಲ್ಲಿ ತಯಾರಿಸಿ, ಅನುಷ್ಠಾನ ಗೊಳಿಸಬೇಕೆಂಬುದು ಜನ ಯೋಜನಾ ಕಾರ್ಯಕ್ರಮದ ಉದ್ದೇಶವಾಗಿದೆ.

ಜನಯೋಜನಾ ಕಾರ್ಯಕ್ರಮದಂತೆ ನಡೆದ ಜಿಲ್ಲಾ ಮಟ್ಟದ ಪ್ರಥಮ ಮತ್ತು ದ್ವಿತೀಯ ಹಂತದ ತರಬೇತಿಗೆ ಬೆಳ್ಳೂರು ಗ್ರಾಮ ಪಂಚಾಯಿತಿನಿಂದ ಪ್ರತಿನಿಧಿಗಳು ಹಾಜರಾಗಿರುವರು. ಬೆಳ್ಳೂರು ಗ್ರಾಮ ಪಂಚಾಯತಿನ ಏಕದಿನ ತರಬೇತಿ ಶಿಬಿರವು ತಾ. 20-9-96 ರಂದು ಬೆಳ್ಳೂರು ಗ್ರಾಮ ಪಂಚಾಯತು ಕಛೇರಿಯಲ್ಲಿ ಉತ್ತಮ ರೀತಿಯಲ್ಲಿ ನಡೆಯಿತು. 22-9-96 ರಿಂದ 29-9-96ರ ವರೆಗೆ ಬೆಳ್ಳೂರು ಗ್ರಾಮ ಪಂಚಾಯತಿನ 8 ವಾರ್ಡುಗಳಲ್ಲಿಯೂ ವಿಶೇಷ ಗ್ರಾಮ ಸಭೆಗಳನ್ನು ಉತ್ತಮ ರೀತಿಯಲ್ಲಿ ನಡೆಸಲಾಯಿತು. ಗ್ರಾಮ ಸಭೆಗಳಲ್ಲಿ ವಿಚಾರ ವಿನಿಮಯ ನಡೆಯಿತು. ಆಯಾ ಪ್ರದೇಶಗಳ ಪ್ರಸ್ತುತ ಪರಿಸ್ಥಿತಿಯನ್ನೂ ವಿಭಿನ್ನ ಕ್ಷೇತ್ರಗಳಲ್ಲಿ ಅನುಭವಿಸುವ ಸಮಸ್ಯೆಗಳನ್ನೂ, ಅವುಗಳ ಸೂಚಿತ ಪರಿಹಾರೋಪಾಯಗಳನ್ನೂ, ಅಂಕೆ ಸಂಖ್ಯೆ ಸಹಿತ ಕ್ರೋಡೀಕರಿಸಲಾಯಿತು. ಪ್ರತಿಯೊಂದು ವಿಷಯಗಳ ಕುರಿತು ಗ್ರಾಮ ಸಭೆಗಳಿಂದ ದೊರಕಿದ ವರದಿಯನ್ನು ಪಂಚಾಯತು ಮಟ್ಟದಲ್ಲಿಯೂ ಕ್ರೋಡೀಕರಿಸಲಾಯಿತು. ಆ ಬಳಿಕ ದ್ವಿತೀಯ ಮಾಹಿತಿ ಸಂಗ್ರಹವನ್ನು ಮಾಡಲಾಯಿತು. ಮತ್ತು ಪಂಚಾಯತಿನ ಹಿರಿಯರು, ಅನುಭವಸ್ಥ ರನ್ನು ಭೇಟಿ ಮಾಡಿ ಈ ಪ್ರದೇಶದ ಸಾಮಾಜಿಕ, ಸಾಂಸ್ಕೃತಿಕ, ಚಾರಿತ್ರಿಕ ಹಿನ್ನಲೆಯನ್ನು ಸಂಗ್ರಹಿಸಲಾಯಿತು. ಈ ಎಲ್ಲಾ ಮಾಹಿತಿ ಗಳನ್ನು ಉಪಯೋಗಿಸಿ ಬೆಳ್ಳೂರು ಗ್ರಾಮ ಪಂಚಾಯತಿನ ಅಭಿವೃದ್ಧಿ ವರದಿಯನ್ನು ತಯಾರಿಸಲಾಗಿದೆ. ಈ ಅಭಿವೃದ್ಧಿ ವರದಿಗೆ ಬೆಳ್ಳೂರು ಗ್ರಾಮ ಪಂಚಾಯತಿನ ಸರ್ವತೋಮುಖ ಏಳಿಗೆಯನ್ನು 9ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ನೆರವೇರಿಸಲು ಸಹಾಯ ವಾಗಲೆಂದು ಹಾರೈಸೋಣ.

*****

# 2

# ಬೆಳ್ಳೂರು
# ಗ್ರಾಮ ಪಂಚಾಯತಿನ
# ಸಾಮಾನ್ಯ ಮಾಹಿತಿ

| | | |
|---|---|---|
| ಪಂಚಾಯತಿನ ಹೆಸರು | :- | ಬೆಳ್ಳೂರು ಗ್ರಾಮ ಪಂಚಾಯತು |
| ಪಂಚಾಯತಿನಲ್ಲಿರುವ ಗ್ರಾಮಗಳು | :- | 1 ಬೆಳ್ಳೂರು 2. ನೆಟ್ಟಣಿಗೆ |
| ಬ್ಲೋಕ್ ಪಂಚಾಯತ್ ಡಿವಿಷನ್ | :- | ಬೆಳ್ಳೂರು |
| ಬ್ಲೋಕ್ ಪಂಚಾಯತ್ | :- | ಮಂಜೇಶ್ವರ |
| ತಾಲೂಕು | :- | ಕಾಸರಗೋಡು |
| ಜಿಲ್ಲೆ | :- | ಕಾಸರಗೋಡು |
| ವಿಧಾನ ಮಂಡಲ | :- | ಕಾಸರಗೋಡು |
| ಜಿಲ್ಲಾ ಪಂಚಾಯತು ಡಿವಿಷನ್ | :- | ಕಾರಡ್ಕ |
| ವಿಸ್ತೀರ್ಣ | :- | 16.656 Sq. K. M. |
| ಜನಸಂಖ್ಯೆ | :- | 9,101 |
| ಗಂಡಸರು | :- | 4572 |
| ಹೆಂಗಸರು | :- | 4529 |
| ಪರಿಶಿಷ್ಟ ಜಾತಿ | :- | 1435 |
| ಪರಿಶಿಷ್ಟ ವರ್ಗ | :- | 1110 |
| ವಾರ್ಡುಗಳ ಸಂಖ್ಯೆ | :- | 8 |
| ಪಂಚಾಯತಿನ ಗಡಿಗಳು | :- | ಪೂರ್ವ :- ಕರ್ನಾಟಕ ರಾಜ್ಯ |
| | | ಪಶ್ಚಿಮ :- ಕುಂಬ್ದಾಜೆ ಗ್ರಾಮ |
| | | ಉತ್ತರ :- ಕರ್ನಾಟಕ ರಾಜ್ಯ |
| | | ದಕ್ಷಿಣ :- ಆದೂರು ಗ್ರಾಮ |

| | | |
|---|---|---|
| ಅಧ್ಯಕ್ಷರು | :- | ಶ್ರೀ ಕುಶಲ ಎ. ಕೆ. |
| ಉಪಾಧ್ಯಕ್ಷರು | :- | ಶ್ರೀ ಸತ್ಯನಾರಾಯಣ ಕೆ. |
| ಸ್ಥಾಯಿೂ ಸಮಿತಿ ಅಧ್ಯಕ್ಷರು | :- | ಶ್ರೀ ಚಂದ್ರಶೇಖರ ರಾವ್, ಕಲ್ಲಗ. |
| ಸದಸ್ಯರು | :- | ಶ್ರೀ ಸುಬ್ರಹ್ಮಣ್ಯ ಭಟ್ ಯಸ್. |
| | | ಶ್ರೀ ಕುಞ್ಞಪ್ಪ ನಾಯ್ಕ ಕೆ. |
| ಸದಸ್ಯೆಯರು | :- | ಶ್ರೀಮತಿ ಮಾಲತಿ ಕೆ. |
| | | ಶ್ರೀಮತಿ ಸಾವಿತ್ರಿ ಎ. ಯನ್ |
| | | ಶ್ರೀಮತಿ ವಾರಿಜಾಕ್ಷಿ ಎಚ್. ಜಿ. |

# 3

# ಬೆಳ್ಳೂರು ಗ್ರಾಮ ಪಂಚಾಯತು ಆಡಳಿತ ಸಮಿತಿ ಸದಸ್ಯರು



ಶ್ರೀ ಕುಶಲ ಎ. ಕೆ.
ಅಧ್ಯಕ್ಷರು



ಶ್ರೀ ಸತ್ಯನಾರಾಯಣ ಕೆ.
ಉಪಾಧ್ಯಕ್ಷರು.



ಶ್ರೀ ಚಂದ್ರಶೇಖರ ರಾವ್ ಕಲ್ಲಗ
ಸ್ಥಾಯಿ ಸಮಿತಿ ಅಧ್ಯಕ್ಷರು.



ಶ್ರೀ ಸುಬ್ರಹ್ಮಣ್ಯ ಭಟ್ ಎಸ್.
ಸದಸ್ಯರು.



ಶ್ರೀ ಕುಞ್ಞಪ್ಪ ನಾಯ್ಕ ಕೆ.
ಸದಸ್ಯರು.



ಶ್ರೀಮತಿ ಮಾಲತಿ ಕೆ.
ಸದಸ್ಯೆ



ಶ್ರೀಮತಿ ಸಾವಿತ್ರಿ ಎ. ಎಸ್.
ಸದಸ್ಯೆ



ಶ್ರೀಮತಿ ಪಾರಿಜಾಕ್ಷಿ ಎಚ್. ಜೆ.
ಸದಸ್ಯೆ

# 4
# ಸಾಮಾಜಿಕ
## ಮತ್ತು
# ಸಾಂಸ್ಕೃತಿಕ ಚರಿತ್ರೆ

ಬೆಳ್ಳೂರು ಗ್ರಾಮ ಪಂಚಾಯತ್ ಕ್ಷೇತ್ರವು ಕೇರಳ ರಾಜ್ಯದ ಗಡಿಯಲ್ಲಿ ನೆಟ್ಟಣಿಗೆ ಮತ್ತು ಬೆಳ್ಳೂರು ಗ್ರಾಮಗಳನ್ನೊಳಗೊಂಡು ಕಂಗೊಳಿಸುವ ಸಮೃದ್ಧಕ್ಷೇತ್ರ. ಈ ಪ್ರದೇಶಕ್ಕೆ ತನ್ನದೇ ಆದ ಸಾಮಾಜಿಕ, ಸಾಂಸ್ಕೃತಿಕ ಹಿನ್ನೆಲೆಯಿದೆ. ಈ ಎರಡೂ ಗ್ರಾಮಗಳು ಎಲ್ಲಾ ವಿಧಗಳಲ್ಲೂ ಒಡಹುಟ್ಟಿದ ಸಹೋದರರಂತೆ ಬೆಳೆದು ಬಂದವುಗಳು. ಪೂರ್ವೋತ್ತರ ಭಾಗಗಳಿಂದ ಕರ್ನಾಟಕ ರಾಜ್ಯದ ಪುತ್ತೂರು ತಾಲೂಕು ಆವರಿಸಿಕೊಂಡಿದ್ದರೆ, ದಕ್ಷಿಣದ ಭಾಗಕ್ಕೆ ಕಾಸರಗೋಡಿನ ಕಾರಡ್ಕ ಪಂಚಾಯತ್, ಪಶ್ಚಿಮಕ್ಕೆ ಕುಂಬ್ಡಾಜೆ ಮತ್ತು ಎಣ್ಮಕಜೆ ಪಂಚಾಯತಿನ ಭಾಗಗಳು ಆವರಿಸಿಕೊಂಡಿವೆ. ಹಲವು ಜಾತಿ ಮತ ಪಂಗಡಗಳ ಸಂಪ್ರದಾಯಗಳ, ಭಾಷೆಗಳ ಜನರಿಂದ ತುಂಬಿಕೊಂಡಿದೆ.

ಕನ್ನಡ, ತುಳು, ಮಲೆಯಾಳ, ಕೊಂಕಣಿ, ಮರಾಠಿ ಎಂಬ ಹಲವು ಭಾಷೆಗಳು ಈ ಪ್ರದೇಶದಲ್ಲಿದ್ದರೂ, ವ್ಯಾವಹಾರಿಕವಾಗಿ ಕನ್ನಡವೇ ಪ್ರಧಾನ. ಬಂಟ, ಮಣಿಯಾಣಿ, ಮರಾಠಿ, ಮೂಲ್ಯ (ಕುಲಾಲ), ಮಾಪಿಳ್ಳೆ, ಶಿವಳ್ಳಿ, ವಿಶ್ವಕರ್ಮ, ಹವ್ಯಕ, ಕರ್ಹಾಡ, ಸ್ಥಾನಿಕ, ಕೊಂಕಣಿ, ಗೌಡ, ಮೊಗೇರ ಮೊದಲಾದ ಜಾತಿಗಳ ಜನರು ಇಲ್ಲಿದ್ದಾರೆ. ಹಿಂದೂ ಮುಸ್ಲಿಂ ಎಂಬ ಎರಡು ಮತಗಳು ಪ್ರಧಾನ. ಕ್ರಿಶ್ಚಿಯನ್ ಮತದವರು ಇಲ್ಲಿ ಈಗ ವಲಸೆ ಬಂದು ನೆಲೆಸಿರುವರು. ಎಲ್ಲಾ ಮತಧರ್ಮದವರು, ಜಾತಿ, ಭಾಷೆಯವರು ಪರಸ್ಪರ ಅನ್ಯೋನ್ಯರಾಗಿದ್ದು, ಸಹಕಾರದಿಂದಿರುವುದು ಈ ನೆಲದ ವಿಶೇಷತೆ. ಭತ್ತ, ಅಡಿಕೆ, ತೆಂಗು, ಬಾಳೆ - ಪ್ರಧಾನ ಬೆಳೆ. ರಬ್ಬರು ಕೃಷಿ ಈಗ ಹಬ್ಬುತ್ತಾ ಇದೆ. ಗೆಣಸು, ಹೆಸರು, ಉದ್ದು ಮತ್ತು ಹುರುಳಿಗಳನ್ನು ಉಪಬೆಳೆಯಾಗಿ ಇಲ್ಲಿ ಬೆಳೆಸುತ್ತಿದ್ದರು.

ಅಂಬೆಗಾಲನ್ನಿಕ್ಕಿ ಅಭಿವೃದ್ಧಿಯ ಪಥದೆಡೆಗೆ ಸಾಗುತ್ತಿರುವ ಈ ಪ್ರದೇಶದ ಪೂರ್ವಕಾಲದ ಸ್ಥಿತಿಗತಿಯನ್ನು ಕೊಂಚ ಅವಲೋಕಿಸಬೇಕಾಗಿದೆ. ಸುಮಾರು ಇಪ್ಪತ್ತೈದು ವರ್ಷಗಳ ಹಿಂದಕ್ಕೆ ನಾವು ಹೋದರೆ ಈ ಪ್ರದೇಶವು ಎಲ್ಲಾ ಪ್ರಾಥಮಿಕ ಅವಶ್ಯಕತೆಗಳಿಂದ ವಂಚಿತವಾಗಿತ್ತು. ಒಂದೇ ಒಂದು ವಾಹನವು ಈ ಪ್ರದೇಶಕ್ಕೆ ಪ್ರವೇಶಿಸಿದ್ದಿರಲಾರದು. ರಸ್ತೆ, ಆಸ್ಪತ್ರೆ, ಹೈಸ್ಕೂಲ್ ಮೊದಲಾದ ಪ್ರಾಥಮಿಕ ಅವಶ್ಯಕತೆಗಳೇ ಇರಲಿಲ್ಲ. ಪೇಟೆ ಪಟ್ಟಣಗಳ ಗಾಳಿ ಸೋಂಕಿರಲಿಲ್ಲ. 1940ರ ಮೊದಲು ಗುರುಮಠಗಳಂಥ ಶಾಲೆಗಳು ಪಳ್ಳಪ್ಪಾಡಿ, ಐತ್ತನಡ್ಕ, ಕಿನ್ನಿಂಗಾರು, ಕುಳ ಈ ಸ್ಥಳಗಳಲ್ಲಿ ಹುಟ್ಟಿಕೊಂಡು, ಮರೆಯಾಗುತ್ತಾ ನಡೆಯುತ್ತಿದ್ದುವೆಂದು ಹೇಳುತ್ತಾರೆ. ಈ ಶಾಲೆಗಳು ಊರ ಶ್ರೀಮಂತರ ಕೃಪಾ ಕಟಾಕ್ಷದಿಂದ ನಡೆಯುತ್ತಿದ್ದುವೆಂದೂ, ಹೆಚ್ಚಿನ ಅಕ್ಷರ ಜ್ಞಾನ, ಅನುಭವಗಳುಳ್ಳ ಗುರುಗಳು ಇಲ್ಲಿ ಪಾಠ ಹೇಳುತ್ತಿದ್ದರೆಂದೂ, ವಿದ್ಯಾರ್ಥಿಗಳು ತಂದು ಕೊಡುವ ತಿಂಡಿ, ದವಸಧಾನ್ಯ, ಕಾಣಿಕೆಗಳು ಅವರಿಗೆ ಪ್ರತಿಫಲವೆಂದೂ ತಿಳಿಯುತ್ತದೆ. ಹೈಸ್ಕೂಲ್, ಕಾಲೇಜಿನ ಮೆಟ್ಟಲು ಹತ್ತಿದವರು ನಲವತ್ತು ವರ್ಷಗಳ ಹಿಂದೆ ಇಲ್ಲಿ ಒಬ್ಬನೇ ಒಬ್ಬ ಸಿಗಲಾರನು. ನೆಟ್ಟಣಿಗೆ ಗ್ರಾಮದಲ್ಲಿ ಬೆಳೆರಿ, ಬೆಳ್ಳೆಚ್ಚಾಲು, ಕುಳೂರು ಮತ್ತು ಕೈಪಂಗಳ ಎಂಬ ನಾಲ್ಕು ಹವ್ಯಕ ಮನೆತನಗಳು, ಕಲ್ಲಗ ಮತ್ತು ಮೂಡಸರಿಗೆಯ ಎರಡು ಸ್ಥಾನಿಕ ಮನೆತನಗಳು ಬಜದ ಗುತ್ತು, ದೇವರ ಗುತ್ತು, ಎಡಮುಗರು ಗುತ್ತು, ಪಿಲಿಕದುರು ಕನಕತ್ತೋಡಿ, ಕುಂಜತ್ತೋಡಿ ಎಂಬ ಬಂಟ ಮನೆತನಗಳು ಕುಳ ಮತ್ತು ನಿಡ್ಯಡ್ಕ ಎಂಬ ಮಣಿಯಾಣಿ ಕುಟುಂಬಗಳು ಕಕ್ಕೆಬೆಟ್ಟು ಗೌಡರ ಕುಟುಂಬ ಬಹಳ ಪ್ರಸಿದ್ಧಿಯನ್ನು ಪಡೆದವುಗಳು. ಬೆಳ್ಳೂರಿನ ಮಾಲೆಂಕಿಯ ಶಿವಳ್ಳಿ ಬ್ರಾಹ್ಮಣ ಕುಟುಂಬ, ಅಡ್ವಳದ ಬಲ್ಲಾಳರ ಬೀಡುಗಳು ಪ್ರಸಿದ್ಧವಾಗಿದ್ದವು.

ಪುರಾತನ ಕಾಲದಿಂದಲೇ ಪ್ರಸಿದ್ಧವಾದ ನೆಟ್ಟಣಿಗೆ ಶ್ರೀ ಮಹಾಲಿಂಗೇಶ್ವರ ದೇವಸ್ಥಾನ, ಬೆಳ್ಳೂರಿನ ಶ್ರೀ ಗೋಪಾಲಕೃಷ್ಣ ದೇವಸ್ಥಾನ ಮತ್ತು ಕಲ್ಲೇರಿ ಮೂಲೆ ಶ್ರೀ ವಿಷ್ಣುಮೂರ್ತಿ ದೇವಸ್ಥಾನಗಳು ಇಲ್ಲಿ ನೆಲೆಸಿಕೊಂಡಿದೆ . ಪನೆಯಾಲದಲ್ಲೊಂದು ಶಾಸ್ತಾರ ದೇಗುಲವೂ ಇದೆ.

ನೆಟ್ಟಣಿಗೆ ಶ್ರೀ ಮಹಾಲಿಂಗೇಶ್ವರ ದೇವಾಲಯವು ಜೀರ್ಣೋದ್ಧಾರಗೊಂಡು ಉತ್ತಮವಾಗಿದೆ. ವರ್ಷಂಪ್ರತಿ ಕುಂಭಮಾಸದ ಪೌರ್ಣಮಿ ಮೊದಲ್ಗೊಂಡು ಐದು ದಿನಗಳ ಜಾತ್ರೆಯು ನಡೆಯುತ್ತದೆ ಮತ್ತು ಪಗ್ಗು 18ಕ್ಕೆ ಎರಡು ದಿನಗಳ ಕಾಲ ಭೂತ ಬಲಿ ಉತ್ಸವವೂ ನಡೆಯುವುದು. ದೇವಾಲಯಕ್ಕೆ ಸಂಬಂಧಿಸಿ ಗುಳಿಗ, ಹುಲಿಭೂತ, ಧೂಮಾವತಿ ಭೂತಗಳಿವೆ. ಈ ದೇವಾಲಯದ ಶಿವಲಿಂಗವನ್ನು ಪುರಾತನ ಕಾಲದಲ್ಲಿ ಖರಾಸುರನು ಪ್ರತಿಷ್ಠಾಪಿಸಿದನೆಂದು ಪ್ರತೀತಿ. ಕಾಶಿಯಿಂದ ಮೂರು ಶಿವಲಿಂಗಗಳನ್ನು ಭೂಮಿಯ ಒಳಭಾಗದಲ್ಲೇ ತಂದು ಸಮೀಪದ "ಚೆಂಡೆತಡ್ಕ" ಎಂಬಲ್ಲಿ ಭೂಮಿಯಿಂದ ಹೊರಬಂದು, ಒಂದನ್ನು ನೆಟ್ಟಣಿಗೆಯಲ್ಲಿ ಪ್ರತಿಷ್ಠಾಪಿಸಿದನೆಂದೂ ಅವನು ಭೂಮಿಯಿಂದ ಹೊರಬಂದ ಜಾಗವೇ ಸ್ವಯಂ ಭೂ ಗುಹೆಯಾಗಿತ್ತೆಂದು ಹೇಳಿಕೆಯಿದೆ. ಈ ಗುಹೆಗೆ ದೇವಾಲಯದ ಹನ್ನೆರಡು ವರ್ಷಗಳಿಗೊಮ್ಮೆ ಹೋಗಿ ಬರುವ ಸ್ವಯಂ ಭೂ ಗುಹಾ ಪ್ರವೇಶೋತ್ಸವ ಅಥವಾ ಜಾಂಬ್ರಿ ಉತ್ಸವ ನಡೆಯುತ್ತದೆ. ಪರಿಶಿಷ್ಟ ಜಾತಿಯ ನಿಟ್ಟೋಣಿ

ಎಂಬ ವ್ಯಕ್ತಿಗೆ ಈ ಲಿಂಗವು ಮೊದಲಾಗಿ ಕಾಣಸಿಕ್ಕಿದುದರಿಂದ ಈ ಪ್ರದೇಶಕ್ಕೆ ನೆಟ್ಟಣಿಗೆ ಎಂಬ ಹೆಸರಾಯಿತೆಂದೂ ಹೇಳುತ್ತಾರೆ. ನಿಟ್ಟೋಣಿಯ ವಂಶದವರು ಇಬ್ಬರು ಇಂದೂ ದೇವಾಲಯದ ಮೂಲದವರು (ಕಾಪಾಡರು) ಆಗಿ ದೇವಸ್ಥಾನದಿಂದಲೇ ಘೋಷಿಸಲ್ಪಡುವರು. ದೇವಾಲಯದ ಸಮೀಪ ಪಡ್ಪೈತಡ್ಕ ಎಂಬಲ್ಲಿ ಹಿಂದೆ ಈ ಪ್ರದೇಶವನ್ನು ಆಳುತ್ತಿದ್ದ ನಾಯರ್ ಬಲ್ಲಾಳರ ಅರಮನೆಯ ಕುರುಹುಗಳು ಕಂಡುಬರುತ್ತವೆ. ಈ ಪ್ರದೇಶ ಹಳೆಯ ಕಾಲದ ಬಾವಿಗಳ, ಕೆರೆಗಳ ಮತ್ತು ಕಟ್ಟೆಗಳ ಕುರುಹುಗಳು ಅಲ್ಲಲ್ಲಿ ಕಂಡು ಬರುತ್ತವೆ. ಬೆಳ್ಳೂರಿನ ಬಸ್ತಿಗುಡ್ಡೆ, ನೆಟ್ಟಣಿಗೆಯ ಬೆಳೆರಿ ಇಂತಹ ಗೆಲವು ಉದಾಹರಣೆಗಳು. ನೆಟ್ಟಣಿಗೆ ದೇವಾಲಯಕ್ಕೆ ಸಂಬಂಧಿಸಿ ಧೂಮಾವತಿ ಭೂತದ, ಆರಾಟುಕಡವಿನ, ಸ್ವಯಂ ಭೂ ಗುಹೆಯ ದಂತ ಕಥೆಗಳು ಪ್ರಚಲಿತವಾಗಿವೆ. ದೇವರ ಸಂಬಂಧವಾಗಿ ಬಂದ ದೇವರ ಗುಂಡಿ, ದೇವಸ್ಯ, ಕಟ್ಟೆ ಎಂಬ ಹೆಸರಿನ ಸ್ಥಳಗಳು ಇಲ್ಲಿವೆ.

ಬೆಳ್ಳೂರು ಶ್ರೀ ಗೋಪಾಲಕೃಷ್ಣ ದೇವಾಲಯವು ಜೀರ್ಣವಾಗಿ ಪಾಳು ಬಿದ್ದಿದೆ. ಅಲ್ಲಿಯ ದೇವರ ಮೂರ್ತಿ ಸಮೀಪದ ಹಾಳು ಬಾವಿಯಲ್ಲಿ ಇತ್ತೀಚೆಗೆ ದೊರೆತಿದೆ ಇದರಿಂದಾಗಿ ಈ ದೇವಸ್ಥಾನದ ಪ್ರಧಾನ ದೇವರು ಮಹಾವಿಷ್ಣುವೆಂದು ತಿಳಿದುಬಂತು. ಈ ದೇವಾಲಯದ ಜೀರ್ಣೋದ್ಧಾರಕ್ಕಾಗಿ ಸಮಿತಿಯೊಂದು ರೂಪುಗೊಂಡು ಕೆಲಸವು ಮಂದಗತಿಯಲ್ಲಿ ಆರಂಭವಾಗಿದೆ. ಈ ದೇವಾಲಯದ ಬಗ್ಗೆಯೂ ಹಲವು ದಂತ ಕತೆಗಳಿವೆ. ಬೆಳ್ಳೂರಿನ ಕಲ್ಲೇರಿ ಮೂಲೆ ಎಂಬಲ್ಲಿ ಶ್ರೀ ವಿಷ್ಣು ಮೂರ್ತಿದೇವಾಲಯವು ಓಲೆ ಸರಿ ಮನೆಯವರಿಂದ ಸ್ಥಾಪಿತಗೊಂಡು ಮುನ್ನಡೆದಿದೆ. ಪನೆಯಾಲದಲ್ಲಿ ಶಾಸ್ತಾರ ದೇವರ ಮಂದಿರವಿದೆ.

ಭೂತಾರಾಧನೆಯು ಈ ಪ್ರದೇಶದಲ್ಲಿ ಸಾಕಷ್ಟು ಹರಡಿಕೊಂಡಿದೆ. ಗುಳಿಗ, ಹುಲಿಭೂತ, ವಿಷ್ಣುಮೂರ್ತಿ, ಧೂಮಾವತಿ, ಪಂಜುರ್ಲಿ, ಬೀರಣ್ಣಾಳ್ವ, ರಕ್ತೇಶ್ವರಿ ವಯನಾಡ್ ಕುಲನ್‌ದೈವ ಮೊದಲಾದುವು ಪ್ರಸಿದ್ಧವಾದುವುಗಳು. ಕುಳದ ಶ್ರೀ ವಿಷ್ಣುಮೂರ್ತಿ ಒತ್ತೆ ಕೋಲವು ಈ ಪ್ರದೇಶದ ಒಳಗೂ, ಹೊರಗೂ ಪ್ರಸಿದ್ಧವಾದುದು. ಇಲ್ಲಿ ನಡೆಯುವ ಭೂತದ ಕೆಂಡ ಸೇವೆಯನ್ನು ನೋಡುವುದಕ್ಕೆ ಊರ ಪರವೂರ ಜನಸಾಗರವೇ ಬಂದು ಸೇರುತ್ತದೆ. ಕಿನ್ನಿಂಗಾರು, ನೆಟ್ಟಣಿಗೆ ಎಡಮೊಗರು ಎಂಬ ಸ್ಥಳಗಳಲ್ಲೂ ವಿಷ್ಣುಮೂರ್ತಿ ದೈವಕ್ಕೆ ಕೆಂಡ ಸೇವೆ ನಡೆಯುತ್ತದೆ. ಕಲ್ಲಗ, ಬೆಳ್ಳೂರು, ಕಿನ್ನಿಂಗಾರು, ಅಡ್ವಳ, ಎಡಮುಗರು, ಬೆಳೆರಿ ಪೆರ್ವತ್ತೋಡಿ, ಮುಕ್ಕುಂಜ ಓಲೆಸರಿ ಮೊದಲಾದೆಡೆಗಳಲ್ಲಿ ಭೂತಸ್ಥಾನಗಳಿದ್ದು, ಕೆಲವೆಡೆ ಭೂತಕ್ಕೆ ಕೋಲವೂ, ಉಳಿದೆಡೆ ತಂಬಿಲಗಳೂ ಜರಗುತ್ತವೆ. ಕಲ್ಲಗದಲ್ಲಿ ವರ್ಷಕ್ಕೊಮ್ಮೆ ರಕ್ತೇಶ್ವರಿಗೆ ಕೋಲವು ನಡೆಯುತ್ತದೆ. ಮುಕ್ಕುಂಜದಲ್ಲಿ ನಡೆಯುವ ಕಿನ್ನಿಮಾಣಿ ಪೂಮಾಣಿ ದೈವದ ಹಾಗೂ ಇತರ ದೈವಗಳ ಕೋಲವು ಪ್ರಸಿದ್ಧವಾದುದು. ಜಾತ್ರೆ ಕಳೆದು ನೆಟ್ಟಣಿಗೆಯಲ್ಲಿ ಹುಲಿಭೂತ ಕೋಲವು ನಡೆಯುತ್ತದೆ. ಅಡ್ವಳದ ಬಲ್ಲಾಳರ ಬೀಡಿನವರು ನಡೆಸುವ ಭೂತದ ಕೋಲವೂ ವಿಶೇಷವಾದುದು. ಮಳೆಗಾಲದ ಆಟಿ ತಿಂಗಳಲ್ಲಿ ಅಲ್ಲಲ್ಲಿ ಗುಳಿಗ ಕೊರತಿನ ಕೋಲಗಳು ನಡೆಯುತ್ತದೆ. ಭೂತದ ಮೆರವಣಿಗೆ ನಡೆಯುವ ಜಾಗ ಓಲೆಸರಿ ಯಾಯ್ತೆಂದು ಹೇಳಲಾಗುತ್ತದೆ. ಈ ಎಲ್ಲಾ ಕಾರಣಗಳಿಂದ ನೆಟ್ಟಣಿಗೆ, ಬೆಳ್ಳೂರು ಗ್ರಾಮಗಳು ದೇವರ ಹಾಗೂ ದೈವಗಳ ಆವಾಸ ಸ್ಥಾನವಾಗಿ ಪುನೀತವಾಗಿದೆ. ಅತೀ ಹಿಂದಿನ ಕಾಲದಿಂದಲೇ ಪ್ರಸಿದ್ಧವಾದ ಇಲ್ಲಿನ ಕೆಲವು ಕಾರಣಿಕ ಕ್ಷೇತ್ರಗಳು ಇಂದು ಸಂಪೂರ್ಣವಾಗಿ ನಶಿಸಿಹೋಗಿದ್ದು ಅದರ ಕುರುಹುಗಳನ್ನು ಈಗಲೂ ಇಲ್ಲಿ ಕಾಣಬಹುದು. ಆರನೇ ವಾರ್ಡಿನ ಎಡೋಣಿಯ ಪೂರ್ವಭಾಗದ ಸ್ಥಳ ಪೆರ್ನಪದವು (ಅಂಬಲಕೋಟೆ) ಪೂಮಾಣಿ ಕಿನ್ನಿಮಾಣಿ ದೆವ್ವಗಳ ಸ್ಥಾನವಾಗಿತ್ತೆಂಬ ಪ್ರತೀತಿ ಇದೆ. ಆಜಡ್ಕ ಗೌಡ ಮನೆತನದ ಪೂರ್ವಜರು ಇಲ್ಲಿ ಆರಾಧನೆ ನಡೆಸಿಕೊಂಡು ಬರುತ್ತಿದ್ದರೆಂದು ಇಲ್ಲಿನ ಹಿರಿಯರ ಮಾತಾಗಿದೆ. ಅಂತೆಯೇ ಎರಡನೇ ವಾರ್ಡಿಗೆ ಸಂಬಂಧಿಸಿದಂತೆ ಬೈರತ್ತಡ್ಕ ಎಂಬಲ್ಲಿ ವಿಶ್ವಕರ್ಮ ವಂಶಸ್ಥರು ಆರಾಧಿಸಿಕೊಂಡು ಬರುತ್ತಿದ್ದ ಕಾಳಿಕಾದೇವಿ ಬಹು ಕಾರಣಿಕದವಳೆಂದು ಸ್ಥಳೀಯ ಜನರ ಅನಿಸಿಕೆ. ಇದಕ್ಕೆ ಕುರುಹಾಗಿ ನಶಿಸಿಹೋದ ಕಟ್ಟಡದ ಅಡಿಭಾಗವನ್ನು ಮಾತ್ರ ಕಾಣಬಹುದಾಗಿದೆ.

ಆಟಿ ಕಳಂಜ, ಸೋಣೆಜೋಗಿ, ಬೇಡ, ಮರ್ದ, ಕನ್ಯಾಪುಗಳು ಜಾನಪದ ಶೈಲಿಯ ಕಿರುಭೂತಗಳು ಇವುಗಳ ಪಾಡ್ದನ, ನೃತ್ಯಗಳು, ಆರಾಧನೆಗಳು ನಡೆಯುತ್ತವೆ. ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸಂಬಂಧಪಟ್ಟ ಕೆಲವು ಜಾನಪದ ಕುಣಿತಗಳು, ತಾಳ ವಾದ್ಯಗಳು ಹಿಂದೆ ಇದ್ದು ಜನಪ್ರಿಯವಾಗಿದ್ದುವು. ಈಗ ನಶಿಸಿ ಹೋಗುವ ಸ್ಥಿತಿಯು ಬಂದೊದಗಿದೆ. ಗೋಂದೋಳು ಪೂಜೆ ಹಾಗೂ ಅಂಗಾರೆ ಪೂಜೆಗಳು ಈ ಪ್ರದೇಶದ ಮರಾಠಿ ಜನರ ದುರ್ಗಾ ದೇವಿಯ ಆರಾಧನೆ. ದರ್ಶನ, ನೃತ್ಯಗಳು ಪೂಜೆಯ ಸಂದರ್ಭದಲ್ಲಿ ನಡೆಯುತ್ತವೆ. ಪರಿಶಿಷ್ಟ ಜಾತಿಯವರಿಗೆ ಅವರದೇ ಆದ ಭೂತಸ್ಥಾನಗಳಿದ್ದು, ದರ್ಶನ ಹರಕೆ, ತಂಬಿಲಗಳು ನಡೆಯುತ್ತವೆ ಕೊರಗತನಿಯ ಎಂಬ ಭೂತವನ್ನು ಅವರು ವಿಶೇಷವಾಗಿ ನಂಬುತ್ತಾರೆ. ಪರಿಶಿಷ್ಟ ಜನಾಂಗದವರು ಕಲ್ಲುರ್ಟಿ ಭೈರವ ಭೂತಗಳನ್ನು ಪೂಜಿಸುತ್ತಾರೆ.

ನೆಟ್ಟಣಿಗೆಯಲ್ಲಿ ಜಾತ್ರೆ ಕಳೆದು ಮರುದಿನದಿಂದ ಐದು ದಿನಗಳ ಕೋಳಿ ಅಂಕ ನಡೆಯುತ್ತಿತ್ತು. ಮುಕ್ಕುಂಜದಲ್ಲೂ ನಡೆಯುತ್ತಿತ್ತು. ಸಂಕ್ರಮಣ, ಅಮಾವಾಸ್ಯೆಗಳಂದೂ ಅಲ್ಲಲ್ಲಿ ಕೋಳಿ ಅಂಕಗಳು ನಡೆಯುತ್ತಿದ್ದವು. ಕುಳಪಳ್ಳಪ್ಪಾಡಿ, ಬಜ, ಮಾಲೆಂಕಿ ಮೊದಲಾದೆಡೆ ಕೋಣಗಳನ್ನು ಓಡಿಸುವ ಕಂಬಳವು ನಡೆದು ಜನರನ್ನು ಆಕರ್ಷಿಸುತ್ತಿದ್ದವು. ಗೆದ್ದ ಕೋಣಗಳಿಗೆ ಬಹುಮಾನಗಳನ್ನು ನೀಡುವ ಪರಿಪಾಠವಿತ್ತು. ಪರಿಶಿಷ್ಟ ಜಾತಿಯವರ ಮದುವೆ ಸಮಾರಂಭಗಳಲ್ಲಿ, ಸುಗ್ಗಿಯ ಸಂತೋಷ ಕೂಟಗಳಲ್ಲಿ ದುಡಿ ಎಂಬ ವಾದ್ಯಗಳನ್ನು ಲೇ, ಲೇ, ಲೇ, ಎಂದು ಹಾಡುತ್ತಾ ಕುಣಿದು ನಲಿಯುತ್ತಿದ್ದರು. ದುಡಿಯ ಕುಣಿತದಲ್ಲಿ ಗಂಡಸರು, ಹೆಂಗಸರು, ಹಿರಿಯರು, ಮಕ್ಕಳು ಎಲ್ಲರೂ ಭಾಗವಹಿಸಿ ನಲಿಯುತ್ತಿದ್ದರು. ಪಾಡ್ದನಗಳು, ಸೋಭಾನೆ ಹಾಡುಗಳು ಹೆಚ್ಚಿನವರ ಬಾಯಲ್ಲಿ ಸುಳಿದಾಡುತ್ತಿದ್ದವು. ಈ ಗ್ರಾಮದ ಸಮಗ್ರ ಜಾನಪದ ಸಂಪತ್ತನ್ನು, ಖ್ಯಾತ ಜಾನಪದ ಸಂಶೋಧಕರೂ, ಕವಿಗಳು, ರಾಷ್ಟ್ರ ಪ್ರಶಸ್ತಿ ವಿಜೇತ ಅಧ್ಯಾಪಕರೂ ಆಗಿರುವ ಶ್ರೀ ವೆಂಕರಾಜ ಪುಣಿಂಚಿತ್ತಾಯರು ಸಂಗ್ರಹಿಸಿದ್ದಾರೆ. ಅವರಿಗೆ ಲಭಿಸಿದಷ್ಟು ಆಕಾರಗಳನ್ನು ಆಡಿಯೋ ಮತ್ತು ವೀಡಿಯೋ ರೂಪದಲ್ಲಿ ಸಂಗ್ರಹಿಸಲಾಗಿದ್ದು ಅವೆಲ್ಲವೂ ಈಗ ಉಡುಪಿಯ ಜಾನಪದ ರಂಗ ಕಲೆಗಳ ಅಧ್ಯಯನ ಕೇಂದ್ರದಲ್ಲಿ ದೇಶವಿದೇಶಗಳ ಸಂಶೋಧಕರಿಗಾಗಿ ತೆರವಾಗಿವೆ.

ಪಳ್ಳಪ್ಪಾಡಿಯ ಜುಮಾ ಮಸೀದಿಯು ಏಕೈಕ ಹಳೆಯ ಕಾಲದ ಮಸೀದಿಯಾಗಿದೆ. ಹಿಂದೆ ಮುಸಲ್ಮಾನರ ಸಂಖ್ಯೆ ಕಡಿಮೆಯಾಗಿದ್ದುದರಿಂದ ಇದೊಂದೇ ಮಸೀದಿಯು ಸಾಕಾಗುತ್ತಾಯಿತ್ತು. ವರ್ಷಕ್ಕೊಮ್ಮೆ ಹರಕೆ ಕೂಟಗಳು, ಊರೂಸು ನೇರ್ಚೆಗಳು ನಡೆಯುತ್ತವೆ.

ಬೆಳ್ಳೂರು ಪಂಚಾಯತ್ ಪ್ರದೇಶದಲ್ಲಿ ನೋಡುವ ಜಾಗಗಳು, ವಿಶೇಷತೆಗಳು ಏನೇನಿವೆ ಹೊರನಾಡಿನ ಜನರನ್ನು ತನ್ನೆಡೆಗೆ ಸೆಳೆಯುವ ಚಾರಿತ್ರಿಕ ವಿಶೇಷಗಳು ಇಲ್ಲಿ ಕಾಣ ಸಿಗುವುದಿಲ್ಲ. ಇಲ್ಲಿನ ಪ್ರಕೃತಿ ಸೌಂದರ್ಯವೇ ಮನಸೆಳೆಯು ವಂತದವುಗಳು. ಹೆಚ್ಚಿನ ಕಾಡು, ಮರಗಳು, ಇಂದು ಬರಿದಾಗಿ ಹೋದರೂ, ಉತ್ತರ ದಿಕ್ಕಿನುದ್ದಕ್ಕೂ ಹಬ್ಬಿ ಕಂಗೊಳಿಸುವ ಬಂಟಾಜೆ ರಕ್ಷಿತಾರಣ್ಯವು ಮನಸ್ಸಿಗೆ ಮುದವನ್ನು ನೀಡುತ್ತದೆ. ನೆಲಪ್ರದೇಶವು ಏರಿಳಿತದ ಗುಡ್ಡ ಬೆಟ್ಟಗಳಿಂದ ಕೂಡಿದೆ. ಹೊಸತಾಗಿ ರೂಪಿತವಾದ ರಸ್ತೆಗಳು ಓರೆ ಕೋರೆಯಾಗಿ, ಏರಿ ಇಳಿದು ಸಾಗುತ್ತವೆ. ಬಜ, ಕೊಲ್ಯ, ಕಜೆ, ಈದು ಮೂಲೆ ಸ್ಥಳಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬುಡಕಟ್ಟು ಜನಾಂಗದವರೇ ವಾಸಿಸುತ್ತಾರೆ. ಕಜೆ ಸಮೀಪ ರಕ್ಷಿತಾರಣ್ಯದ ಬುಡದಲ್ಲಿ ಬಾವಲಿಗುಡಿ ನೋಡುವ ಸ್ಥಳ. ಈ ಗುಹೆಯೊಳಗೆ ನೂರಾರು ಬಾವಲಿಗಳು ವಾಸ್ತವ್ಯವಿದ್ದು ಸದ್ದುಗದ್ದಲದಿಂದ ಓಡಾಡುತ್ತಿರುತ್ತವೆ. ನಾವೂ ಈ ಗುಹೆಗೆ ಇಳಿಯುವ ಸಾಹಸ ಮಾಡಬಹುದು. ಒಳಗೆ ವಿಶಾಲ ಜಾಗವಿದ್ದು, ಗಬ್ಬು ವಾಸನೆ ಹರಡಿದೆ. ಊರೊಳಗೆ ಉಂಟಾಗುವ ಮನಸ್ತಾಪಗಳು, ಆಸ್ತಿ ವಿವಾದಗಳು ಬೆಳೆದು ಜಟಿಲವಾಗುವ ಮೊದಲೇ ಊರಿನ ಹಿರಿಯರು ಅವರನ್ನು ಕರೆಸಿ, ಪಂಚಾಯತಿಗೆ ನಡೆಸಿ, ಇತ್ತಂಡಗಳಿಗೆ ಹಿತವಾಗುವಂತೆ ಮುಗಿಸುತ್ತಿದ್ದರು. ಕೋರ್ಟು ಕಚೇರಿಗಳನ್ನು ಕಾಣುವ ಪ್ರಸಂಗವೇ ಬರುತ್ತಿರಲಿಲ್ಲ. ಅಧಿಕಾರಿ ವರ್ಗದವರಿಗೆ, ದಾರಿ ಹೋಗುವವರಿಗೆ ಅನ್ನದಾನ ಮಾಡುವ ಸತ್ಕರಿಸುವ ಶ್ರೀಮಂತ ಹೃದಯಿಗಳು ಈ ನೆಲದಲ್ಲಿದ್ದರು.

ಮೂರು ದಶಕಗಳಿಂದೀಚೆ ನಾಲ್ಕು ಪಂಚಾಯತ್‌ಗಳ ಆಡಳಿತ ಅವಧಿಯಲ್ಲಿ ಈ ಪ್ರದೇಶವು ಅಭಿವೃದ್ಧಿಯ ಕಡೆಗೆ ಮುನ್ನಡೆದಿದೆ. ಕೆಲವು ಸಂಘ ಸಂಸ್ಥೆಗಳೂ ಅಭಿವೃದ್ಧಿಗಾಗಿ ಶ್ರಮಿಸಿದುವು. ಆಟೋಟ ಸ್ಪರ್ಧೆಗಳನ್ನು ನೆರವೇರಿಸಲು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲು ಯುವ ವೇದಿಕೆಗಳು ನೆರವಾದುವು. ಆರೇಳು ವರ್ಷಗಳ ಕಾಲ ಈ ಪ್ರದೇಶದಲ್ಲಿ ನಡೆದ ಕೇರಳೋತ್ಸವ ಆಚರಣೆಯ ಸವಿನೆನಪು ಜನರ ಮನದಿಂದ ಮಾಸಿಹೋಗದು. ಹಲವು ಸ್ಪರ್ಧೆಗಳಲ್ಲಿ ಜಿಲ್ಲಾ ಮಟ್ಟದ ಹಾಗೂ ರಾಜ್ಯ ಮಟ್ಟದ ಬಹುಮಾನಗಳನ್ನೂ ಪಡೆದು ಇಲ್ಲಿಯ ಸ್ಪರ್ಧಿಗಳು ಶಹಬಾಸ್ ಎನ್ನಿಸಿಕೊಂಡರು.

ಈ ಪ್ರದೇಶದ ಜನರ ಭಾಷಾಭಿಮಾನ, ದೇಶಾಭಿಮಾನ ವಿಶೇಷವಾದುದು. ಭಾಷೆಗೆ ನಾಡಿಗೆ ಬರುವ ಯಾವುದೇ ಅನ್ಯಾಯವನ್ನು ಸಹಿಸರು ಹೆಚ್ಚಿನ ಜನರ ಆಡುಭಾಷೆ, ವ್ಯಾವಹಾರಿಕ ಭಾಷೆ, ಮಾತೃಭಾಷೆ ಕನ್ನಡವೇ ಆಗಿದ್ದರೂ 1956ರಲ್ಲಿ ಈ ಪ್ರದೇಶವನ್ನು ಅನ್ಯಾಯವಾಗಿ ಕೇರಳದೊಂದಿಗೆ ಸೇರಿಸಿದಾಗ ಇಲ್ಲಿಯ ಜನರೂ ಒಗ್ಗಟ್ಟಾಗಿ ಅನ್ಯಾಯವನ್ನು ಪ್ರತಿಭಟಿಸಿದರು. ಮೆರವಣಿಗೆಯನ್ನು ನಡೆಸಿ, ನಿರ್ಣಯಗಳನ್ನು ತಿಳಿಸಿ, ಅಸಮಾಧಾನವನ್ನು ವ್ಯಕ್ತಪಡಿಸಿದರು. ಮಹಾಜನ ಕಮಿಶನ್‌ನ ಮುಂದೆ ತಮಗಾದ ಅನ್ಯಾಯಕ್ಕೆ ಕೊರಗಿ ಸಾಕ್ಷಿ ನುಡಿದರು. ನಾಡಿಗೆ, ಭಾಷೆಗೆ ಅನ್ಯಾಯವಾದಾಗ ಪ್ರತಿಭಟಿಸುವ ವೀರರು ನಮ್ಮ ಪಂಚಾಯತ್‌ನಲ್ಲಿದ್ದಾರೆ ಎಂದು ತೋರಿಸಿ ಕೊಟ್ಟರು.

ಸಾಂಸ್ಕೃತಿಕ, ಸಾಹಿತ್ಯ, ಕಲಾಕ್ಷೇತ್ರಗಳಿಗೆ ಈ ನೆಲದ ಕೊಡುಗೆ ಕಡಿಮೆಯಾದುದಲ್ಲ. ಯಕ್ಷಗಾನ ಕಲೆಯಲ್ಲಿ ನುರಿತ ಕಲಾಗಾರರುಈ ಪ್ರದೇಶದಲ್ಲಿ ಆಗಿಹೋಗಿದ್ದಾರೆ. ಇಂದೂ ಇದ್ದಾರೆ. 1950ರ ಮೊದಲು ನೆಟ್ಟಣಿಗೆ ಶ್ರೀಮಹಾಲಿಂಗೇಶ್ವರ ಯಕ್ಷಗಾನ ಮೇಳ ಸ್ಥಾಪನೆಗೊಂಡು ಪ್ರದರ್ಶನಗಳನ್ನು ನಾಡಿನುದ್ದಕ್ಕೂ ನಡೆಸುತ್ತಿತ್ತು.

ಅರ್ಥಗಾರಿಕೆ, ಹಾಡುಗಾರಿಕೆ, ಕುಣಿತ, ಹಿಮ್ಮೇಳಗಳಿಗೆ ಅಭ್ಯಾಸ ಮಾಡುವ ತರಗತಿಗಳು ನಡೆಸಲ್ಪಡುತ್ತಿದ್ದವು. ಈಗಲೂ ನಡೆಸಲ್ಪಡುತ್ತಿದೆ. ನಾಡಿನ ಪ್ರಸಿದ್ಧ ಪತ್ರಿಕೆಗಳಲ್ಲಿ, ಪುಸ್ತಕಗಳಲ್ಲಿ ಪಠ್ಯಪುಸ್ತಕಗಳಲ್ಲಿ ನೆಲದ ಸಾಹಿತಿಗಳ ಕವಿತೆಗಳು, ಲೇಖನಗಳು, ಸಂಶೋಧನೆಗಳು ಬೆಳಕು ಕಂಡಿವೆ. ಈ ನಾಡಿನ ವಿದ್ಯಾವಂತರು ಡಾಕ್ಟರಾಗಿ, ಎಂಜಿನಿಯರರಾಗಿ, ಹಲವು ಕ್ಷೇತ್ರಗಳಲ್ಲಿ ಪ್ರತಿಭಾ ವಂತರಾಗಿ ದೇಶದ ಒಳಗೂ ಹೊರಗೂ ಶೋಭಿಸುತ್ತಿರುವುದು. ಹೆಮ್ಮೆಯೆನಿಸಿದೆ.

ಸುಮಾರು ಇಪ್ಪತ್ತೈದು ಮೂವತ್ತು ವರ್ಷಗಳ ಹಿಂದೆ ಪ್ರಾಥಮಿಕ ಅವಶ್ಯಕತೆಗಳೊಂದೂ ಇಲ್ಲದೆ ಮುಗ್ಧವಾಗಿದ್ದ ಈ ಪ್ರದೇಶವು ಪ್ರಗತಿಯತ್ತ ಅಂಬೆಗಾಲನ್ನಿಕ್ಕಲು ಪ್ರಾರಂಭಿಸಿದೆ. ಬೆಳ್ಳೂರು ಗ್ರಾಮ ಪಂಚಾಯತು ಒಂದು ಆದರ್ಶ, ಪರಿಪೂರ್ಣ, ಸುಖೀ ಪಂಚಾಯತು ಎನ್ನಿಸಲು ಇನ್ನೆಷ್ಟೋ ಪ್ರಗತಿಯನ್ನು ಸಾಧಿಸಬೇಕಾಗಿದೆ. ಸುಮಾರು ಹತ್ತು ಚದರ ಮೈಲುಗಳ ವಿಸ್ತೀರ್ಣವಿರುವ ಈ ಪ್ರದೇಶಕ್ಕೆ ಶಿಕ್ಷಣ, ಸಾರಿಗೆ, ಆರೋಗ್ಯ, ಮಹಿಳಾ ಕಲ್ಯಾಣ, ಕೈಗಾರಿಕೆ ನೀರಾವರಿ, ಮೊದಲಾದ ಸೌಲಭ್ಯಗಳು ಹೆಚ್ಚಿನ ಮಟ್ಟದಲ್ಲಿ ದೊರಕಬೇಕಾಗಿದೆ. ಈ ಪ್ರದೇಶದ ಮಹಿಳೆಯರು ಹೊಸಲು ದಾಟದೆ, ಕೂಪ ಮಂಡೂಕದಂತಿದ್ದಾರೆ. ಪ್ರಗತಿಯ ಬೆಳಕಿನೆಡೆಗೆ, ಅವರನ್ನು ಕರೆದೊಯ್ಯಲು ಹಲವು ಕಲ್ಯಾಣ ಯೋಜನೆಗಳನ್ನು ಕಾರ್ಯರೂಪಕ್ಕೆ ತರಬೇಕು. ನಶಿಸಿ ಹೋಗುತ್ತಿರುವ ಜಾನಪದ ಕಲೆಗಳು, ಸಂಸ್ಕೃತಿಗಳ ಪುನರುಜ್ಜೀವನವಾಗಬೇಕು. ಈ ಎಲ್ಲಾ ಕ್ಷೇತ್ರಗಳಲ್ಲೂ ಗಣನೀಯ ಪ್ರಮಾಣದ ಪ್ರಗತಿಯನ್ನು ಸಾಧಿಸಿ, ಜನಜೀವನ ಸುಖಮಯವಾಗಲು 9ನೇಯ ಪಂಚವಾರ್ಷಿಕ ಯೋಜನೆ ಪ್ರೇರಣೆಯಾಗಲಿ ಎಂದು ಈ ಸಂದರ್ಭದಲ್ಲಿ ಹಾರೈಸೋಣವಲ್ಲವೇ?

*****

# 5

# ಭೂ ಪ್ರಕೃತಿ, ಜನ ಪ್ರಕೃತಿ, ಜಲ ಪ್ರಕೃತಿ

ಬೆಳ್ಳೂರು ಗ್ರಾಮ ಪಂಚಾಯತು ಕೇರಳ ರಾಜ್ಯದ ಉತ್ತರ ಭಾಗದಲ್ಲಿ ಕರ್ನಾಟಕ ರಾಜ್ಯಕ್ಕೆ ಹೊಂದಿಕೊಂಡು ಸಮುದ್ರ ಕಿನಾರೆಯಿಂದ ಸುಮಾರು 20 ಕಿ.ಮೀ ದೂರದಲ್ಲಿ ನೆಲೆಗೊಂಡಿದೆ. ಈ ಪ್ರದೇಶವನ್ನು ಗುಡ್ಡೆ, ಇಳಿಜಾರು, ಕಣಿವೆ ಎಂಬುದಾಗಿ ಮೂರು ರೀತಿಯಲ್ಲಿ ವಿಂಗಡಿಸಬಹುದು. ನೆಟ್ಟಣಿಗೆ ಮತ್ತು ಬೆಳ್ಳೂರು ಎಂಬ ಎರಡು ಗ್ರಾಮಗಳನ್ನೊಳಗೊಂಡ ಈ ಪಂಚಾಯತಿನ ಒಟ್ಟಾರೆ ವಿಸ್ತೀರ್ಣವು 16.656 Square K.M. ಆಗಿರುವುದು.

ಭೂ ಪ್ರಕೃತಿ, ಮಣ್ಣಿನ ತರ ಕೃಷಿ ಹಾಗೂ ಸಮಸ್ಯೆಗಳ ಪಟ್ಟಿಯನ್ನು ಕೆಳಗೆ ಕೊಡಲಾಗಿದೆ.

| ಭೂ ಪ್ರಕೃತಿ | ಇಳಿಜಾರು | ಗುಡ್ಡೆ | ಕಣಿವೆಗಳು |
|---|---|---|---|
| ಮಣ್ಣಿನ ತರ | ಚೆಂಗಲ್ಲು | ಚೆಂಗಲ್ಲು ಕಗ್ಗಲ್ಲು ಮಿಶ್ರಿತ ಮಣ್ಣು | ಕಗ್ಗಲು ಮಿಶ್ರಿತ ಆವೆ ಮಣ್ಣು |
| ಕೃಷಿ | ತೆಂಗು, ಕಂಗು, ರಬ್ಬರ್ | ಗೇರು ,ರಬ್ಬರ್ | ಭತ್ತ, ಕಂಗು, ತೆಂಗು |
| ಸಮಸ್ಯೆಗಳು | ಮಣ್ಣಿನ ಕೊರೆತ ನೀರಿನ ಕೊರತೆ | ಚೆಂಗಲ್ಲು, ಕಗ್ಗಲ್ಲು, ನೀರಿನ ಕೊರತೆ | ಕಗ್ಗಲ್ಲು ನೀರಿನ ಕೊರತೆ |

**ಇಳಿಜಾರು ಪ್ರದೇಶ:** ಪಂಚಾಯತಿನ ಇಳಿಜಾರು ಪ್ರದೇಶಗಳಲ್ಲಿ ಹೆಚ್ಚಾಗಿ ತೆಂಗು, ಕಂಗು ಮತ್ತು ರಬ್ಬರ್ ಕೃಷಿಯನ್ನು ಮಾಡುತ್ತಾರೆ. ಆದರೆ ಇಳಿಜಾರು ಪ್ರದೇಶಗಳಲ್ಲಿರುವ ತೆಂಗು ಮತ್ತು ಕಂಗು ಕೃಷಿಗಳಿಗೆ ಎಪ್ರಿಲ್, ಮೇ ತಿಂಗಳುಗಳಲ್ಲಿ ನೀರಿನ ಅಭಾವ ತಲೆದೋರುವುದರಿಂದ ಈ ಕೃಷಿಗಳಿಂದ ಹೆಚ್ಚಿನ ಫಸಲನ್ನು ಪಡೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಮಳೆಗಾಲದಲ್ಲಿ ಈ ಪ್ರದೇಶಗಳಲ್ಲಿ ಮಣ್ಣಿನ ಕೊರೆತದಿಂದಾಗಿ ಫಲವತ್ತಾದ ಮಣ್ಣಿನ ಮೇಲ್ಪದರು ಸಮುದ್ರವನ್ನು ಸೇರುವುದು.

**ಗುಡ್ಡೆ:** ಪಂಚಾಯತಿನಲ್ಲಿ ನಮಗೆ ಹಲವಾರು ಗುಡ್ಡೆಗಳನ್ನು ಕಾಣಬಹುದು. ಈ ಪ್ರದೇಶದಲ್ಲಿ ಹೆಚ್ಚಾಗಿ ಗೇರು ಹಾಗೂ ರಬ್ಬರ್ ಕೃಷಿಯನ್ನು ಮಾಡುತ್ತಾರೆ. ನೀರಿನ ಸೌಕರ್ಯವಿರುವಲ್ಲಿ, ಈ ಗುಡ್ಡೆಗಳಲ್ಲಿ ತೆಂಗಿನ ಕೃಷಿ ಮಾಡಬಹುದಾಗಿದೆ. ಈ ಪ್ರದೇಶಗಳಲ್ಲಿ ಬಾವಿಯನ್ನು ತೋಡಿದರೂ ಕೃಷಿಗೆ ಬೇಕಾದಷ್ಟು ನೀರು ಲಭಿಸುವುದಿಲ್ಲ.

**ಕಣಿವೆಗಳು:** ಈ ಪಂಚಾಯತಿನ ಕಣಿವೆ ಪ್ರದೇಶದ ವಿಸ್ತಾರವು ಗುಡ್ಡೆ ಮತ್ತು ಇಳಿಜಾರು ಪ್ರದೇಶಗಳಿಗಿಂತ ವಿಸ್ತೀರ್ಣದಲ್ಲಿ ಕಡಿಮೆಯಾಗಿದೆ. ಕಣಿವೆಗಳಲ್ಲಿ ಹೆಚ್ಚಾಗಿ ಕಂಗು, ತೆಂಗು, ಭತ್ತದ ಕೃಷಿಯನ್ನು ಮಾಡುತ್ತಾರೆ. ಕಣಿವೆ ಪ್ರದೇಶದಲ್ಲಿ ಕೂಡಾ ಕಗ್ಗಲ್ಲುಗಳು ವ್ಯಾಪಕವಾಗಿರುವುದರಿಂದ ಕೃಷಿಗೆ ತುಂಬಾ ತೊಂದರೆಯಾಗುವುದು. ಎಪ್ರಿಲ್, ಮೇ ತಿಂಗಳುಗಳಲ್ಲಿ ಕಣಿವೆಗಳಲ್ಲಿರುವ ತೋಡುಗಳಲ್ಲಿ ನೀರು ಬತ್ತಿ ಹೋಗುವುದರಿಂದ ಕೆರೆ ಹಾಗೂ ಬಾವಿಗಳನ್ನೇ ಕೃಷಿಗೆ ಅವಲಂಬಿಸಬೇಕಾಗುವುದು.

**ಜನ ಪ್ರಕೃತಿ:** ಬೆಳ್ಳೂರು ಗ್ರಾಮ ಪಂಚಾಯತಿನ ಒಟ್ಟು ಜನಸಂಖ್ಯೆ 9101 ಆಗಿರುವುದು. ಇದರಲ್ಲಿ 1435 ಮಂದಿ ಪರಿಶಿಷ್ಟ ಜಾತಿಯವರೂ, 1110 ಮಂದಿ ಪರಿಶಿಷ್ಟ ವರ್ಗದವರೂ, ಆಗಿರುವರು. ಪಂಚಾಯತಿನ 3008 ಮಂದಿ ಗಂಡಸರು ಮತ್ತು 2340 ಮಂದಿ ಹೆಂಗಸರು ಸಾಕ್ಷರರಾಗಿರುವುದಾಗಿ 1991ರ ಸೆನ್ಸಸ್ ಪ್ರಕಾರ ತಿಳಿದು ಬರುತ್ತದೆ. ಆದುದರಿಂದ ಈ ಪ್ರದೇಶದಲ್ಲಿ ಕೃಷಿಯನ್ನು ಆಶ್ರಯಿಸಿ ಬದುಕುವವರ ಸಂಖ್ಯೆ ಹೆಚ್ಚಿನದು ಪ್ರದೇಶದ ಹೆಚ್ಚಿನ ಪುರುಷರು ಹಾಗೂ ಮಹಿಳೆಯರು ಕೃಷಿ ಕೂಲಿ ಕಾರ್ಮಿಕರಾಗಿ ದುಡಿಯುತ್ತಿರುವರು. ಕೃಷಿ ಕಾರ್ಮಿಕರಿಗೆ ವರ್ಷ ಪೂರ್ತಿ ಕೆಲಸ ದೊರೆಯದೆ ಇರುವುದರಿಂದ ಹೆಚ್ಚಿನ ಮಹಿಳೆಯರು ಬೀಡಿ ಉದ್ಯಮದತ್ತ ಹೆಚ್ಚು ಆಕರ್ಷಿತರಾಗಿರುವರು. ಆದರೆ ಈಗಿನ ದಿನಗಳಲ್ಲಿ ಬೀಡಿ ಉದ್ಯಮದಲ್ಲಿ ಕೂಡ ವರ್ಷ ಪೂರ್ತಿ ಕೆಲಸ

ದೊರೆಯುತ್ತಿಲ್ಲ. ತಾಂತ್ರಿಕ ಕೆಲಸದಲ್ಲಿ ಪರಿಣತಿ ಪಡೆದವರು ಈ ಪಂಚಾಯತು ಪ್ರದೇಶದಲ್ಲಿ ಬಹಳ ಕಡಿಮೆ ಮಂದಿಯಿರುವರು. ಕೈಗಾರಿಕಾ ಕೇಂದ್ರಗಳಿಲ್ಲದಿರುವುದರಿಂದ ನಿರುದ್ಯೋಗ ಸಮಸ್ಯೆ ಪುರುಷರಲ್ಲಿ ಹಾಗೂ ಸ್ತ್ರೀಯರಲ್ಲಿ ಹೆಚ್ಚಾಗಿರುವುದು. ಪರಂಪರಾಗತ ಕೆಲಸದಲ್ಲಿ ತೊಡಗಿರುವವರು ಕೇವಲ ಬೆರಳೆಣಿಕೆಯಷ್ಟು ಮಂದಿ ಮಾತ್ರವಿರುವರು. ಗುಡಿ ಕೈಗಾರಿಕೆ ಕೂಡಾ ಈ ಪ್ರದೇಶದಲ್ಲಿ ನಶಿಸುತ್ತಾ ಬಂದಿರುವುದು, ನಿರ್ಮಾಣ ಕೆಲಸವನ್ನು ಅವಲಂಬಿಸಿದ ಕಾರ್ಮಿಕರು ಕೂಡಾ ಬಹಳ ಕಡಿಮೆಯಾಗಿರುವರು. ಸರಕಾರಿ ಉದ್ಯೋಗಸ್ಥರ, ವಿದೇಶದಲ್ಲಿ ಉದ್ಯೋಗದಲ್ಲಿರುವವರ ಸಂಖ್ಯೆ ಕೂಡಾ ಬಹಳ ಕಡಿಮೆಯಾಗಿದೆ. ಖಾಸಗೀ ರಂಗದಲ್ಲಿ ದುಡಿಯುತ್ತಿರುವವರ ಸಂಖ್ಯೆಯೂ ಬಹಳ ವಿರಳ. ಆದುದರಿಂದ ಈಗಲೂ ಈ ಪಂಚಾಯತಿನ 868 ಕುಟುಂಬಗಳು ದಾರಿದ್ರ್ಯ ರೇಖೆಗಿಂತ ಕೆಳಗಿದೆ ಎನ್ನುವುದು ದುಃಖದ ವಿಚಾರ.

ಜಲಪ್ರಕೃತಿ: ಬೆಳ್ಳೂರು ಪಂಚಾಯತು ವರ್ಷದಲ್ಲಿ ಸರಾಸರಿ 3581 ಮಿ. ಮೀ ಮಳೆ ಬೀಳುವ ಪ್ರದೇಶವಾಗಿದೆ. ಜೂನ್ ತಿಂಗಳಿಂದ ಸೆಪ್ಟಂಬರ್ ತಿಂಗಳುವರೆಗೆ ಅತ್ಯಧಿಕ ಮಳೆ ಬೀಳುತ್ತದೆ. ಒಕ್ಟೋಬರ ಮತ್ತು ನವಂಬರ ತಿಂಗಳಲ್ಲಿ ಸಾಧಾರಣ ಮಳೆ ಬೀಳುತ್ತದೆ. ಈ ಪ್ರದೇಶದಲ್ಲಿ ಕೇವಲ ಮೂರು ತೋಡುಗಳು ಮಾತ್ರವೇ ಇರುವುದು. ಈ ತೋಡುಗಳಲ್ಲಿ ವರ್ಷಪೂರ್ತಿ ನೀರಿನ ಲಭ್ಯತೆಯಿರುವುದಿಲ್ಲ. ಶುದ್ಧ ಜಲಕ್ಕೆ ಹಾಗೂ ಕೃಷಿಗೆ ಹೆಚ್ಚಿನವರು ಕೆರೆ ಹಾಗೂ ಬಾವಿಗಳನ್ನೇ ಆಶ್ರಯಿಸಿರುವರು. ಆದರೆ ಈ ಪ್ರದೇಶದ ಕೃಷಿ ಹಾಗೂ ಶುದ್ಧ ಜಲ ಪೂರೈಕೆಗೆ ಹತ್ತಿರದ ಪಂಚಾಯತು ಮೂಲಕ ಹಾದು ಹೋಗುವ ಪಯಸ್ವಿನಿ ನದಿಯಿಂದ ನೀರನ್ನು ಒದಗಿಸುವ ಯೋಜನೆಯನ್ನು ಹಾಕಿಕೊಂಡರೆ ಈ ಪಂಚಾಯತಿನ ಜಲ ಸಮಸ್ಯೆ ಪರಿಹಾರವಾಗುವುದರಲ್ಲಿ ಸಂಶಯವಿಲ್ಲ. ಮಳೆ ನೀರನ್ನು ಇಂಗಿಸುವ ವಿಧಾನದಿಂದ ಭೂಗರ್ಭ ನೀರಿನ ಮಟ್ಟವನ್ನು ಹೆಚ್ಚಿಸಬಹುದು. ಇದರಿಂದ ಪ್ರಕೃತ ಇರುವ ಬಾವಿ, ಕೆರೆಗಳಲ್ಲಿ ಹೆಚ್ಚಿನ ನೀರನ್ನು ಪಡೆಯಲು ಸಾಧ್ಯವಾಗುವುದು. ಇಂತಹ ಕಾರ್ಯಕ್ರಮಗಳಿಂದ ಮಾತ್ರವೇ ಈ ಪ್ರದೇಶದ ನೀರಿನ ಸಮಸ್ಯೆಯನ್ನು ಪರಿಹರಿಸಬಹುದು.

*****

# 6

# ಕೃಷಿಯೂ ನೀರಾವರಿಯೂ

ಕರ್ನಾಟಕ ರಾಜ್ಯದ ಒತ್ತಿನಲ್ಲಿರುವ ಕೃಷಿ ಪ್ರಧಾನವಾದ ಒಂದು ಗ್ರಾಮ ಬೆಳ್ಳೂರು ಪಂಚಾಯತು. ತಗ್ಗು ಭೂಮಿಯಲ್ಲಿ ಹರಡಿಕೊಂಡಿರುವ ಭತ್ತದ ಗದ್ದೆಗಳೂ, ಕಂಗು ತೆಂಗು ತೋಟಗಳೂ ಅಗಲ ಕಿರಿದಾದ ತೊರೆಗಳೂ, ಗುಡ್ಡಗಳೂ, ಮಿಳಿತಗೊಂಡ ಪ್ರದೇಶ ಇದಾಗಿದೆ. ಇಲ್ಲಿನ ಪ್ರಧಾನ ಕೃಷಿ ಕಂಗು ಆಗಿದೆ. ಅಲ್ಲದೆ ತೆಂಗು, ರಬ್ಬರ್, ಕರಿ ಮೆಣಸು, ಗೇರುಬೀಜ ಭತ್ತ ಮೊದಲಾದ ಕೃಷಿಯೂ ಈ ಪ್ರದೇಶದಲ್ಲಿದೆ. ಈ ಪಂಚಾಯತಿನಲ್ಲಿ ಪಿಲಿಪುಡೆಯಿಂದ ನಿಡಿಯಡ್ಕ ನಾಕೂರು ಬಜ ಸರಳಿಮೂಲೆ ಹೊಸಗದ್ದೆಯ ಮೂಲಕ ಹರಿದು ಯೇತಡ್ಕವನ್ನು ಸೇರುವ ಒಂದು ತೋಡು, ಮಾಟುಕುಮೇರಿ ಗುತ್ತಿಯಡ್ಕದಿಂದ ಎಡೆಮುಗರಿನ ಮೂಲಕ ಹರಿದು ಕನಕತ್ತೋಡಿಯನ್ನು ಸೇರುವ ಇನ್ನೊಂದು ತೋಡೂ ಇದೆ. ಕಲ್ಲೇರಿ ಮೂಲೆಯಿಂದ ಬರುವ ಮತ್ತೊಂದು ತೋಡೂ ಇದನ್ನು ಸೇರಿಕೊಂಡು ಪೆರ್ವತ್ತೋಡಿಯ ಮೂಲಕ ಹಾದು ಹೋಗುತ್ತದೆ. ಇವು ಇಲ್ಲಿನ ಪ್ರಧಾನ ತೋಡುಗಳಾಗಿವೆ. ಮಳೆಗಾಲದಲ್ಲಿ ನೆರೆಯಿಂದಾಗಿ ಮಣ್ಣಿನ ಕೊರೆತವನ್ನು ಉಂಟು ಮಾಡುವ ಈ ತೋಡುಗಳು ವರ್ಷ ವರ್ಷವೂ ಹಾನಿಗೆ ಕಾರಣವಾಗುತ್ತವೆ.

ಇಲ್ಲಿನ ಜನರಲ್ಲಿ ಬಹುಮಂದಿ ಕೃಷಿಕರೂ, ಕೃಷಿ ಕಾರ್ಮಿಕರೂ ಆಗಿರುವರು. ವಿದ್ಯಾವಂತರೂ ಬಹಳ ಸಂತೋಷದಿಂದ ಕೃಷಿಯನ್ನೇ ಅವಲಂಬಿಸಿ ಬಾಳುವುದು ಇಲ್ಲಿನ ಪ್ರತ್ಯೇಕತೆಯಾಗಿದೆ. ಪಾರಂಪರ್ಯದಲ್ಲಿಯೇ ಕೃಷಿಯನ್ನು ಅವಲಂಬಿಸಿಕೊಂಡಿರುವುದು ಅನ್ಯ ವ್ಯಕ್ತಿಗಳಿಗೆ ಇಲ್ಲಿ ಅವಕಾಶ ಕಡಿಮೆ ಇರುವುದೂ ಜನರ ಈ ಒಲುಮೆಗೆ ಕಾರಣವೆನ್ನಬಹುದು. ಆದುದರಿಂದ ಕೃಷಿಗೆ ಅಗತ್ಯವಿರುವ ಎಲ್ಲಾ ವಿಧದ ಪ್ರೋತ್ಸಾಹಗಳಿಗೂ ಆದ್ಯತೆಯನ್ನು ನೀಡುವುದು ಅನಿವಾರ್ಯವಾಗಿದೆ. ಪ್ರಧಾನ ಆರ್ಥಿಕ ಬೆಳೆಯಾದ ಅಡಿಕೆ ಕೃಷಿಗೆ ಸಹಾಯವೂ ಪ್ರೋತ್ಸಾಹವೂ ಅಗತ್ಯ.

ಕೃಷಿಯೊಂದಿಗೆ ಪಶು ಸಂಗೋಪನೆಯೂ ಜನರ ಇನ್ನೊಂದು ಕಸುಬಾಗಿದೆ. ಈ ಕಾರಣದಿಂದ ಹಟ್ಟಿ ಗೊಬ್ಬರವು ಈ ಪ್ರದೇಶದಲ್ಲಿ ದೊರೆಯುವುದು ಸುಲಭ. ಇಲ್ಲಿನ ಜನರಿಗೆ ಅಗತ್ಯವಿರುವ ಹಾಲು, ಮತ್ತು ಹಾಲಿನ ಉತ್ಪನ್ನಗಳನ್ನು ಹೊರಗಿನಿಂದ ತರದೆ ಪೂರೈಸಿಕೊಳ್ಳುತ್ತಾರೆ. ಜಾನುವಾರು ಸಾಕಣೆಗೆ ಅಗತ್ಯವಿರುವ ಮೇವಿನ ಒದಗಿಸುವಿಕೆ, ಹುಲ್ಲು ಬೆಳೆಸಲು ಪ್ರೋತ್ಸಾಹ ಅಗತ್ಯ.

ಪಂಚಾಯತಿನ ಬಹುಭಾಗದಲ್ಲಿಯೂ ಜೇಡಿ ಮಿಶ್ರಿತ ಕೆಂಪು ಮಣ್ಣನ್ನೆ ಕಾಣಬಹುದು.

ಬೆಳ್ಳೂರು ಪಂಚಾಯತಿನಲ್ಲಿ ಬೆಳ್ಳೂರು ಹಾಗೂ ನೆಟ್ಟಣಿಗೆ ಎಂಬ ಎರಡು ಗ್ರಾಮಗಳನ್ನು ಒಳಗೊಂಡಿದೆ. ಈ ಎರಡು ಗ್ರಾಮಗಳಲ್ಲಿಯೂ ನೀರಿನ ಕ್ಷಾಮವು ಕಂಡುಬರುವುದು. ಮಧ್ಯಾವಧಿ ಮಳೆ ಇಲ್ಲದಿರುವುದೇ ಇದಕ್ಕೆ ಕಾರಣವೆನ್ನಬಹುದು.

| ಭೂ ಸಂಬಂಧ ವಿವರಗಳು "A" ಮತ್ತು "BT" ರಿಜಿಸ್ಟ್ರಿಯ ಆಧಾರ | | | | | | | | | | | | |
|---|---|---|---|---|---|---|---|---|---|---|---|---|
| ಗ್ರಾಮದ ಹೆಸರು | ಭೂಮಿಯ ವಿಸ್ತೀರ್ಣ (ಎಕ್ರೆಯಲ್ಲಿ) | | | | | 1-10 ಸೆಂಟ್ | 10-25 ಸೆಂಟ್ | 25-50 ಸೆಂಟ್ | 50-100 ಸೆಂಟ್ | 1-2 ಎಕ್ರೆ | 2-3 ಎಕ್ರೆ | 5 ಎಕ್ರೆಯಿಂದ ಮೇಲೆ |
| | ಕೃಷಿ ಭೂಮಿ | ಗದ್ದೆ | ಪೊರಂಬೋಕು | ಬಂಜರು | ಒಟ್ಟು | | | | | | | |
| ಬೆಳ್ಳೂರು | 530 | 184 | 19-50 | 1470-50 | 2204 | 190 | 172 | 124 | 103 | 87 | 163 | 26 |
| ನೆಟ್ಟಣಿಗೆ | 846 | 372 | 40-29 | 3189-70 | 4448 | 324 | 246 | 163 | 143 | 256 | 391 | 35 |
| ಒಟ್ಟು | 1376 | 556 | 59-79 | 4660-20 | 6652 | 514 | 418 | 286 | 246 | 343 | 554 | 61 |

ಬೆಳ್ಳೂರು ಪಂಚಾಯತಿನ ಕಾರ್ಷಿಕ ಉತ್ಪಾದನೆ ಮತ್ತು ಉತ್ಪಾದನಾ ಸಾಮರ್ಥ್ಯವು ಈ ಕೆಳಗೆ ಕಾಣಿಸಿದಂತಿದೆ.

| | ಬೆಳೆಗಳು | ವಿಸ್ತೀರ್ಣ ಹೆಕ್ಟೇರ್‌ಗಳಲ್ಲಿ | ಒಟ್ಟು ಉತ್ಪಾದನೆ | ಉತ್ಪಾದನಾ ಸಾಮರ್ಥ್ಯ |
|---|---|---|---|---|
| 1 | ಭತ್ತ I ಬೆಳೆ | 125 | 262 M. T. | 2100 Kg/Hs |
| 2 | ಭತ್ತ II ಬೆಳೆ | 55 | 137.5 M. T. | 2500 Kg/Hs |
| 3 | ಹೆಸ್ರು | 20 | 15 M. T. | 750 Kg/HS |
| 4 | ಎಳ್ಳು | 2 | 0.524 M. T. | 262 Kg/Hs |
| 5 | ತೆಂಗು | 65 | 1.12 Lakh | 4890/Hs |
| 6 | ಕಂಗು | 30 | 18.15 M. T. | 6050 Kg/Hs |
| 7 | ಬಾಳೆಕಾಯಿ | 30 | 3900 M. T. | 230 Kg/Hs |
| 8 | ತರಕಾರಿ | 260 | 1326 M. T. | 1020 Kg/Hs |
| 9 | ಕರಿಮೆಣಸು | 75 | 1.7500 M. T. | 700 Kg/Hs |
| 10 | ಗೇರುಬೀಜ | 280 | 3.4 M. T. | 161504/Hs |
| 11 | ರಬ್ಬರ್ | 20 | — | — |

ಈ ಪಂಚಾಯತಿನಲ್ಲಿ ಒಂಭತ್ತು ಭತ್ತ ಉತ್ಪಾದಕರ ಸಮಿತಿಯನ್ನು ರೂಪೀಕರಿಸಲಾಗಿದ್ದು, ಈ ಸಮಿತಿಗಳು ಯೋಗ್ಯ ರೀತಿಯಲ್ಲಿ ಕೆಲಸ ಕಾರ್ಯಗಳನ್ನು ನೆರವೇರಿಸುವುದಿಲ್ಲ. ಭತ್ತ ಉತ್ಪಾದಕರ ಸಮಿತಿ ಗಳು ಈ ಕೆಳಗಿನಂತಿವೆ.

1. ಬೆಳೆರಿ ಭತ್ತ ಉತ್ಪದನಾ ಸಮಿತಿ
2. ಕುಳದ ಪಾರೆ
3. ಪಳ್ಳಪಾಡಿ
4. ಎಡೆಮೊಗರು
5. ಅಡ್ಕಳ
6. ನೆಟ್ಟಣಿಗೆ
7. ಬಜ
8. ಪಂಬೆಜಾಲು
9. ಪೆರ್ವತ್ತೋಡಿ

ಸ್ವಂತ ಅಗತ್ಯಕ್ಕೆ ಬೇಕಾದಷ್ಟೇ ತರಕಾರಿಗಳನ್ನು ಬೆಳೆಸಿಕೊಳ್ಳುವ ಕುಟುಂಬಗಳನ್ನು ಮಾತ್ರ ಇಲ್ಲಿ ಕಾಣಬಹುದು. ಸರ್ವ ಋತುಗಳಲ್ಲಿಯೂ ತರಕಾರಿಗಳನ್ನು ಬೆಳೆಸುವ ಸೌಕರ್ಯಗಳನ್ನು ಇಲ್ಲಿ ಮಾಡಿಕೊಳ್ಳಬಹುದು. ಕೃಷಿ ವಿಸ್ತರಣೆಗೂ ವಿತರಣೆಗೂ ಸರಿಯಾದ ವ್ಯವಸ್ಥೆಯನ್ನು ಮಾಡಿಕೊಡಬೇಕು.

ಇದು ಸಾರಿಗೆ ಸೌಕರ್ಯ ತೀರಾ ಕಡಿಮೆ ಇರುವ ಒಂದು ಪ್ರದೇಶವಾಗಿದೆ. ಇಲ್ಲಿನ ಬಹುಮಂದಿ ಕನ್ನಡ ಹಾಗೂ ತುಳುಮಾತ್ರ ತಿಳಿದಿರುವ ಜನರು. ಮಲಯಾಳ ಸ್ವಲ್ಪವೂ ತಿಳಿಯದ ಜನರು ಜನಸಂಖ್ಯೆಯ ಅರ್ಧಾಂಶದಷ್ಟಿದ್ದಾರೆ. 1983ರಲ್ಲಿ T. V. ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನ ವಿಸ್ತರಣ ಕ್ರಮವು ಜ್ಯಾರಿಗೆ ಬಂದುದರಿಂದ ಕೃಷಿಕರಿಗೆ ಕೃಷಿ ವಿಧಾನ ಹಾಗೂ ಉತ್ತಮ ತಳಿಯ ಬೀಜಗಳ ಕುರಿತು ತಿಳಿದುಕೊಳ್ಳಲು ಸಾಧ್ಯವಾಯಿತು. 1987 ರಲ್ಲಿ ಕೃಷಿಭವನ ರೂಪೀಕರಣದಿಂದಾಗಿ ಪಂಚಾಯತು ಮಟ್ಟದಲ್ಲಿ ಕೃಷಿ ಕಾರ್ಯಲಯಗಳ ಸ್ಥಾಪನೆಯಾಯಿತು. ಕೃಷಿ ಅಭಿವೃದ್ಧಿಗಾಗಿ ಜನ ಸಂಪರ್ಕ ಕಾರ್ಯಕ್ರಮಗಳನ್ನು ಇನ್ನೂ ವಿಪುಲಗೊಳಿಸಬೇಕು.

ಕೃಷಿ ಬೆಳೆಗಳ ಮಾರಾಟಕ್ಕಾಗಿ ಒಂದು ಸಹಕಾರೀ ವ್ಯವಸ್ಥೆ ಈ ಪಂಚಾಯತಿನಲ್ಲಿ ಇಲ್ಲ. ಮಧ್ಯವರ್ತಿಗಳ ಮೂಲಕ ಬೆಳೆಗಾರನಿಗೆ ಯೋಗ್ಯವಾದ ಬೆಲೆ ಸಿಗುವುದಿಲ್ಲ. ಮಧ್ಯವರ್ತಿಗಳನ್ನು ಹೊರತು ಪಡಿಸಿದರೆ ಕೃಷಿಕನಿಗೆ ಸರಿಯಾದ ಬೆಲೆ ಸಿಗಲು ಅನುಕೂಲವಾಗ ಬಹುದು. ಆದುದರಿಂದ ಕೃಷಿಕರ ಸಹಕಾರೀ ಮಾರಾಟ ಸಂಘಗಳ ಸ್ಥಾಪನೆಯು ಅತಿ ಅಗತ್ಯವಾಗಿದೆ.

ಕೃಷಿ ಅಗತ್ಯಕ್ಕೆ ಸಾಲ ಒದಗಿಸಲು ಒಂದು ಸಹಕಾರಿ ಬ್ಯಾಂಕ್ ಮತ್ತು ನಾರ್ತ್ ಮಲಬಾರ್ ಗ್ರಾಮೀಣ ಬ್ಯಾಂಕಿನ ಒಂದು ಶಾಖೆಯು ಈ ಪಂಚಾಯತಿನಲ್ಲಿವೆ. ಇವುಗಳು ಕೃಷಿಕನಿಗೆ ಒಂದು ಮಿತಿಯಲ್ಲಿ ಸೌಲಭ್ಯವನ್ನು ಒದಗಿಸಲು ಶಕ್ತವೇ ಹೊರತು ಪೂರ್ಣ ಪ್ರಮಾಣದಲ್ಲಿ ಅಲ್ಲ. ಈ ಸೌಲಭ್ಯಗಳನ್ನು ಒದಗಿಸುವಲ್ಲಿ ಇರುವ ತಾಂತ್ರಿಕ ಅಡಚಣೆಗಳನ್ನು ಹೋಗಲಾಡಿಸಿ ಆರ್ಥಿಕ ಪೂರೈಕೆಯನ್ನು ವಿಪುಲಗೊಳಿಸಬೇಕು. ಈ ಸಂಸ್ಥೆಗಳ ಕೆಲಸ ಕಾರ್ಯಗಳು ಊರ್ಜಿತ

ಗೊಳ್ಳಬೇಕು. ಗ್ರಾಮೀಣ ಬ್ಯಾಂಕ್ ಇಲ್ಲಿಯೆ ಸ್ಥಿರವಾಗಿ ಉಳಿಯಬೇಕು. ಇದು ಕೃಷಿಕರ ಹಿತದೃಷ್ಟಿಯಿಂದ ಅತಿ ಅಗತ್ಯ.

ಒಂದು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ಸಹಕಾರಿ ಸಂಘ ಇಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಈ ಸಂಸ್ಥೆಯನ್ನು ಅಭಿವೃದ್ಧಿಗೊಳಿಸುವುದರಿಂದ ಪರಿಶಿಷ್ಟ ಹಾಗೂ ಪರಿಶಿಷ್ಟ ವರ್ಗದವರು ಅಭಿವೃದ್ಧಿಗೊಳಿಸಬಹುದು. ಕೃಷಿ ಭವನದ ಮೂಲಕ ಈ ಸಂಸ್ಥೆಗೆ ಲಭಿಸಿರುವ ಟ್ರಾಕ್ಟರ್ 1, ಟಿಲ್ಲರ್ 1, ಸ್ಪ್ರೇಯರುಗಳು ಇತ್ಯಾದಿ ಯಂತ್ರೋಪಕರಣಗಳು ಕೃಷಿಕರಿಗೆ ಸರಿಯಾಗಿ ಲಭಿಸುವುದಿಲ್ಲ. ಕೆಟ್ಟು ಹೋದ ಉಪಕರಣಗಳನ್ನು ದುರಸ್ತಿಗೊಳಿಸಿ ಕೃಷಿಕರಿಗೆ ಒದಗಿಸಿ ಕೊಡುವುದು ಅತ್ಯಾವಶ್ಯಕ. ಹಿಂದೆ ನಾಡ ಉಪಕರಣಗಳನ್ನು ಉಪಯೋಗಿಸಿ ಭತ್ತದ ಕೃಷಿ ಮಾಡುತ್ತಿದ್ದರು. ಈಗ ಭತ್ತದ ಉತ್ಪಾದನಾ ಸಮಿತಿಗೆ ಲಭಿಸಿರುವ ಟಿಲ್ಲರ್ ಕೃಷಿ ಕೆಲಸವನ್ನು ಸುಲಭಗೊಳಿಸಲು ಕಾರಣವಾಗಿದೆ. ಕುಳದ ಪಾರೆಯ ಭತ್ತ ಉತ್ಪಾದಕರ ಸಮಿತಿಯು ಇದಕ್ಕೆ ಆದರ್ಶವಾಗಿದೆ.

ಖಾಸಗಿ ನೆಲೆಯಲ್ಲಿಯೂ, ಸಹಕಾರೀ ಸಂಸ್ಥೆಗಳ ಮೂಲಕವೂ ನಾಲ್ಕು ಸ್ಥಳಗಳಲ್ಲಿ ರಸಗೊಬ್ಬರ ಹಾಗೂ ಕ್ರಿಮಿ ನಾಶಕ ಗಳನ್ನು ವಿತರಿಸುವ ವ್ಯವಸ್ಥೆಯಿದೆ. ಆದರೂ ಸಕಾಲದಲ್ಲಿ ಅವುಗಳು ದೊರಕುವುದಿಲ್ಲ. ಮಾತ್ರವಲ್ಲದೆ ಕಳಪೆಯಾಗಿರುವ ವಸ್ತುಗಳನ್ನು ವಿತರಿಸುತ್ತಾರೆಂಬ ದೂರು ಕೇಳಿಸುತ್ತಿದೆ. ರಸಗೊಬ್ಬರ, ಕ್ರಿಮಿನಾಶಕಗಳನ್ನು ತಪಾಸಣೆಗೊಳಪಡಿಸಿ ಅವುಗಳ ಗುಣಮಟ್ಟವನ್ನು ದೃಢಪಡಿಸಿಕೊಳ್ಳುವುದು ಅಗತ್ಯ.

ಈ ಪಂಚಾಯತಿನಲ್ಲಿ ಸಾರ್ವಜನಿಕ ನೀರಾವರಿ ಪದ್ಧತಿ ಬಹಳ ವಿರಳ. ತೋಡುಗಳಲ್ಲಿ ತಾತ್ಕಾಲಿಕ ತಡೆಯನ್ನು ಖಾಸಗಿಯಾಗಿ ನಿರ್ಮಿಸಿಕೊಂಡೂ, ಸ್ವಂತ ಸ್ಥಳಗಳಲ್ಲಿರುವ ಕೊಳಗಳಿಂದಲೂ ಯಂತ್ರಗಳನ್ನು ಪಯೋಗಿಸಿ ನೀರೆತ್ತಿ ಕೃಷಿ ಮಾಡುವುದನ್ನು ಕಾಣಬಹುದು. ಬೇಸಿಗೆಯಲ್ಲಿ ತೋಡು ಕೆರೆಗಳು ಬತ್ತಿ ಹೋಗುತ್ತವೆ. ಮಳೆಗಾಲದಲ್ಲಿ ಹರಿದು ಸಮುದ್ರ ಸೇರಿ ವ್ಯರ್ಥವಾಗುವ ಜಲಸಂಪತ್ತನ್ನು ಗುಡ್ಡಗಳಲ್ಲಿ ಗುಂಡಿಗಳನ್ನು ನಿರ್ಮಿಸಿ ಭೂಮಿಯಲ್ಲಿ ಇಂಗುವಂತೆ ಮಾಡಿಕೊಳ್ಳುವ ಯೋಜನೆ ಜ್ಯಾರಿಗೊಳಿಸಬೇಕು.

ಗುಡ್ಡ ಬೆಟ್ಟ ಪ್ರದೇಶವು ಅಧಿಕವಾಗಿದೆ. ಸಾರಿಗೆ ಸೌಕರ್ಯವು ಕಡಿಮೆಯಾಗಿದೆ. ಆದುದರಿಂದ ಕೃಷಿ ಭವನದ ನೌಕರರಿಗೆ ಪಂಚಾಯತಿನೊಳಗಣ ಎಲ್ಲಾ ಪ್ರದೇಶಗಳಿಗೂ ಭೇಟಿಕೊಡಲು ಕಷ್ಟವಾಗುವುದು ಹಾಗಾದ ಕಾರಣ ಕೃಷಿ ಭವನದ ನೌಕರರ ಸಂಖ್ಯೆಯನ್ನು ಹೆಚ್ಚಿಸುವುದು ಅಗತ್ಯ. ಉತ್ತಮ ತಳಿಯ ಬೀಜ ಹಾಗೂ ಗಿಡಗಳು ಸಕಾಲದಲ್ಲಿಯೇ ಕೃಷಿಕರ ಕೈ ಸೇರಬೇಕು.

**ಈ ಪಂಚಾಯತಿನಲ್ಲಿ ಈಗ ಕೃಷಿ ಕಾರ್ಮಿಕರ ಕೂಲಿ ಕೆಳಗೆ ಕೊಟ್ಟಿರುತ್ತದೆ.**

| ಕ್ರಮ ಸಂಖ್ಯೆ | ಕೂಲಿಯ ವಿವರ | ಕೂಲಿ | | ಷರಾ |
|---|---|---|---|---|
| | | ಗಂಡು | ಹೆಣ್ಣು | |
| 1 | ಕೃಷಿ ಕಾರ್ಮಿಕ | 80=00 | 60=00 | ಖರ್ಚು ಸಹಿತ ದಿನಕ್ಕೆ |
| 2 | ತೆಂಗು ಕಂಗು ಮರವೇರಲು | 170=00 | ---- | ಮಧ್ಯಾಹ್ನ ತನಕ ಖರ್ಚು ಸಮೇತ |
| 3 | ಭತ್ತದ ಕ್ಕೊಲು | 16 ಸೇರು ಭತ್ತ | 14 ಸೇರು ಭತ್ತ | ಖರ್ಚಿನ ಹೊರತು |
| 4 | ಅಡಿಕೆ ಸುಲಿಯುವುದು | 1=25/1 Kg | 1= 25/1Kg | ಖರ್ಚಿನ ಹೊರತು |
| 5 | ತೆಂಗಿನ ಕಾಯಿ ಸುಲಿಯಲು | 0=20/1ಕ್ಕಾಗೆ | 0=20/1 ಕಾಯಿಗೆ | ಖರ್ಚಿನ ಹೊರತು |
| 6 | ಟಿಲ್ಲರ್ ಡ್ರೈವರ್ | 25=/Hour | ---- | ಖರ್ಚಿನ ಹೊರತು |

**ಈ ಪಂಚಾಯತಿನಲ್ಲಿ ಕ್ರಿಮಿನಾಶಕ ಹಾಗೂ ರಸಗೊಬ್ಬರ ಉಪಯೋಗವನ್ನು ತೋರಿಸುವ ತಖ್ತೆ**

| ಕ್ರಮ ಸಂಖ್ಯೆ | ಸಂಸ್ಥೆಯ ಹೆಸರು | 1993-94 | | | 1994-95 | | | 1995-96 | | |
|---|---|---|---|---|---|---|---|---|---|---|
| | | ರಸಗೊಬ್ಬರ | ಕೀಟನಾಶಕ | | ರಸಗೊಬ್ಬರ | ಕೀಟನಾಶಕ | | ರಸಗೊಬ್ಬರ | ಕೀಟನಾಶಕ | |
| | | ಕಿ.ಗ್ರಾಂ | ಘನ | ದ್ರವ | ಕಿ.ಗ್ರಾಂ | ಘನ | ದ್ರವ | ಕಿ.ಗ್ರಾಂ | ಘನ | ದ್ರವ |
| 1 | 2 | 3 | 4 | 5 | 6 | 7 | 8 | 9 | 10 | 11 |
| 1 | ಸಹಕಾರಿ | 54303 | — | — | 86025 kg | — | — | 28000 | 4575 kg | — |
| 2 | ಖಾಸಗಿ | 59800 | 2227.5 kg | 180.44 lt | 71150 kg | 2300 kg | 112.65 lt | 62950 | 75-00 | 13.2lt. |

## ಸಮಸ್ಯೆಗಳು

1. ನೀರಿನ ಕೊರತೆ ಇದೆ. ಒಂದೇ ಭೂಮಿಯಲ್ಲಿ ಒಂದಕ್ಕಿಂತ ಹೆಚ್ಚು ಕೆರೆಗಳಿದ್ದರೂ ಬೇಸಿಗೆಯಲ್ಲಿ ಬತ್ತಿ ಹೋಗುತ್ತವೆ.
2 ಮಳೆಗಾಲದಲ್ಲಿ ತೋಡುಗಳ ದಡಗಳು ಕೊರೆತಕ್ಕೊಳಪಡುವುದು. ನೆರೆ ತುಂಬಿ ಹಾನಿ ಮಾಡುವುದು, ಬೇಸಿಗೆಯಲ್ಲಿ ತೋಡು ಬತ್ತಿ ಹೋಗುವುದು.
3 ಮಹಾಳಿ ಹಾಗೂ ಹಳದಿ ರೋಗಗಳು ಕಂಗು ಕೃಷಿಯನ್ನು ಅಧಿಕ ಪ್ರಮಾಣದಲ್ಲಿ ಬಾಧಿಸುತ್ತವೆ.
4 ಗೇರು ಬೀಜದ ಕೃಷಿಗೆ ಸಾಕಷ್ಟು ಗಮನವನ್ನು ಪ್ರಾಶಸ್ತ್ಯವನ್ನು ಕೃಷಿಕರು ನೀಡುವುದಿಲ್ಲ. ಕ್ರಿಮಿ ಭಾದೆಯಿಂದ ಈ ಬೆಳೆ ಕೆಡುತ್ತದೆ.
5 ಶೀಘ್ರ ಸೊರಗು ರೋಗದ ಬಾಧೆಯಿಂದ ಕರಿಮೆಣಸಿನ ಬಳ್ಳಿಯು ನಾಶಗೊಳ್ಳುತ್ತಿದೆ.
6 ಮಣ್ಣಿನ ಫಲವತ್ತತೆ ಕಡಿಮೆಯಾಗುತ್ತಿದೆ. ಜೈವಿಕ ಗೊಬ್ಬರದ ಲಭ್ಯತೆ ಕಡಿಮೆಯಾಗುತ್ತಿದೆ. ರಸಗೊಬ್ಬರದ ಬೆಲೆ ಏರುತ್ತಿದೆ. ಇವೆಲ್ಲಾ ಕೃಷಿಯನ್ನು ಹೆಚ್ಚಾಗಿ ಬಾಧಿಸುತ್ತದೆ.
7 ಪ್ರಧಾನ ಕೃಷಿಯಾದ ಅಡಿಕೆ ಬೆಳೆಗೆ ಬೇಕಾದ ಪ್ರೋತ್ಸಾಹವೂ, ಸಹಾಯ ಧನವೂ ಸಿಗುವುದಿಲ್ಲ.
8 ತೆಂಗು ಕೃಷಿಯಲ್ಲಿ ಆದಾಯ ಕಡಿಮೆ ಇರುವುದರಿಂದ ಕೃಷಿಕರಿಗೆ ಅದರಲ್ಲಿ ಅಭಿರುಚಿ ಕಡಿಮೆಯಾಗುತ್ತಾ ಇದೆ. ಭತ್ತದ ಕೃಷಿಗೆ ಪ್ರೋತ್ಸಾಹವೂ ಸಾಕಷ್ಟು ಇಲ್ಲ.
9 ಭತ್ತದ ಕೃಷಿಯಲ್ಲಿ ಆದಾಯ ಕಡಿಮೆ ಇರುವುದರಿಂದ ಕೃಷಿಕರಿಗೆ ಅದರಲ್ಲಿ ಅಭಿರುಚಿ ಕಡಿಮೆಯಾಗುತ್ತದೆ.
10 ಉತ್ಪಾದನೆಯ ಖರ್ಚು ಹೆಚ್ಚಾಗಿದೆ. ಸಾರ್ವಜನಿಕ ಮಾರಾಟ ಕೇಂದ್ರಗಳಿಲ್ಲ. ಕೃಷಿ ಉತ್ಪನ್ನಗಳನ್ನು ಸಂಸ್ಕರಿಸಲು ಬೇಕಾಗುವ ಸಂಸ್ಥೆಗಳಿಲ್ಲ.
11 ಒಂದು ಬೆಳೆಯ ಗದ್ದೆಗಳು ಏಣೆಲು ಗದ್ದೆ ಅಡಿಕೆ ತೋಟಗಳಿಗಾಗಿಯೂ ಮನೆಗಳಿಗಾಗಿಯೂ ಉಪಯೋಗವಾಗುತ್ತಿದೆ.
12 ಆರ್ಥಿಕ ಸಂಸ್ಥೆಗಳಿಂದ ಕೃಷಿಗೆ ಸಾಕಷ್ಟು ಸಾಲ ಸೌಲಭ್ಯಗಳು ದೊರಕುವುದಿಲ್ಲ. ಸಂಕೀರ್ಣ ವ್ಯವಸ್ಥೆಯೂ ಬಡ್ಡಿ ದರದ ಹೆಚ್ಚಳವೂ ಕಷ್ಟವನ್ನುಂಟುಮಾಡುವುದು.
13 ಕೃಷಿಗೆ ವಿದ್ಯುತ್ ಕೊರತೆ, ಇಂಧನದ ಕೊರತೆಯೂ ಬೇಸಿಗೆಯಲ್ಲಿ ಅಡ್ಡಿಯುಂಟುಮಾಡುತ್ತಿದೆ. ಇದು ತೆಂಗು ಕಂಗು ಇತ್ಯಾದಿ ಶಾಸ್ವತ ಬೆಳೆಗಳಿಗೆ ತೊಂದರೆಯುಂಟುಮಾಡುತ್ತದೆ.
14 ಕೃಷಿ ವಿಜ್ಞಾನಿಗಳ ಸಲಹೆಗಳು ಕೃಷಿಕರಿಗೆ ಸಾಕಷ್ಟು ಸಿಗುವುದಿಲ್ಲ.
15 ಸಣ್ಣ ಕೃಷಿಕರು, ದೊಡ್ಡ ಕೃಷಿಕರೆಂಬ ಭೇದ ಭಾವವಿಲ್ಲದೆ ಎಲ್ಲಾ ಕೃಷಿಕರಿಗೂ ಸಬ್ಸಿಡಿ, ಸಾಲ ಸೌಲಭ್ಯ ಹಾಗೂ ಇನ್ನಿತರ ಸಹಕಾರಗಳು ಸಿಗಬೇಕು.
16 ಎರಡು ಗ್ರಾಮಗಳಿರುವುದರಿಂದ ಪ್ರತ್ಯೇಕ ಕೃಷಿಭವನದ ಸೌಲಭ್ಯ ಅಗತ್ಯ.
17 ಬೆಳ್ಳೂರು ಹಾಗೂ ನೆಟ್ಟಣಿಗೆ ಗ್ರಾಮಗಳಿಗೆ ಒಂದೇ ವಿಲೇಜ್ ಆಫೀಸ್. ಒಬ್ಬರೇ ವಿಲೇಜ್ ಆಫೀಸರರು. ಇದರಿಂದ ಕಡತಗಳ ವಿಲೇವಾರಿಯಲ್ಲಿ ವಿಳಂಬ ತಲೆದೊರುವುದು.
18 ಇನ್ನಿತರ ಕೃಷಿಗಳ ಹಾಗೆಯೇ ಅಡಿಕೆ ಬೆಳೆಯನ್ನು Plantation ಬೆಳೆಯಾಗಿ ಮಾಡಬೇಕು. (ಉದಾ ರಬ್ಬರ್, ಏಲಕ್ಕಿ)

## ಸಾಧ್ಯತೆಗಳು

1. ಭತ್ತ ಬೆಳೆ ಉತ್ಪಾದನಾ ಸಮಿತಿಗಳಿಗೆ ಸಾಕಷ್ಟು ಪ್ರೋತ್ಸಾಹ ಹಾಗೂ ಮಾರ್ಗದರ್ಶನ ಕೊಟ್ಟು ಅವುಗಳಿಗೆ ಜೀವ ತುಂಬಿ ಕ್ರಿಯಶೀಲವಾಗುವಂತೆ ಮಾಡುವುದು. ಬೀಜ ಕೃಷಿ ವೆಚ್ಚ ಇವುಗಳಿಗೆ 100% ಸಬ್ಸಿಡಿ ನೀಡಬೇಕು. ಗದ್ದೆಗಳಲ್ಲಿ ಶಾಶ್ವತ ಬೆಳೆಗಳನ್ನು ಬೆಳೆಸುವುದನ್ನು ತಡೆಗಟ್ಟುವುದು ಅಗತ್ಯ. ಸರಕಾರವು ಭತ್ತದ ಕೃಷಿಗೆ ಘೋಷಿಸಿರುವ ವಿದ್ಯುತ್ ರಿಯಾಯತಿಯನ್ನು ಕಾರ್ಯಗತಗೊಳಿಸಬೇಕು. ಬೆಳ್ಳೂರಿನ ಪಂಬೆಜಾಲು ಎಂಬಲ್ಲಿ ಸಾರ್ವಜನಿಕ ಕೆರೆ ತೋಡಿ ಭತ್ತದ ಕೃಷಿಗೆ ನೀರು ದೊರೆಯುವಂತೆ ಮಾಡಬೇಕು.

2. ತೀವ್ರಗತಿಯ ಪ್ರವಾಹವನ್ನು ನಿಯಂತ್ರಿಸಲು ಎಲ್ಲಾ ತೋಡುಗಳ ಇಕ್ಕಡೆಯನ್ನು ಕಟ್ಟಿ ಮಣ್ಣಿನ ಕೊರೆತವನ್ನು ತಡೆಗಟ್ಟುವುದು. ಮತ್ತು ನೀರನ್ನು ಇಂಗಿಸಿಕೊಳ್ಳುವ ವ್ಯವಸ್ಥೆ ಮಾಡಬೇಕು. ತಡೆಗಳನ್ನು (Check dam) ನಿರ್ಮಿಸುವುದು. ಈಗ ಇರುವ ಅಣೆಕಟ್ಟುಗಳನ್ನು ದುರಸ್ತಿಗೊಳಿಸುವುದು. ಹಾಗೂ ಅಗತ್ಯ ಇರುವಲ್ಲಿ ಹೊಸ ಅಣೆಕಟ್ಟುಗಳನ್ನು ನಿರ್ಮಿಸಿ ಅವುಗಳ ಸಂರಕ್ಷಣೆಯ ಹೊಣೆಯನ್ನು ಆಯಾ ಪ್ರದೇಶದ ಪ್ರಾದೇಶಿಕ ಸಮಿತಿಗಳಿಗೆ ವಹಿಸಿಕೊಡುವುದು. ನೀರಿನ ಪ್ರವಾಹ ಹಾಗೂ ಮಣ್ಣಿನ ಕೊರೆತವನ್ನು ತಡೆಗಟ್ಟಲು ಮಣ್ಣು ಸಂರಕ್ಷಣಾ ಕಾರ್ಯವನ್ನು ತುರ್ತಾಗಿ ನಡೆಸಬೇಕು.

3 ನೀರಾವರಿಗಾಗಿ ಕೆಳಗೆ ತೋರಿಸಿದ ಸ್ಥಳಗಳಲ್ಲಿ ತೋಡುಗಳಿಗೆ ಅಣೆಕಟ್ಟುಗಳು ಅಗತ್ಯ.

I (a) ಪಿಲಿಪ್ಪುಡೆ ಹೊಸಗದ್ದೆ ತೋಡಿಗೆ - ಪಿಲಿಪ್ಪುಡೆ, ಕೆಳಗಿನ ನಾಕೂರು, ಮೇಲಿನ ನಾಕೂರು, ನಿದಿಯಡ್ಕ, ಬಜ ಮುಂಡಾಸು, ಕೈಪಂಗಳ (R.S.No.1661B)ಸರಳಿ ಮೂಲೆಗಳಲ್ಲಿ ಅಣೆಕಟ್ಟುಗಳ ನಿರ್ಮಾಣ.

(b) ಹೊಸಗದ್ದೆ ಮಾಟುಕುಮೇರಿ ಕನಕತ್ತೋಡಿ ತೋಡಿಗೆ - ಎಡ ಮುಗೆರು, ಪಳ್ಳಪಾಡಿ ದಾಸರಮೂಲೆ, ಮುದ್ಮೆತ್ತಿಮಾರು, ಮುಗುಳ್ತಿಮೂಲೆ, ಕನಕತ್ತೋಡಿಗಳಲ್ಲಿ ಅಣೆಕಟ್ಟುಗಳು ಕುಳೂರು

(c) ಆಜಡ್ಕ ಕಕ್ಕೆಬೆಟ್ಟು ತೋಡಿಗೆ - ಗುತ್ಯಡ್ಕ - ಆಜಡ್ಕ - ತೋಡಿಗೆ, ಬೇರಿಕೆ - ಎಡೆಮೊಗರು ತೋಡುಗಳಿಗೆ ಯೋಗ್ಯ ಸ್ಥಳಗಲ್ಲಿ ಅಣೆಕಟ್ಟುಗಳು ಬೇಕು.

II. ಕೆಳಗೆ ಕಾಣಿಸಿದ ಸ್ಥಳಗಳಲ್ಲಿ ಕೃಷಿ ನೀರಾವರಿಗಾಗಿ ಕೆರೆಗಳು ಅಗತ್ಯ. 1. ಕುಳ 2. ನಾಕೂರು 3. ಮರದ ಮೂಲೆ 4. ಕೋಟಿ ಮೂಲೆ 5. ಕಿನ್ನಿಂಗಾರು, 6. ಅಡ್ಕ 7. ಕಜೆ 8. ಎಡಮೊಗರು ಈ ಸ್ಥಳಗಳಲ್ಲಿ ಹೊಸಕೆರೆಗಳನ್ನು ನಿರ್ಮಿಸಿ ಪಂಪ್‌ಸೆಟ್‌ನ ವ್ಯವಸ್ಥೆ ಮಾಡುವುದು. ಕೊಂಕಣಿ ಮೂಲೆಯಲ್ಲಿ ಒಂದು ಕೆರೆ ನಿರ್ಮಿಸುವುದು.

III. ಮುಗುಳ್ತಿ ಮೂಲೆಯಲ್ಲಿ ಕೊಳವೆ ಬಾವಿ ನಿರ್ಮಿಸಿ ಕೃಷಿಗೆ ಯೋಗ್ಯ ನೀರನ್ನು ಒದಗಿಸುವುದು.

ಶಾಂತಿಗುರಿಯ ಹರಿಜನ ಕೊಲನಿಗೆ ಕೃಷಿ ಮಾಡಲು ಟ್ಯಾಂಕ್ ನಿರ್ಮಿಸಿಕೊಟ್ಟು ನೀರಾವರಿ ವ್ಯವಸ್ಥೆ ಮಾಡಬೇಕು. ಅಂತೆಯೇ ತೋಟಿಮೂಲೆ ಹರಿಜನ ಕೊಲನಿ, ನಾಯಿತ್ತೋಡು ಗಿರಿಜನ ಕೊಲನಿ, ನಿರಮೂಲೆ, ನೆಲಿತಡ್ಕ ಕಾಯಿಮಲೆ ಪರಿಶಿಷ್ಟ ಜಾತಿ ಕೊಲನಿ ಕಲ್ಪಣೆ ಎಂಬೀ ಸ್ಥಳಗಳಲ್ಲಿಯೂ ಕೃಷಿ ನೀರಾವರಿಗೆ ಟ್ಯಾಂಕ್ ನಿರ್ಮಿಸಿ ಸೌಕರ್ಯ ಮಾಡಿಕೊಡುವುದು.

ಕಾಯಿಮಲೆಯಲ್ಲಿ ಅಣೆಕಟ್ಟಿನ ನಿರ್ಮಾಣವಾದ ಬಳಿಕ ನೀರನ್ನು ಪಂಪ್ ಮಾಡಿ V ಹಾಗೂ VIIIನೇ ವಾರ್ಡಿಗೂ ಜಲ ಸೇಚನ ಸೌಕರ್ಯ ಮಾಡಿಕೊಡುವುದು. ಅಲ್ಲದೆ ಖಾಸಗಿ ಕೆರೆಗಳನ್ನು ತೋಡಲು ಮತ್ತು ಯಂತ್ರಗಳನ್ನು ಕೊಳ್ಳಲು 50% ಸಬ್ಸಿಡಿ ಒದಗಿಸುವುದು. ಇರುವ ಕೆರೆಗಳನ್ನು ದುರಸ್ತಿಗೊಳಿಸಲು ಹಾಗೂ ಆಳಗೊಳಿಸಲು 50% ಸಬ್ಸಿಡಿ ಸೌಕರ್ಯವನ್ನು ಒದಗಿಸಬೇಕು.

ಮದಕ್ಕ ಕೆಮಣಕುಕ್ಕು, ಭೂತಾನ, S/C ಕೊಲನಿಗಳಲ್ಲಿ ಅಪೂರ್ಣ ಗೊಂಡಿರುವ ಟ್ಯಾಂಕ್‌ಗಳನ್ನು ಪೂರ್ತಿಗೊಳಿಸಿ ನೀರು ಸರಬರಾಜು ಮಾಡುವುದು. ಕಲ್ಲೇರಿ ಮೂಲೆಯ ನೀರಿನ ಝರಿಯನ್ನು ಸರಿಯಾದ ಬಳಕೆ ಮಾಡುವುದು.

4. ಪ್ರಧಾನ ಬೆಳೆಯಾದ ಅಡಿಕೆ ಕೃಷಿಗೆ ಹೊಸಮಣ್ಣು ಒದಗಿಸಲು ಕ್ರಿಮಿನಾಶಕ, ಶಿಲೀಂದ್ರ ನಾಶಕ, ರಾಸಾಯನಿಕ ಗೊಬ್ಬರ, ಸಾವಯವ ಗೊಬ್ಬರ ಇತ್ಯಾದಿಗಳನ್ನು ಒದಗಿಸಲು 50% ಸಬ್ಸಿಡಿ ಒದಗಿಸಬೇಕು. ಅಡಿಕೆ ಬೆಳೆಗಾರರ ಅಭಿವೃದ್ಧಿ ಸಮಿತಿಯನ್ನು ರೂಪಿಸಿ ಸೌಲಭ್ಯಗಳನ್ನು ಒದಗಿಸುವುದು. ಮಾರಾಟ ವ್ಯವಸ್ಥೆಯನ್ನು ಉತ್ತಮಗೊಳಿಸುವುದು.

5. ಮಣ್ಣಿನ ಫಲವತ್ತತೆಯನ್ನು ಅಧಿಕಗೊಳಿಸಲು ಹಾಗೂ ಸಾವಯವ ಗೊಬ್ಬರವನ್ನು ಕೃಷಿಯಲ್ಲಿ ಹೆಚ್ಚಾಗಿ ಉಪಯೋಗಿಸಲು ಕೃಷಿಕರಿಗೆ ತಿಳಿಹೇಳಲು ಆಗಾಗ ಕೃಷಿ ಸೆಮಿನಾರ್‌ಗಳನ್ನು ನಡೆಸುವುದು. ಕೃಷಿ ತ್ಯಾಜ್ಯ ವಸ್ತುಗಳನ್ನು ಉಪಯೋಗಿಸಿ ಜೈವಿಕ ಗೊಬ್ಬರಗಳನ್ನು ತಯಾರಿಸುವಂತೆ ಸಲಹೆ ನೀಡುವುದು.

6. ತೆಂಗು ಬೆಳೆ ವಿಸ್ತರಣಾ ಸಮಿತಿಯು ಕ್ರೀಯಾ ಶೀಲವಾಗುವಂತೆ ಮಾಡಿ ತೆಂಗು ಕೃಷಿಕರನ್ನು ಉತ್ತೇಜಿಸಬೇಕು.

7. ಗೇರು ಬೀಜ ಕೃಷಿಗೆ ಸದ್ಯ ಇರುವ ವ್ಯವಸ್ಥೆಯನ್ನು ಮುಂದುವರಿಸುವುದು. ಜೈವ ಗೊಬ್ಬರವನ್ನು ಹಾಗೂ ಗೇರು ಸಸಿಗಳನ್ನು ಹೆಚ್ಚಾಗಿ ಒದಗಿಸುವುದು. ಗೊಬ್ಬರಗಳಿಗೆ ಸಬ್ಸಿಡಿ ಅಧಿಕಗೊಳಿಸುವುದು.

8. ಸಾರ್ವಜನಿಕ ಮಾರಾಟ ಕೇಂದ್ರಗಳನ್ನು ಸಹಕಾರಿ ಪದ್ಧತಿಯ

ನೆಲೆಯಲ್ಲಿ ಸ್ಥಾಪಿಸುವುದು. ಬೆಳೆಗಳನ್ನು ಕೃಷಿಕರಿಂದ ನೇರವಾಗಿ ಸಂಗ್ರಹಿಸುವುದು. ಸರಿಯಾದ ಬೆಲೆಯನ್ನು ಕೃಷಿಕರಿಗೆ ಒದಗಿಸುವಂತೆ ಮಾಡುವುದು.

9 ಉತ್ತಮ ತಳಿಯ, ಸರಿಯಾಗಿ ಬೇರು ಬಂದಿರುವ ಕರಿಮೆಣಸಿನ ಬಳ್ಳಿಗಳನ್ನು ಮಾತ್ರ ಕೃಷಿ ಇಲಾಖೆಯ ಮೂಲಕ ಕೃಷಿಕನಿಗೆ ಸಿಗುವಂತೆ ಮಾಡುವುದು.

10 ಕೃಷಿ ಇಲಾಖೆಯಿಂದ ಈಗ ದೊರಕುವ ಸೌಲಭ್ಯಗಳನ್ನು ಮುಂದುವರಿಸುವುದು.

11 ಕೃಷಿ ಅಗತ್ಯಕ್ಕಿರುವ ಸೀಮೆ ಎಣ್ಣೆ, ಕೃಷಿಕರಿಗೆ ಪರವನಾಗಿ ಮೂಲಕ ದೊರಕಿಸುವ ಭರವಸೆಯೊದಗಿಸಬೇಕು. ಸೀಮೆ ಎಣ್ಣೆಯನ್ನು ಪಂಚಾಯತ್ ಮಟ್ಟದಲ್ಲಿಯೇ ವಿತರಿಸಬೇಕು. ಕೃಷಿಗೆ ಇರುವ ವಿದ್ಯುತ್ ನಿಯಂತ್ರಣವನ್ನು ನಿಲ್ಲಿಸಬೇಕು.

12 ಬೆಳ್ಳೂರು ನೆಟ್ಟಣಿಗೆ ಗ್ರಾಮಗಳು ಬೇರೆ ಬೇರೆ ಗ್ರಾಮಗಳಾಗಿ ಕೆಲಸ ಮಾಡಿದಲ್ಲಿ ಕೃಷಿಕನಿಗೆ ಇರುವ ತೊಂದರೆಗಳನ್ನು ಕಡಿಮೆ ಮಾಡಬಹುದು. ಪ್ರತಿ ಗ್ರಾಮಕ್ಕೂ ಬೇರೆ ಬೇರೆ ಗ್ರಾಮಾಧಿಕಾರಿ, ಗ್ರಾಮ ಕಛೇರಿಗಳು ಕೃಷಿ ಭವನಗಳು ಬೇಕು.

13 ಬೇಂಕ್‌ಗಳಿಂದ ಸಿಗುವ ಸಾಲ ಸೌಲಭ್ಯಗಳನ್ನು ಪಡೆಯಲು ಈಗ ಕೃಷಿಕನಿಗೆ ಇರುವ ಸಂಕೀರ್ಣ ಮಾರ್ಗಗಳನ್ನು ಸುಗಮಗೊಳಿಸಬೇಕು.

## ಸಲಹೆಗಳು

1 ಕೃಷಿಗಾಗಿ ನೀರೆತ್ತಲು ಉಪಯೋಗಿಸುವ ಕೊಳವೆ ಬಾವಿಗಳು ಬತ್ತಿ ಹೋಗದಂತೆ ಮಳೆಗಾಲದಲ್ಲಿ ಪುನಃ ತುಂಬಿಸುವ ಕ್ರಮವನ್ನು ಕೃಷಿಕನಿಗೆ ತಿಳಿಸಿ ಕೊಡಬೇಕು.

2 ನಿರುಪಯೋಗಿ ನೆಲದಲ್ಲೂ ಕೃಷಿ ಮಾಡಲು ಹೊಸ ಮಾರ್ಗಗಳನ್ನು ಕಂಡು ಹುಡುಕಬೇಕು.

3 ಮಣ್ಣಿನ ತರಗತಿಯನ್ನನುಸರಿಸಿ ಹೊಸಬೆಳೆಗಳನ್ನು ಬೆಳೆಯಲು ತಿಳಿ ಹೇಳಬೇಕು.

4 ತರಕಾರಿಗಳನ್ನು ಬೆಳೆಸಲು ಮಾರ್ಗದರ್ಶನ, ಪ್ರೋತ್ಸಾಹವನ್ನು ಕೊಡುವುದು.

5 ಪ್ರಧಾನ ಕೃಷಿಯೊಂದಿಗೆ ಕರಿಮೆಣಸು, ಏಲಕ್ಕಿ, ಕೇನೆ, ಇತ್ಯಾದಿ ಉಪ ಬೆಳೆಗಳನ್ನು ಬೆಳಸಲು ಪ್ರೋತ್ಸಾಹಿಸಬೇಕು.

6 ಕದಳಿ, ಮೈಸೂರು, ಇತ್ಯಾದಿ ಬಾಳೆಗಳಿಗೂ, ನೇಂದ್ರ ಬಾಳೆ ಕೃಷಿಗೆ ಇರುವ ಸೌಲಭ್ಯಗಳನ್ನು ಒದಗಿಸಬೇಕು.

7 ಕೃಷಿಯನ್ನು ಅಲೆಮಾರಿ ಜಾನುವಾರುಗಳಿಂದ ರಕ್ಷಿಸಲು ಕುಳದಪಾರೆ, ಹಾಗೂ ಕಿನ್ನಿಂಗಾರುಗಳಲ್ಲಿ ಜಾನುವಾರು ದೊಡ್ಡಿ ತೆರೆಯಬೇಕು.

8 ಕಾಡು ಪ್ರಾಣಿಗಳ ಹಾವಳಿಯಿಂದ ಕೃಷಿ ಸಂರಕ್ಷಣೆಗಾಗಿ ವಿದ್ಯುತ್ ಬೇಲಿಯನ್ನು ನಿರ್ಮಿಸಬೇಕು.

9 ಕೃಷಿ ಉಪಕರಣಗಳನ್ನು ಸಬ್ಸಿಡಿ ದರದಲ್ಲಿ ಒದಗಿಸಿದರೆ ಕೃಷಿಕನಿಗೆ ಆರ್ಥಿಕ ಹೊರೆ ಕಡಿಮೆಯಾಗುವುದು.

10 ಸಬ್ಸಿಡಿ ದರದಲ್ಲಿ ಪೈಪ್ ಹಾಗೂ ಯಂತ್ರೋಪಕರಣಗಳನ್ನು ತಾನು ಬಯಸುವಲ್ಲಿಂದ ಕೊಂಡು ಕೊಳ್ಳಲು ಕೃಷಿಕನಿಗೆ ಸ್ವಾತಂತ್ರ್ಯವಿರಬೇಕು.

11 ಕೃಷಿಕನಿಗೆ ಸಬ್ಸಿಡಿ ಪಡೆಯಲು ಭೂ ಹಿಡುವಳಿಯ ಪರಿಮಿತಿ ಯನ್ನು ತೆಗೆದು ಹಾಕಬೇಕು.

12 ಹನಿ ನೀರಾವರಿ(Drip Irrigation) ಗೆ ಇರುವಂತೆ, ಸ್ಪ್ರಿಂಕ್ಲರ್, ಬಬ್ಲರ್‌ಗೂ ಸಬ್ಸಿಡಿ ಬೇಕು.

13 ಕೃಷಿಕ ಸೌಕರ್ಯಕ್ಕಾಗಿ ಕಡಿಮೆ ಬಡ್ಡಿ ದರದಲ್ಲಿ ಹಾಗೂ ಸಬ್ಸಿಡಿ ರೀತಿಯಲ್ಲಿ ಜೀಪುಕೊಳ್ಳಲು ಸಹಾಯ ಮಾಡುವುದು.

14 ಪ್ರಕೃತಿ ವಿಕೋಪದಿಂದ ತೊಂದರೆಗೀಡಾದ ಕೃಷಿಕನಿಗೆ ಸರಿಯಾದ ನಷ್ಟ ಪರಿಹಾರ ಕೊಡಬೇಕು.

15 ಸರಕಾರದಿಂದ ಕೃಷಿಕನಿಗೆ ಸಿಗತಕ್ಕ ಎಲ್ಲಾ ಸೌಲಭ್ಯಗಳೂ ಸರಿಯಾದ ಸಮಯದಲ್ಲೆ ಸಿಗಬೇಕು.

16 ಸರಕಾರದಿಂದ ಕೃಷಿಕನಿಗೆ ಸಿಗತಕ್ಕ ಆರ್ಥಿಕ ಸೌಲಭ್ಯ Check ಮೂಲಕ ನೇರ ಕೃಷಿಕನಿಗೆ ಸಿಗಬೇಕು.

17 ಕೃಷಿಕನಿಗೆ ಪಾಸ್‌ಬುಕ್ ವ್ಯವಸ್ಥೆ ಮಾಡಬೇಕು.

18 ಕ್ರಿಮಿನಾಶಕಗಳ ಉಪಯೋಗವನ್ನು ಯೋಗ್ಯ ರೀತಿಯಲ್ಲಿ ಮಾಡಲು ಮಾರ್ಗದರ್ಶನ ನೀಡುವುದು.

19 ಯಂತ್ರೋಪಕರಣಗಳ ದುರಸ್ತಿಗಾಗಿ ಪಂಚಾಯತ್ ವ್ಯಾಪ್ತಿಯಲ್ಲೇ Agro Service Centre ನ್ನು ತೆರೆಯುವುದು.

20 ಪಂಚಾಯತ್ ವ್ಯಾಪ್ತಿಯಲ್ಲಿರುವ ಸರಕಾರಿ ಭೂಮಿಯನ್ನು ಪಂಚಾಯತಿನೊಳಗಣ ಅರ್ಹ ವ್ಯಕ್ತಿಗಳಿಗೆ ಕೊಡ ಮಾಡಬೇಕು.

21 ಪಂಚಾಯತ್ ವ್ಯಾಪ್ತಿಯಲ್ಲಿ ಹೈಬ್ರೀಡ್ ತಳಿಯ ನರ್ಸರಿಗಳನ್ನು ಸ್ಥಾಪಿಸುವುದು.

22 ಪಂಚಾಯತಿನೊಳಗೆ ಯೋಗ್ಯ ಕೇಂದ್ರಗಳನ್ನು ಆರಿಸಿ ವಾರಸಂತೆ ನಡೆಸಿದರೆ ಕೊಡು ಕೊಳ್ಳುವಿಕೆಗೆ ಅನುಕೂಲ

23 "Agricultural Youth Programme" ಕೃಷಿಕರಿಗೆ ಮಾತ್ರ ಸೀಮಿತವಾಗಿದ್ದು ಅದರ ಪ್ರಯೋಜನವು ಕೃಷಿಕನಿಗೆ ಸಿಗಬೇಕು.

24 "Bio Gas Plant" ನಿರ್ಮಾಣಕ್ಕೆ 50% ವಾದರೂ ಸಬ್ಸಿಡಿ ಸಿಗಬೇಕು.

ಈ ನಿಟ್ಟಿನಿಂದ ಮುಂದಡಿಯಿಟ್ಟಲ್ಲಿ ನಮ್ಮ ಪಂಚಾಯತ್ ರಾಜ್ ವ್ಯವಸ್ಥೆಯು ಯಶಸ್ಸು ಸಾಧಿಸುವುದರಲ್ಲಿ ಸಂದೇಹವೇ ಇಲ್ಲ.

# 7

# ಮೃಗ ಸಂರಕ್ಷಣೆ

ಅನಾದಿ ಕಾಲದಿಂದಲೂ ಕೃಷಿಗೆ ಉಪಕಸುಬಾಗಿ ಗೊಬ್ಬರಕ್ಕಾಗಿ ಮತ್ತು ಹಾಲಿಗಾಗಿ ದನಗಳು ಹಾಗೂ ಇನ್ನಿತರ ಜಾನುವಾರುಗಳನ್ನೂ ಈ ಪಂಚಾಯತಿನಲ್ಲೂ ಸಾಕುತ್ತಾ ಬಂದಿದ್ದಾರೆ. ದನ, ಎಮ್ಮೆ, ಎತ್ತುಗಳು, ಆಡು, ಕೋಳಿಗಳು ಇಲ್ಲಿ ಸಾಕಲ್ಪಡುತ್ತಿವೆ. ಗೋವುಗಳನ್ನು ಹಿಂದಿನಿಂದಲೂ ಪೂಜಿಸುತ್ತಿದ್ದಂತಹ ಸ್ಥಳವಿದು. ಬೇಕಾದಷ್ಟು ಸರಕಾರಿ ಸ್ಥಳವಿದ್ದ ಹಿಂದಿನ ಕಾಲದಲ್ಲಿ ಜಾನುವಾರುಗಳನ್ನು ಹೊರಗಡೆ ಮೇಯಿಸಲು ಬಿಡುತ್ತಿದ್ದರು. ಸರಕಾರಿ ಜಮೀನುಗಳು ಕಾಲಕ್ರಮೇಣ ಕಡಿಮೆಯಾದಂತೆ ಜಾನುವಾರುಗಳನ್ನು ಹಟ್ಟಿಯಲ್ಲಿ ಕಟ್ಟಿ ಸಾಕುವ ಪರಿಸ್ಥಿತಿ ಬಂದಿದೆ. ಹಿಂದೆ ಕಂಬಳದಂತಹ ಕ್ರೀಡೆಗಳಿಗೆ ಬೇಕಾಗಿ ಕೋಣಗಳನ್ನು ಸಾಕುತ್ತಿದ್ದರು ಕೋಳಿ ಅಂಕಕ್ಕಾಗಿ ಕೋಳಿಗಳನ್ನು ಸಾಕುತ್ತಿದ್ದರು. ಗದ್ದೆ ಬೇಸಾಯಕ್ಕೋಸ್ಕರ, ಗಾಡಿಗಳನ್ನು ಎಳೆಸುವುದಕ್ಕಾಗಿ, ಇನ್ನಿತರ ಅಗತ್ಯಕ್ಕೆ ಎತ್ತುಗಳನ್ನು ಸಾಕುತ್ತಿದ್ದರು. ಊರಿನ ತಳಿಗಳು ಮಾತ್ರ ಸಾಕಲ್ಪಡುತ್ತಿದ್ದ ಕಾಲವದು.

ಕಾಲಕ್ರಮೇಣ ಪರಿಸ್ಥಿತಿಗೆ ತಕ್ಕಂತೆ ಹಾಗೂ ಮೃಗಸಂರಕ್ಷಣಾ ವಲಯದಲ್ಲಿ ಉಂಟಾದ ಕ್ರಾಂತಿಯ ಪರಿಣಾಮಗಳು ಇಲ್ಲೂ ಮೂಡತೊಡಗಿತು. ಭತ್ತದ ಕೃಷಿಯ ಬದಲು ಅಡಿಕೆ, ತೆಂಗು, ಕೃಷಿಗಳನ್ನು ಮಾಡತೊಡಗಿದ ಅನಂತರ ಎತ್ತು, ಕೋಣಗಳ ಸಂಖ್ಯೆಯಲ್ಲಿ ಇಳಿಮುಖವಾಯಿತು. ಅಧಿಕ ಹಾಲು ಉತ್ಪಾದನೆಗೆ ಮಿಶ್ರ ತಳಿ, ವಿದೇಶಿ ತಳಿಗಳ ಸಾಕಣೆ ಆರಂಭವಾಯಿತು.

Table - ಜಾನುವಾರುಗಳ ಸ್ಥಿತಿ ವಿವರ table(1) ರಲ್ಲಿ ಸೂಚಿಸಲಾಗಿದೆ.

| | 1987ರ ಜನಗಣತಿ | 1996ರಲ್ಲಿ |
|---|---|---|
| ಮಿಶ್ರ ತಳಿ ಹಸುಗಳು | 87 | 302 |
| ಊರ ದನಗಳು | 835 | 1,100 |
| ಎಮ್ಮೆಗಳು | 140 | 47 |
| ಆಡುಗಳು | 110 | 315 |
| ಕೋಳಿಗಳು (Poultry) | 1,500 | 2,615 |
| ಎತ್ತುಗಳು | 110 | 65 |
| ಕೋಣಗಳು | 26 | 20 |
| ನಾಯಿಗಳು | 1,606 | 2,060 |

ಪಂಚಾಯತಿನಲ್ಲಿ ಮೃಗಸಂರಕ್ಷಣಾ ವಲಯದ ಅಭಿವೃದ್ಧಿಗೆ ವಿಪುಲ ಅವಕಾಶಗಳಿದ್ದರೂ, ಆ ರಂಗ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದೆ. ಈ ಪಂಚಾಯತಿಗಾಗಿ ಈವರೆಗೂ ಪಶುವೈದ್ಯಕೀಯ ಆಸ್ಪತ್ರೆಯಿರದೆ, ಇತ್ತೀಚೆಗಷ್ಟೇ ಕಿನ್ನಿಂಗಾರಿನಲ್ಲಿ ಒಂದು ಪಶುವೈದ್ಯಕೀಯ ಆಸ್ಪತ್ರೆಯನ್ನು ಸ್ಥಾಪಿಸಲಾಗಿದೆ. ನಾಟೆಕಲ್ಲಿನಲ್ಲಿ ಜಾನುವಾರು ಚಿಕಿತ್ಸಾ ಉಪಕೇಂದ್ರವಿದ್ದರೂ ಸಿಬ್ಬಂದಿಯ ಕೊರತೆಯಿದೆ. ಪಂಚಾಯತಿನ ಭೌಗೋಳಿಕ ಸ್ಥಿತಿಯನ್ನು ಹೊಂದಿಕೊಂಡು ಒಂದೆರಡು ಕಡೆ ಜಾನುವಾರು ಉಪಕೇಂದ್ರಗಳನ್ನು ಸ್ಥಾಪಿಸುವ ಅಗತ್ಯವಿದೆ. ಈಗಿರುವ ಆಸ್ಪತ್ರೆ ಉಪಕೇಂದ್ರಗಳಿಗೆ ಶಾಶ್ವತ ಕಟ್ಟಡದ ಅಗತ್ಯವಿದೆ.

ಹಾಲು ಉತ್ಪಾದಕರ ಸಹಕಾರ ಸಂಘವಿಲ್ಲದಿರುವುದರಿಂದ ಹಾಲಿನ ಮಾರಾಟಕ್ಕೆ ತೊಂದರೆಯಿದೆ. ರಿಯಾಯಿತಿ ದರದ ಮೂಲಕ ಪಶು ಆಹಾರದ ವಿತರಣೆಯ ಅಗತ್ಯವಿದೆ. ಪಶು ಆಹಾರದ ವಿಪರೀತ ಬೆಲೆ ಏರಿಕೆ, ದೂರದ ಪ್ರದೇಶದಿಂದ ಪಶು ಆಹಾರವನ್ನು ತರುವುದಕ್ಕೆ ತಗಲುವ ವೆಚ್ಚ, ಕಷ್ಟಗಳು ಕೃಷಿಕರಿಗೆ ತೊಂದರೆಯನ್ನುಂಟು ಮಾಡಿವೆ. ಅಡಿಕೆ, ತೆಂಗು, ಕೃಷಿಗಳ ಮಧ್ಯೆ ಹೈಬ್ರಿಡ್ ಹುಲ್ಲು ಬೆಳೆಸುವ ಅಗತ್ಯವನ್ನು ಕೃಷಿಕರಿಗೆ ಮನದಟ್ಟು ಮಾಡಿಸಬೇಕಾಗಿದೆ.

ಊರ ತಳಿಗಳನ್ನು ಮಿಶ್ರ ತಳಿಗಳನ್ನಾಗಿಸಲು ಕೃತಕ ಗರ್ಭ ದಾರಣೆಯ ಸೇವೆಯನ್ನು ಸದುಪಯೋಗಪಡಿಸಲು ಜನರಿಗೆ ಅರಿವು ಮೂಡಿಸಬೇಕಾಗಿದೆ. ಕೆಲವರು ಈಗಾಗಲೇ ಜಾನುವಾರುಗಳಲ್ಲಿ ಕೃತಕ ಗರ್ಭದಾರಣೆ ಮಾಡಿಸುತ್ತಿದ್ದಾರೆ.

ಕೃತಕ ಗರ್ಭದಾರಣೆಯ ವಿವರ Table (2) ರಲ್ಲಿ ಕೊಡಲಾಗಿದೆ.

Table - 2

| ಸಾಕು ಪ್ರಾಣಿಗಳ ವಿವರ | ಒಟ್ಟು ಸಂಖ್ಯೆ | ಕೃತಕ ಗರ್ಭಧಾರಣೆ ನಡೆಸಿದ ಸಂಖ್ಯೆ |
|---|---|---|
| ದನಗಳು | 1,402 | 257 |
| ಗಡಸುಗಳು | 315 | 163 |
| ಎಮ್ಮೆಗಳು | 47 | 20 |

ಈ ಪಂಚಾಯತಿನ ಜಾನುವಾರುಗಳಲ್ಲಿ ಸಾಧಾರಣವಾಗಿ ಕಾಲು ಬಾಯಿ ಜ್ವರ, ಕೆಚ್ಚಲು ಬಾವು, ಮೊಡಕಪ್ಪೆ (Ephemeral Fever) ಹಾಗೂ ಇನ್ನಿತರ ಸಾಮಾನ್ಯ ರೋಗಗಳು ಬರುತ್ತವೆ. ನಾಯಿಗಳಲ್ಲಿ ಹುಚ್ಚುರೋಗದ ಬಾಧೆಯು ಕಂಡು ಬಂದಿದೆ. ಈ ರೋಗಗಳ ನಿರ್ಮೂಲನ ಹಾಗೂ ತಡೆಗಟ್ಟುವಿಕೆಗೆ ಸಮಗ್ರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಅಗತ್ಯವಿದೆ.

ಪಂಚಾಯತಿನಲ್ಲಿ ಜಾನುವಾರುಗಳಿಗೆ ಸಾಮಾನ್ಯವಾಗಿ ಬರುವ ರೋಗಗಳ ವಿವರ Table(3) ರಲ್ಲಿ ಕೊಡಲಾಗಿದೆ. (ಒಂದು ತಿಂಗಳಲ್ಲಿ)

Table - 3.

| ಕ್ರಮ ಸಂಖ್ಯೆ | ರೋಗಗಳು | ದನಕರುಗಳು | ಎಮ್ಮೆ | ಆಡು | ಹಂದಿ | ನಾಯಿ | ಕೋಳಿ |
|---|---|---|---|---|---|---|---|
| 1. | ಪಚನ ಕ್ರಿಯೆಗೆ ಸಂಬಂಧಿಸಿದ ರೋಗಗಳು | 20 | 6 | 10 | -- | 4 | 10 |
| 2. | ಶ್ವಾಸಕೋಶದ ಕಾಯಿಲೆ | 15 | 4 | 20 | -- | 10 | 40 |
| 3 | ಮೆಟಬೋಲಿಕ್ ಕಾಯಿಲೆ (metabolic) | 6 | 4 | -- | -- | -- | -- |
| 4. | ಚರ್ಮರೋಗಗಳು | 20 | 10 | 10 | -- | 20 | -- |
| 5. | ಧಾತು ಲವಣದ ಕೊರತೆಯಿಂದ ಬರುವ ಕಾಯಿಲೆ | 10 | 5 | 6 | -- | -- | -- |
| 6 | ಪರೋಪ ಜೀವಿಗಳು (parastic) | 20 | 6 | 10 | -- | 10 | -- |
| 7. | ಗರ್ಭಕೋಶದ ಕಾಯಿಲೆಗಳು | 20 | 6 | -- | -- | -- | -- |
| 8. | ಬಂಜೆತನ | 10 | 4 | 2 | -- | -- | -- |
| 9 | Mastitis | 10 | 2 | 2 | -- | -- | -- |
| 10 | ಮೊಡಕಪ್ಪೆ(Ephemeral Fever) ಮಳೆಗಾಲದಲ್ಲಿ ಮಾತ್ರ | 50 | 10 | 6 | -- | -- | -- |
| 11 | ಹರಡುವ ರೋಗಗಳು | -- | -- | | | | |

ಕೋಳಿ ಮೊಟ್ಟೆ ಉತ್ಪಾದನೆಯನ್ನು ಹೆಚ್ಚಿಸಲು ಕೊಕ್ಕರೆ ರೋಗದ ನಿಯಂತ್ರಣಕ್ಕೆ ವ್ಯಾಪಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

**ಮೃಗ ಸಂರಕ್ಷಣಾ ಇಲಾಖೆಯ ಈಗಿನ ಯೋಜನೆಗಳು :**

ಈ ಇಲಾಖೆಯಿಂದ ನಡೆಸಲ್ಪಡುವ ಹಲವು ಯೋಜನೆಗಳನ್ನು ಈ ಪಂಚಾಯತಿನಲ್ಲೂ ಆಯೋಜಿಸಿಕೊಳ್ಳಬೇಕು. ಅವುಗಳಲ್ಲಿ ಮುಖ್ಯವಾದುವು ಈ ಕೆಳಗಿನವು.

**1. ಪ್ರತ್ಯೇಕ ಮಿಶ್ರ ತಳಿ ಕರು ಪರಿಪಾಲನಾ ಯೋಜನೆ:** ಈ ಯೋಜನೆಯ ಮೂಲಕ ಈ ಪಂಚಾಯತಿನಲ್ಲಿ ಮಿಶ್ರತಳಿ ಹೆಣ್ಣು ಕರುಗಳಿಗೆ ಸಬ್ಸಿಡಿಯಲ್ಲಿ ಪಶು ಆಹಾರವನ್ನು ಒದಗಿಸಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.

**2. ಗೋ ರಕ್ಷಾ ಶಿಬಿರ :-** ಉತ್ತಮ ತಳಿಯ ದನಕರುಗಳ ಪ್ರದರ್ಶನ ಏರ್ಪಡಿಸಿ ಹೈನುಗಾರಿಕೆಯ ಬಗ್ಗೆ ವಿಚಾರಗೋಷ್ಠಿಗಳನ್ನು ವ್ಯವಸ್ಥೆಗೊಳಿಸುವುದು.

**3.** ಮೃಗಸಂರಕ್ಷಣಾ ವಲಯದಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಸಬ್ಸಿಡಿ ದರದಲ್ಲಿ ಉತ್ತಮ ತಳಿಯ ದನ, ಆಡು, ಕೋಳಿಗಳನ್ನು ವಿತರಣೆ ಮಾಡುವುದು.

**4 ಜಾನುವಾರುಗಳಲ್ಲಿ ಬಂಜೆತನ ನಿವಾರಣಾ ಕಾರ್ಯಕ್ರಮಗಳು:-** ಜಾನುವಾರುಗಳಲ್ಲಿ ಕಂಡುಬರುವ ಬಂಜೆತನದ ಕಾರಣಗಳನ್ನು ಕಂಡುಹಿಡಿದು ಅವುಗಳಿಗೆ ಉಚಿತವಾಗಿ ಚಿಕಿತ್ಸೆ ನಡೆಸುವ ಯೋಜನೆಗಳನ್ನು ರೂಪಿಸುವುದು.

**5. ದೊಡ್ಡ ರೋಗದ ನಿರ್ಮೂಲನಾ ಯೋಜನೆ (Rinderpest Iradication Scheme):-** ಎಲ್ಲಾ ದನಕರುಗಳಿಗೂ ಈ ರೋಗ ಬಾರದಂತೆ ಚುಚ್ಚುಮದ್ದನ್ನು ಕೊಡಿಸುವುದು. ಕಾಲಕಾಲಕ್ಕೆ ರಕ್ತ ಪರೀಕ್ಷೆಯ ಮೂಲಕ ರೋಗವಿದೆಯೋ ಇಲ್ಲವೋ ಎನ್ನುವುದನ್ನು ದೃಡೀಕರಿಸಿಕೊಳ್ಳುವುದು.

**6. ಆಡು ಸಾಕಣೆಗೆ ಪ್ರೋತ್ಸಾಹ :-** ಉತ್ತಮ ತಳಿಯ ಆಡುಗಳನ್ನು ಕೊಳ್ಳಲು ಸಬ್ಸಿಡಿ, ಸಹಾಯ.

**7. ಮನೆ ಹಿತ್ತಿಲಲ್ಲಿ ಕೋಳಿ ಸಾಕಣೆ :-** ಸಬ್ಸಿಡಿ ದರದಲ್ಲಿ ಉತ್ತಮ ತಳಿಯ ಸಂತಾನೋತ್ಪತ್ತಿಯ ಕೋಳಿಗಳನ್ನು ಒದಗಿಸುವುದು.

**8. ರ್‍ಯಾಬಿಸ್ ನಿಯಂತ್ರಣಾ ಯೋಜನೆ :-** ಪಂಚಾಯತಿನಲ್ಲಿರುವ ಸಾಕು ನಾಯಿಗಳಿಗೆ ಚುಚ್ಚುಮದ್ದನ್ನು ಖಡ್ಡಾಯಗೊಳಿಸಿ ಲೈಸನ್ಸ್ ಕೊಡಬೇಕು. ಸಬ್ಸಿಡಿ ದರದಲ್ಲಿ ಚುಚ್ಚುಮದ್ದನ್ನು ಕೊಡುವ ವ್ಯವಸ್ಥೆ ಈಗಾಗಲೇ ಇದೆ. ಇದನ್ನು ವ್ಯಾಪಕಗೊಳಿಸಲು ವಿಚಾರ ಸಂಕೀರ್ಣಗಳನ್ನು ಏರ್ಪಡಿಸಬೇಕು. ಬೀದಿನಾಯಿಗಳ ಸಂಹಾರಕ್ಕೆ ತಕ್ಕ ವ್ಯವಸ್ಥೆ ಮಾಡಬೇಕು. ಉಚಿತ ಚುಚ್ಚುಮದ್ದನ್ನು ನೀಡುವ ವ್ಯವಸ್ಥೆ ಮಾಡಬೇಕು.

**ಮೃಗ ಸಂರಕ್ಷಣಾ ವಲಯದಲ್ಲಿ ಈಗಿರುವ ಸಮಸ್ಯೆಗಳು :-**

1. ಜಾನುವಾರುಗಳಿಗೆ ಹಾಗೂ ಕೋಳಿಗಳಿಗೆ ಬರುವ ರೋಗಗಳು.
2. ಹುಚ್ಚು ನಾಯಿಗಳ ಕಾಟ.
3. ಪಶುವೈದ್ಯಕೀಯ ಸೌಲಭ್ಯಗಳ ಕೊರತೆ. ಸೌಲಭ್ಯವಿರುವಲ್ಲಿಗೆ ಹೋಗಲು ರಸ್ತೆಯ ಹಾಗೂ ವಾಹನದ ಕೊರತೆ.
4. ಪಶು ಆಹಾರದ ಬೆಲೆಯಲ್ಲಿ ಏರಿಕೆ.
5. ಜಾನುವಾರುಗಳಿಗೆ ಮೇವಿನ ಜಾಗದ ಕೊರತೆ.
6. ಹಾಲು ಉತ್ಪಾದಕರ ಸಹಕಾರ ಸಂಘ ಇಲ್ಲ. ಆದ್ದರಿಂದ ಹಾಲಿಗೆ ಸರಿಯಾದ ಮಾರುಕಟ್ಟೆ ಇಲ್ಲ.
7. ಕೋಳಿ ಸಾಕಣೆ, ಆಡು ಸಾಕಣೆ, ದನ ಸಾಕಣೆಗೆ ಸುಲಭದಲ್ಲಿ ರಿಯಾಯಿತಿ ದರದ ಸಾಲ ಸೌಲಭ್ಯವಿಲ್ಲದಿರುವುದು.

**ಅವಶ್ಯಕತೆಗಳು ಮತ್ತು ಸಾಧ್ಯತೆಗಳು :-**

1. ಮೃಗಸಂರಕ್ಷಣಾ ವಲಯದಲ್ಲಿ ಕಾಲಕಾಲಕ್ಕೆ ಆಗುವ ವಿಶೇಷ ಸಂಶೋಧನೆಗಳನ್ನು ಜನರಿಗೆ ತಿಳಿಸಲು ವಿಚಾರಗೋಷ್ಠಿಗಳನ್ನು (ಸೆಮಿನಾರ್) ಏರ್ಪಡಿಸುವುದು.

2. ಕಿನ್ನಿಂಗಾರಿನಲ್ಲಿರುವ ಪಶುವೈದ್ಯಕೀಯ ಆಸ್ಪತ್ರೆಯನ್ನು ಸುಸಜ್ಜಿತಗೊಳಿಸುವುದು. ಆಸ್ಪತ್ರೆ ಹಾಗೂ ವಸತಿ ಸೌಕರ್ಯಕ್ಕೆ ಸ್ವಯಂ ಕಟ್ಟಡಗಳನ್ನು ನಿರ್ಮಿಸುವುದು. ಅಗತ್ಯವಿರುವ ಬೇರೆ ಸ್ಥಳಗಳಲ್ಲಿ ಉಪಕೇಂದ್ರಗಳನ್ನು ನಿರ್ಮಿಸುವುದು.

3. ಉತ್ತಮ ತಳಿಯ ದನಗಳನ್ನು ಸಾಕಲು ರಿಯಾಯಿತಿ ದರದ ಸಾಲಗಳನ್ನು ನೀಡುವುದು. ಸರಕಾರದ ವತಿಯಿಂದ ಸಬ್ಸಿಡಿಯನ್ನು ಒದಗಿಸುವುದು. ಕಡಿಮೆ ಬೆಲೆಗೆ ಪಶು ಆಹಾರದ ವಿತರಣೆ ಮಾಡುವುದು. ಈ ಮೂಲಕ ಪರಿಶಿಷ್ಟ ವರ್ಗ, ಪರಿಶಿಷ್ಟ ಜಾತಿ ಹಾಗೂ ಮಹಿಳೆಯರನ್ನು, ದಾರಿದ್ರ್ಯ ರೇಖೆಗಿಂದ ಕೆಳಗಿರುವವರನ್ನು ಮತ್ತು ವಿಧವೆಯರನ್ನು ಹೈನುಗಾರಿಕೆಯಲ್ಲಿ ತೊಡಗಲು ಉತ್ತೇಜಿಸುವುದು.

4. ಮಿಶ್ರತಳಿ ದನಗಳ ಸಂಖ್ಯೆಯನ್ನು ಹೆಚ್ಚಿಸಲು ಕೃತಕ ಗರ್ಭಧಾರಣೆಯನ್ನು ಜನಪ್ರಿಯಗೊಳಿಸುವುದು.

5. ಗೋಮಾಳ ನಿರ್ಮಾಣಕ್ಕೆ ಸರಕಾರಿ ಭೂಮಿಯ ಕೊರತೆ ಇರುವುದರಿಂದ ಪರ್ಯಾಯ ವ್ಯವಸ್ಥೆಯಾಗಿ ಜಾನುವಾರುಗಳ ಆಹಾರವಸ್ತುಗಳನ್ನು ಉಚಿತ ಕಡಿತ ದರದಲ್ಲಿ ವಿತರಿಸುವಂತೆ ಮಾಡುವುದು.

6. ಹೈಬ್ರಿಡ್ ಹುಲ್ಲು, ಬೀಜಗಳ ವಿತರಣೆ, ಹುಲ್ಲು ಬೆಳೆಸಲು ಧನಸಹಾಯ ಒದಗಿಸುವುದು.

7 ಜೈವಿಕ ಅನಿಲ ಸ್ಥಾವರಗಳನ್ನು ಜನಪ್ರಿಯಗೊಳಿಸುವುದು (ಗೋಬರ್ ಗ್ಯಾಸ್) ಅದಕ್ಕೆ ಸಬ್ಸಿಡಿಯನ್ನು ಒದಗಿಸಬೇಕು.

8. ಆಯ್ದ ಕೇಂದ್ರದಲ್ಲಿ ಹಾಲು ಉತ್ಪಾದಕರ ಸಹಕಾರಿ ಸಂಘದ ಸ್ಥಾಪನೆ ಮಾಡುವುದು.

9 ಹಾಲಿನ ಸೋಸೈಟಿಯ ಮೂಲಕ ಸಬ್ಸಿಡಿ ದರದಲ್ಲಿ ಪಶು ಆಹಾರದ ವಿತರಣೆಯನ್ನು ಮಾಡುವುದು.

10 ಹಾಲಿನ ಸಂಸ್ಕರಣಾ ಕೇಂದ್ರಗಳನ್ನು ತೆರೆಯುವುದು, ಶೈತ್ಯಾಗಾರವನ್ನು ಸ್ಥಾಪಿಸುವುದು, ಹಾಲಿನ ಉತ್ಪನ್ನಗಳಿಗೆ ಸರಿಯಾದ ಮಾರುಕಟ್ಟೆ ಕಂಡುಕೊಳ್ಳುವುದು.

11. ಆಹಾರಕ್ಕಾಗಿ ಬಳಸುವ ಕೋಳಿಗಳನ್ನು ಸಾಕುವ ಮಾದರಿಕೇಂದ್ರವೊಂದನ್ನು ಸ್ಥಾಪಿಸುವುದು. ಸಂತಾನೋತ್ಪತ್ತಿಗಾಗಿ ಇರುವ ಕೋಳಿಗಳನ್ನು ಸಾಕುವ ಮಾದರಿ ಕೇಂದ್ರವೊಂದನ್ನು ಸ್ಥಾಪಿಸುವುದು.

12. ಆಹಾರಕ್ಕಾಗಿ ಬಳಸುವ ಕೋಳಿಗಳನ್ನು ಸಾಕುವ ಬಗ್ಗೆ ತರಬೇತಿ ಶಿಬಿರಗಳನ್ನು ಏರ್ಪಡಿಸುವುದು. ಅವುಗಳಿಗಾಗಿ ಸಾಲ ಸೌಲಭ್ಯಗಳನ್ನು ಒದಗಿಸುವ ಬಗ್ಗೆ, ಸಬ್ಸಿಡಿ ನೀಡುವ ಬಗ್ಗೆ ಮಾಹಿತಿ ಒದಗಿಸುವುದು.

13. ಮೊಲ ಸಾಕಣೆಯನ್ನು ಜನಪ್ರಿಯಗೊಳಿಸುವ ಯೋಜನೆಗಳನ್ನು ಹಮ್ಮಿಕೊಳ್ಳುವುದು.

14. ಹುಚ್ಚು ನಾಯಿ ರೋಗದ ನಿಯಂತ್ರಣಕ್ಕೆ ಸಾಮೂಹಿಕ ಯತ್ನ ಕೈಗೊಳ್ಳುವುದು.

15. ಎಲ್ಲಾ ವಾರ್ಡುಗಳಲ್ಲೂ ಜೇನು ವ್ಯವಸಾಯಕ್ಕೆ ಪ್ರೋತ್ಸಾಹ.

## ಮೊನುಗಾರಿಕೆ.

ಕಡಲತೀರ ಹಾಗೂ ನದಿತೀರಗಳಿಂದ ದೂರವಿರುವುದರಿಂದ ಇಲ್ಲಿ ಮೊನುಗಾರಿಕೆಯ ಅಭಿವೃದ್ಧಿ ಆಗಿಲ್ಲ.

**ಸಮಸ್ಯೆಗಳು :-**

1. ಮೀನು ಮಾರಾಟ ಕೇಂದ್ರವಿಲ್ಲ.
2. ಮೊನು ಮಾರಾಟಕ್ಕೆ ಕಟ್ಟಡದ ವ್ಯವಸ್ಥೆ ಇಲ್ಲ.

**ಸಾಧ್ಯತೆಗಳು :-**

1. ಮೀನಿನ ಮಾರಾಟಕ್ಕೆ ವ್ಯವಸ್ಥೆ ಮಾಡುವುದು.
2. ಮೀನು ಸಾಕಣೆಯ ಕೆರೆಗಳನ್ನು ಅಭಿವೃದ್ಧಿ ಪಡಿಸಲು ರಿಯಾಯಿತಿ ದರದಲ್ಲಿ ಸಾಲ ಸೌಲಭ್ಯಗಳನ್ನು ಒದಗಿಸುವುದು.
3. ಶುದ್ಧ ಜಲ ಮೀನುಗಾರಿಕೆಯ ಬಗ್ಗೆ ತರಬೇತಿ ನೀಡುವುದು. ಮೀನು ತಳಿಗಳನ್ನು ಒದಗಿಸುವುದು.

*****

# 8
# ವ್ಯವಸಾಯ

ಬೆಳ್ಳೂರು ಗ್ರಾಮ ಪಂಚಾಯತು ಕೃಷಿ ಪ್ರಧಾನ ಪ್ರದೇಶವಾಗಿದೆ. ಆಧುನಿಕ ರೀತಿಯಲ್ಲಿರುವ ಯಾವುದೇ ವ್ಯವಸಾಯಗಳು ಈ ಪ್ರದೇಶದಲ್ಲಿಲ್ಲ. ಪರಂಪರಾಗತ ವ್ಯವಸಾಯಗಳಾದ ಮರಕೆಲಸ, ಕಬ್ಬಿಣದ ಕೆಲಸ, ಚಾಪೆ ಹೆಣೆಯುವುದು, ಬುಟ್ಟಿ ಹೆಣೆಯುವುದು. ಮುಟ್ಟಾಳೆ ನಿರ್ಮಿಸುವಂತಹ ಕೆಲವೇ ವ್ಯಕ್ತಿಗಳಿರುವರು. ಬೀಡಿ ಕಟ್ಟುವ ಕೆಲಸ ಈ ಪ್ರದೇಶಕ್ಕೆ ಬಂದ ಮೇಲೆ ಈ ಪ್ರದೇಶದ ಮಹಿಳೆಯರಿಗೆ ಒಂದು ಉದ್ಯೋಗ ಹಾಗೂ ವರಮಾನಕ್ಕೆ ದಾರಿಯಾಯಿತು. ಆದರೆ ಈಗ ಬೀಡಿ ವ್ಯವಸಾಯದಲ್ಲಿ ಕೂಡಾ ವರ್ಷಪೂರ್ತಿಕೆಲಸ ಸಿಗುವುದಿಲ್ಲ. ಕಲ್ಲು ಕಡಿಯುವ ವ್ಯವಸಾಯದಲ್ಲಿದ್ದವರಿಗೆ ಯಂತ್ರ ಮೂಲಕ ಕಲ್ಲು ಕಡಿಯುವುದರಿಂದಾಗಿ ಉದ್ಯೋಗಾವಕಾಶ ಬಹಳಷ್ಟು ಕಡಿಮೆಯಾಯಿತು. ಈ ಪ್ರದೇಶದಲ್ಲಿ ಹೆಚ್ಚಿನ ಸ್ಥಳಕ್ಕೆ ವಿದ್ಯುತ್ ದೊರಕದಿರುವುದರಿಂದ ಯಾಂತ್ರಿಕೃತ ವ್ಯವಸಾಯದತ್ತ ಯಾರಿಗೂ ಗಮನ ಹರಿಸುವುದಕ್ಕೆ ಸಾಧ್ಯವಾಗಿಲ್ಲ. ಈ ಪ್ರದೇಶದಲ್ಲಿ ದೊರೆಯುವ ಕಚ್ಚಾವಸ್ತುಗಳನ್ನು ಉಪಯೋಗಿಸಿ ನಡೆಸುವ ಯಾವುದೇ ವ್ಯವಸಾಯಗಳು ಈ ಪ್ರದೇಶದ ಸಮೀಪದಲ್ಲೆಲ್ಲೂ ಇರುವುದಿಲ್ಲ. ಇಲ್ಲಿಯ ಮುಖ್ಯ ಬೆಳೆಗಳಾದ ಅಡಿಕೆ, ತೆಂಗು ಗೇರುಬೀಜದ ಉತ್ಪನ್ನಗಳನ್ನು ಉಪಯೋಗಿಸಿ ವ್ಯವಸಾಯಗಳನ್ನು ಆರಂಭಿಸಬೇಕು. ಇದರಿಂದ ಕೃಷಿ ಉತ್ಪನ್ನಗಳಿಗೆ ಉತ್ತಮ ಬೆಲೆಯೂ ದೊರಕಬಹುದು. ವ್ಯವಸಾಯದಿಂದ ಈ ಪ್ರದೇಶದ ಜನರಿಗೆ ಉದ್ಯೋಗಾವಕಾಶವೂ ಲಭಿಸಬಹುದು. ಇದಕ್ಕಾಗಿ ನೂತನ ಯೋಜನೆಗಳನ್ನು ತಯಾರಿಸಬೇಕಾಗಿದೆ.

**ಬೆಳ್ಳೂರು ಗ್ರಾಮ ಪಂಚಾಯತು ಪ್ರದೇಶದಲ್ಲಿ ಸಿಗುವ ಅಸಂಸ್ಕೃತ ಪದಾರ್ಥಗಳನ್ನು ಉಪಯೋಗಿಸಿ ನಡೆಸಬಹುದಾದ ಗುಡಿಕೈಗಾರಿಕೆಗಳು.**

1. ಗೇರು ಹಣ್ಣು, ಹಲಸಿನ ಹಣ್ಣು ಮಾವಿನ ಹಣ್ಣು, ಅನನಾಸು, ಬಾಳೆ ಹಣ್ಣು, ನಿಂಬೆಹುಳಿ, ಪುನರ್ಪುಳಿ ಮೊದಲಾದ ಹಣ್ಣುಗಳನ್ನು ಉಪಯೋಗಿಸಿ ಜಾಂ, ಜೆಲ್ಲಿ, ಸಿರಪ್ ಮುಂತಾದವುಗಳ ತಯಾರಿ.
2. ತೆಂಗಿನ ನಾರಿನಿಂದ ಕುಂಚ ಹಾಗೂ ಪೋರಕೆಗಳಂತಹ ವಸ್ತುಗಳ ತಯಾರಿ.
3. ಗೆರಟೆಯಿಂದ ಸೌಟು, ಆಟಿಕೆ, ಬಟನ್ ಮುಂತಾದವುಗಳ ನಿರ್ಮಾಣ.
4. ವಿವಿಧ ಪದಾರ್ಥಗಳ ಉಪ್ಪಿನಕಾಯಿ, ಬೇವಿನ ಸೊಪ್ಪಿನ ಚಟ್ನಿ ಹುಡಿ, ಹಾಗಲಕಾಯಿ, ಮೆಣಸುಗಳಿಂದ ತಯಾರಿಸುವ ಸಂಡಿಗೆ, ಬಾಳಕ, ಶ್ಯಾವಿಗೆ, ಹಪ್ಪಳ ಮೊದಲಾದ ಆಹಾರೋತ್ಪನ್ನಗಳು.
5. ಹಲಸಿನ ಹಣ್ಣಿನಿಂದ ಮಧುರ ಫಲಾಹಾರಗಳು.
6. ಚಾಪೆ, ಬುಟ್ಟಿ, ಹಿಡಿಸೂಡಿ, ಮುಟ್ಟಾಳೆ, ಮರದ ಚೆರಿಗೆ, ಮರಿಗೆ, ಹತ್ತಿಯಿಂದ ನೂಲು ತೆಗೆದು ಯಜ್ಞೋಪವೀತ ಮೊದಲಾದವುಗಳ ತಯಾರಿ
7. ಬಾಳನಾರು, ಅನನಾಸು, ಕಿತ್ತಳೆ ದಡ್ನೊಳ ನಾರುಗಳಿಂದ ಚೀಲ ವಿವಿಧ ಅಲಂಕಾರಿಕ ವಸ್ತುಗಳನ್ನು ತಯಾರಿಸುವುದು.
8. ನಾಡವೈದ್ಯ ಪದ್ಧತಿಯಲ್ಲಿ ವಿವಿಧ ಔಷಧ ತಯಾರಿಸುವುದು.
9. ಕೃಷಿ ಉಪಕರಣಗಳನ್ನು ತಯಾರಿಸುವುದು.
10. ಮರದ ಪೀಠೋಪಕರಣಗಳನ್ನು ತಯಾರಿಸುವುದು.
11. ಜೇನು ವ್ಯವಸಾಯ ಪ್ರಾರಂಭಿಸುವುದು.
12. ಕೋಳಿ ಸಾಕಣೆ
13. ಗೇರುಬೀಜವನ್ನು ಸಂಸ್ಕರಿಸಿ ಬೊಂಡು ತೆಗೆಯುವುದು.

**ಇಲ್ಲಿಯ ಅಸಂಸ್ಕೃತ ಪದಾರ್ಥಗಳನ್ನು ಉಪಯೋಗಿಸಿ ನಡೆಸಬಹುದಾದ ಕಿರುಕೈಗಾರಿಕೆಗಳು.**

1. ಕೊಬ್ಬರಿ ವ್ಯವಸಾಯ.
2. ತೆಂಗಿನ ಕಾಯಿಯ ಹುಡಿ ತಯಾರಿಸುವುದು.
3. ತೆಂಗಿನ ಕಾಯಿಯ ಕ್ರೀಂ, ಸಂಸ್ಕರಿಸಲ್ಪಟ್ಟ ತೆಂಗಿನ ಹಾಲು.
4. ತೆಂಗಿನ ಎಣ್ಣೆ ತೆಗೆಯುವುದು.
5. ತೆಂಗಿನ ನೀರಿನ ಪಾನೀಯ
6. ತೆಂಗಿನ ಮರವನ್ನು ಉಪಯೋಗಿಸಿ ಕಟ್ಟಡ ನಿರ್ಮಾಣಕ್ಕೆ ಬೇಕಾಗುವ ಸಾಮಾಗ್ರಿಗಳ ತಯಾರಿ.
7. ತೆಂಗಿನ ನಾರಿನ ಉತ್ಪನ್ನಗಳ ವ್ಯವಸಾಯ
8. ತೆಂಗಿನ ಗೆರಟೆಯಿಂದ ತಯಾರಿಸುವ ವಿವಿಧ ಸಾಮಾಗ್ರಿಗಳ ವ್ಯವಸಾಯ.
9. ವಿವಿಧ ತರದ ಹಾಲಿನ ಉತ್ಪನ್ನಗಳು.
10. ಬೇಕರಿ ಉತ್ಪನ್ನಗಳು.
11. ಮರದ ಪೀಠೋಪಕರಣಗಳು ಮತ್ತು ಗೃಹೋಪಯೋಗಿ ವಸ್ತುಗಳು.
12. ತಲೆದಿಂಬು, ಹಾಸಿಗೆ ನಿರ್ಮಾಣ.
13. ಅಡಿಕೆಯನ್ನು ಹುಡಿನಾಡಿ ಸುಗಂಧ ದ್ರವ್ಯ ಸೇರಿಸಿ ತಿನ್ನಲು ಯೋಗ್ಯವಾಗುವಂತೆ ಪೊಟ್ಟಣಗಳಲ್ಲಿ ಸಂಗ್ರಹಿಸುವುದು.

ಇದೇ ಬಗೆಯಲ್ಲಿ ಅಡಿಕೆಯಿಂದ ಇತರ ಉತ್ಪನ್ನಗಳ ತಯಾರಿ.

14. ಅಡಿಕೆ ಮರದ ಹಾಳೆಯಿಂದ ಪ್ಲೇಟು, ಮುಟ್ಟಾಳೆಗಳ ತಯಾರಿ.
15. ಅಡಿಕೆ ಮರದಿಂದ ವಿವಿಧ ಉಪಕರಣ, ಪೀಠೋಪಕರಣ, ಕಟ್ಟಡ ನಿರ್ಮಾಣ ಸಾಮಾಗ್ರಿಗಳ ತಯಾರಿ.
16. ಅಡಿಕೆ ಸಿಪ್ಪೆಯಿಂದ ಹಗ್ಗ, ರಟ್ಟು ಮುಂತಾದ ಉತ್ಪನ್ನಗಳ ತಯಾರಿ. ಹಾಸಿಗೆ ಹಾಗೂ ಸೋಫಾಗಳಿಗೆ ಹತ್ತಿಯ ಬದಲು ಬಳಸುವುದು.
17. ಗೆರಟೆಯುಷ್ಟು ಪುಡಿಮಾಡಿ ಕಪ್ಪು ಕಾವಿ, ಸನ್‌ಮೈಕ್‌ಗಳಂತಹ ವಸ್ತುಗಳ ತಯಾರಿ.
18. ಅಡಿಕೆ ಸಿಪ್ಪೆ ಮತ್ತು ಇತರ ಹಾಳಾಗುವ ಕಚ್ಚಾವಸ್ತು ಉಪಯೋಗಿಸಿ ಎರೆಹುಳಗೊಬ್ಬರ ತಯಾರಿ, ಕೋಳಿಗೊಬ್ಬರ ತಯಾರಿ
19. ಸೊಪ್ಪು, ಸಾವಯವ ವಸ್ತು, ಮೀನುಗಳನ್ನು ಉಪಯೋಗಿಸಿ ಸಾವಯವ ಗೊಬ್ಬರ ತಯಾರಿ
20. ರಬ್ಬರ್ ಹಾಲು ಸಂಗ್ರಹ, ಉತ್ಪನ್ನ ತಯಾರಿ, ಸಿದ್ಧವಸ್ತುಗಳ ಉತ್ಪಾದನೆ, ಮಾರಾಟ ರಂಗದಲ್ಲಿ ಒಂದು ಕಿರುಕೈಗಾರಿಕೆಗೆ ಯೋಜನೆ ತಯಾರಿ.

**ಕೆಳಗಿನ ಹೊಸ ವ್ಯವಸಾಯಗಳನ್ನು ಪ್ರಾರಂಭಿಸಿ ಜನರಿಗೆ ಸ್ವ ಉದ್ಯೋಗ ಅವಕಾಶ ಒದಗಿಸಿಕೊಡಬಹುದು.**

1. ಕಲ್ಲು ಕಡಿಯುವ ವ್ಯವಸ್ಥೆಯನ್ನು ವ್ಯಾಪಕಗೊಳಿಸಿ ಕಿರು ಕೈಗಾರಿಕೆ ವ್ಯಾಪ್ತಿಯೊಳಗೆ ಸೇರಿಸಿ ಸಹಾಯಧನ ಒದಗಿಸುವುದು. ಕಲ್ಲು ಕಡಿಯಲು ಪರವಾನಿಗೆಯನ್ನು ಪಂಚಾಯತಿನಿಂದಲೇ ಒದಗಿಸುವ ವ್ಯವಸ್ಥೆ ಮಾಡಬೇಕು.
2. ಕಗ್ಗಲ್ಲಿನ ಕೋರೆಯಲ್ಲಿ ಕಲ್ಲು ಒಡೆಯುವ, ಜಲ್ಲಿ ಮಾಡುವ ಉದ್ಯೋಗ ಕಲ್ಪಿಸುವುದು.
3. ಗೇರೇಜು ನಿರ್ಮಿಸಲು ಬೇಕಾದ ಪ್ರೋತ್ಸಾಹ, ತಿರವು, ಪರವಾನಿಗೆ ನೀಡುವುದು.
4. ಸಿದ್ಧ ಉಡುಪು, ಶಾಲಾ ಮಕ್ಕಳ ಚೀಲ, ಇತರ ಚೀಲಗಳನ್ನು ತಯಾರಿಸುವುದು.
5. ನೋಟ್ಸ್ ಪುಸ್ತಕ, ಬುಕ್ ಬೈಂಡಿಂಗ್ ವ್ಯವಸಾಯ ಪ್ರಾರಂಭಿಸುವುದು.
6. ಕಸೂತಿ, ವ್ಯವಸಾಯ ಸ್ಥಾಪಿಸುವುದು.
7. ಸಿಮೆಂಟಿನಿಂದ ಬಾಗಿಲು, ಕಿಟಿಕಿ, ಮುಂತಾದ ಗೃಹನಿರ್ಮಾಣ ಕೈಗಾರಿಕೆ ತೆರೆಯುವುದು.
8. ರೇಡಿಯೋ ರಿಪೇರಿ, ಟಿ. ವಿ. ರಿಪೇರಿ, ವಾಚು ರಿಪೇರಿ ಮುಂತಾದ ಇಲೆಕ್ಟ್ರೋನಿಕ್ ವರ್ಕ್‌ಶೋಪ್ ಪ್ರಾರಂಭಿಸುವವರಿಗೆ ಪ್ರೋತ್ಸಾಹ, ಸಹಾಯಧನ, ಪರವಾನಿಗೆ ನೀಡುವುದು.
9. ವಿದ್ಯುತ್ ಒದಗಿಸಿ ವೆಲ್ಡಿಂಗ್ ಮೂಲಕ ಉಪಕರಣಗಳ ತಯಾರಿಗೆ ಪ್ರೋತ್ಸಾಹ ನೀಡುವುದು.
10. ತುರ್ತು ದೀಪ ತಯಾರಿಸುವ ಘಟಕ ತೆರೆಯುವುದು.
11. ಆಗ್ರೋ ಸರ್ವಿಸ್ ಸೆಂಟರನ್ನು ತೆರೆಯುವುದು.

**ಸಮಸ್ಯೆಗಳು.**

1. ವ್ಯವಸ್ಥಿತವಾದ ಒಂದು ಸಂಘ ಇಲ್ಲದಿರುವುದು.
2. ಸ್ಥಳೀಯ ಲಭ್ಯವಿರುವ ಕಚ್ಚಾವಸ್ತುಗಳನ್ನು ಉಪಯೋಗಿಸಿ ಉತ್ಪನ್ನ ತಯಾರಿಸಲು ಸಾಕಷ್ಟು ಅನುಭವದ ಕೊರತೆ ಯೋಗ್ಯ ತಾಂತ್ರಿಕ ತರಬೇತಿ, ಮಾರ್ಗದರ್ಶನ ಇಲ್ಲದಿರುವುದು.
3. ಕೈಗಾರಿಕೆ ಪ್ರಾರಂಭಿಸಲು ಸೂಕ್ತ ಕಟ್ಟಡಗಳ ಕೊರತೆ.
4. ಹೊರಗಿನಿಂದ ತರಬೇಕಾದ ಕಚ್ಚಾವಸ್ತು, ಚಿಕ್ಕಯಂತ್ರಗಳು ಮುಂತಾದವುಗಳ ಕ್ರೋಢೀಕರಣಕ್ಕೆ ತಾಂತ್ರಿಕ , ಆರ್ಥಿಕ ತೊಂದರೆಗಳು.
5. ಕಿರು ಕೈಗಾರಿಕಾ ಸಂಕೀರ್ಣ ಸ್ಥಾಪನೆಗೊಳ್ಳದಿರುವುದು.
6. ವಿದ್ಯುತ್ ಸೌಕರ್ಯದ ಅಭಾವ.
7. ಬೀಡಿ ಕಾರ್ಮಿಕರ ಬೋನಸ್ ವಿತರಣೆ ಸರಿಯಾಗಿ ಆಗದಿರುವುದು.
8. ಕಗ್ಗಲ್ಲಿನ ಕೋರೆಗಳಲ್ಲಿ ಯಂತ್ರಗಳ ಉಪಯೋಗ ಇದರಿಂದ ಉದ್ಯೋಗಾವಕಾಶ ಕಡಿಮೆಯಾಗುವುದು. ಪರಿಸರ ಮಾಲಿನ್ಯ ಉಂಟಾಗುವುದು.

**ಪರಿಹಾರ ಮಾರ್ಗಗಳು.**

1. ಕೈಗಾರಿಕೋತ್ಪನ್ನಗಳನ್ನು ಯೋಗ್ಯ ಬೆಲೆಗೆ ಮಾರಾಟ ಮಾಡಲು, ಪಂಚಾಯತು ಮಟ್ಟದಲ್ಲಿ ಒಂದು ಕೇಂದ್ರೀಕೃತ ಮಾರುಕಟ್ಟೆಯ ವ್ಯವಸ್ಥೆ.
2. ಕೈಗಾರಿಕೆಗಳಿಗೆ ಬೇಕಾದ ತಾಂತ್ರಿಕ ತರಬೇತಿ ಧನಸಹಾಯ ಒದಗಿಸುವುದು. ಆಧುನಿಕ ಸೌಲಭ್ಯಗಳಿಂದ ಕೂಡಿದ ಕೈಗಾರಿಕಾ ಸಂಕೀರ್ಣ ಒದಗಿಸುವುದು ). ಬೇಕಾದ ಕಚ್ಚಾ ವಸ್ತುಗಳ ಪೂರೈಕೆಗಾಗಿ ಸುಸಂಘಟಿತ ಸರಬರಾಜು ಕೇಂದ್ರದ ಸ್ಥಾಪನೆ, ಕಚ್ಚಾ ಹಾಗೂ ಸಿದ್ಧವಸ್ತುಗಳ ಗುಣಮಟ್ಟ ಪರೀಕ್ಷೆಯ ವ್ಯವಸ್ಥೆ ಮಾಡುವುದು.

3. ವ್ಯವಸಾಯಾಕಾಂಕ್ಷಿಗಳ ಯಾದಿಯ ತಯಾರಿ ಮಾಡಿ ವ್ಯವಸಾಯದ ಬಗೆಗೆ ಸ್ಟೈಫೆಂಡರಿ ಸಹಿತ ತರಬೇತಿ. ನಿರ್ವಹಣಾ ಸಾಮರ್ಥ್ಯದ ಬಗೆಗೆ ಪರೀಕ್ಷೆ, ವ್ಯವಸಾಯ ಆರಂಭಿಸಲು ಸಬ್ಸಿಡಿ ದರದಲ್ಲಿ ಅಗತ್ಯವಿರುವಷ್ಟು ಆರ್ಥಿಕ ಸಹಾಯಕ್ಕೆ ಬೆಂಬಲ, ವ್ಯವಸಾಯದ ಕಾರ್ಯದಕ್ಷತೆಯ ಪರಿಶೀಲನೆಯ ವ್ಯವಸ್ಥೆ ಮಾಡುವುದು.

4. ಕೊಬ್ಬರಿ ಎಣ್ಣೆ ಮಿಲ್ಲು, ಭತ್ತದ ಮಿಲ್ಲು, ಅವಲಕ್ಕಿ ಮಿಲ್ಲು ಎರೆಹುಳ ಗೊಬ್ಬರ, ಸಾವಯವ ಗೊಬ್ಬರ, ಕಲ್ಲು ಕಡಿಯುವುದು, ಮುಂತಾದ ಕೈಗಾರಿಕೆಗಳನ್ನು ವ್ಯವಸಾಯ ಸಂಕೀರ್ಣದ ಹೊರಗೆ ಮಾಡಬೇಕಾದಾಗ ಆ ಸ್ಥಳಗಳನ್ನು ಗುರುತಿಸಿ ಪ್ರಾರಂಭಿಸಲು ಅನುವು ಮಾಡಿಕೊಡಬೇಕು.

5. ವ್ಯವಸಾಯ ಆರಂಭಿಸಲು ಅಡ್ಡಿಯಾಗುವ ಸಂಕೀರ್ಣ ನಿಯಮಾವಳಿಗಳನ್ನು ಹೋಗಲಾಡಿಸಿ ಪರವಾನಿಗೆಯನ್ನು ನೀಡಲು ಪಂಚಾಯತಿಗೆ ಅಧಿಕಾರ ನೀಡುವುದು.

6. ಬೀಡಿ ಕಾರ್ಮಿಕರ ಬೋನಸ್ ವಿತರಣೆಯಲ್ಲಿ ಅವ್ಯವಹಾರ ತಡೆಯಲು ಪಂಚಾಯತು ಮಟ್ಟದ ಕಮಿಟಿ ನಿರ್ಮಿಸಿ ಪರಿಶೀಲಿಸುವುದು.

7. ಕೈಗಾರಿಕಾ ಕಾರ್ಮಿಕರು ಸರಕಾರದಿಂದ ಸವಲತ್ತುಗಳನ್ನು ಪಡೆಯಲು ತಮ್ಮ ಕೆಲಸದ ವಿವರಣೆಗಳನ್ನು ಪಂಚಾಯತಿನಲ್ಲಿ ನೊಂದಾಯಿಸಿ ಅಧಿಕೃತ ಪ್ರಮಾಣ ಪತ್ರವನ್ನು ಸ್ವೀಕರಿಸಿಕೊಳ್ಳುವಂತೆ ಕ್ರಮಕ್ಕೆಗೊಳ್ಳುವುದು.

8. ವನಿತಾ ಕೈಗಾರಿಕಾ ಘಟಕಗಳನ್ನು ತೆರೆಯುವುದು. ಕೊರಗ ಜನಾಂಗದ ಎರಡು ಕುಟುಂಬಗಳ ಮಾತ್ರ ಈಗ ಇಲ್ಲಿ ನೆಲೆಸಿದ್ದಾರೆ. ಇವರು ಶಾಶ್ವತವಾಗಿ ಇಲ್ಲಿ ನೆಲೆ ನಿಲ್ಲಲು ವ್ಯವಸಾಯ ಕಲ್ಪಿಸುವುದು. ವಿಶೇಷವಾದ ಪ್ರೋತ್ಸಾಹ ನೀಡುವುದು.

#####

# 9

# ವಿದ್ಯಾಭ್ಯಾಸ

ಕಾಸರಗೋಡು ಜಿಲ್ಲೆಯಲ್ಲಿರುವ ಪಂಚಾಯತುಗಳಲ್ಲಿ ವಿಸ್ತೀರ್ಣದಲ್ಲಿಯೂ, ಜನಸಂಖ್ಯೆಯಲ್ಲಿಯೂ ಅತಿ ಚಿಕ್ಕದು "ಬೆಳ್ಳೂರು ಗ್ರಾಮ ಪಂಚಾಯತು". ಇಲ್ಲಿ ಕೇವಲ ನಾಲ್ಕು ವಿದ್ಯಾಸಂಸ್ಥೆ ಗಳು ಕಾರ್ಯವೆಸಗುತ್ತಿವೆ. ಇವುಗಳಲ್ಲಿ ಬೆಳ್ಳೂರಿನಲ್ಲಿ ಪ್ರೌಢಶಾಲೆ, ನೆಟ್ಟಣಿಗೆಯಲ್ಲಿ ಕಿರಿಯ ಪ್ರಾಥಮಿಕ ಶಾಲೆಯು ಸರಕಾರದ ವತಿಯಿಂದ ನಡೆಸಲ್ಪಡುತ್ತದೆ ಮತ್ತು ಎಲ್. ಪಿ. ಶಾಲೆ, ಪನೆಯಾಲ ಹಾಗೂ ಎಲ್. ಪಿ. ಶಾಲೆ, ಕಕ್ಕೆಬೆಟ್ಟು, ಐಡೆಡ್ ಶಾಲೆಗಳಾಗಿಯೂ ವಿದ್ಯಾದಾನ ಮಾಡುತ್ತಿವೆ. ಈ ಪಂಚಾಯತಿನ IIIನೇ ವಾರ್ಡಿನಲ್ಲಿರುವ ನೆಟ್ಟಣಿಗೆ ಪ್ರಾಥಮಿಕ ಶಾಲೆಯಲ್ಲಿ, Vನೇ ವಾರ್ಡಿನಲ್ಲಿರುವ ಪನೆಯಾಲ ಪ್ರಾಥಮಿಕ ಶಾಲೆಯಲ್ಲಿ ಮತ್ತು VIನೇ ವಾರ್ಡಿನಲ್ಲಿರುವ ಕಕ್ಕೆಬೆಟ್ಟು ಪ್ರಾಥಮಿಕ ಶಾಲೆಯಲ್ಲಿ ಕನ್ನಡ ಭಾಷೆಯಲ್ಲಿಯೂ VIIIನೇ ವಾರ್ಡಿನಲ್ಲಿರುವ ನಾಟೆಕಲ್ಲಿನ ಬೆಳ್ಳೂರು ಪ್ರೌಢಶಾಲೆಯಲ್ಲಿ ಕನ್ನಡ ಮತ್ತು ಮಲೆಯಾಳ ಭಾಷೆಗಳಲ್ಲಿಯೂ ವಿದ್ಯಾದಾನ ನಡೆಯುತ್ತಿದೆ. ಇವುಗಳಲ್ಲದೆ Iನೇ ವಾರ್ಡಿನ ಈಂದು ಮೂಲೆಯಲ್ಲಿ ಒಂದು ಅಂಗನವಾಡಿ ಇದೆ. ಇದರಲ್ಲಿ 5 ವರ್ಷದೊಳಗಿನ ಪ್ರಾಯದ ಸಾಧಾರಣವಾಗಿ 10 ರಿಂದ 15 ಮಕ್ಕಳು ಪ್ರಯೋಜನ ಪಡೆಯುತ್ತಿರುವರು. ಇದಲ್ಲದೆ 5ನೇ ವಾರ್ಡಿನ ಬೆಳ್ಳೂರು (ನೇಜಿಕ್ಕಾರು) ಎಂಬಲ್ಲಿ 1 ಅಂಗನವಾಡಿ ಮತ್ತು 1 ಆಂಗ್ಲಮಾಧ್ಯಮ ಪೂರ್ವ ಪ್ರಾಥಮಿಕ ಶಾಲೆಯೂ ಕಾರ್ಯವೆಸಗುತ್ತಿವೆ.

**ಸರಕಾರಿ ಪ್ರೌಢಶಾಲೆ ಬೆಳ್ಳೂರು :** 1947ನೇ ವರ್ಷದಲ್ಲಿ ಬೆಳ್ಳೂರು ಶಾಲೆಯು ಎಲ್. ಪಿ. ಶಾಲೆಯಾಗಿ ಪ್ರಾರಂಭಗೊಂಡು, 1952ರಲ್ಲಿ 8ನೇ ಕ್ಲಾಸಿನವರೆಗೆ ಭಡ್ತಿ ಹೊಂದಿತು. 1956ರಲ್ಲಿ ಯು. ಪಿ. ವಿಭಾಗವು ಪ್ರಾರಂಭವಾಯ್ತು. 1956 ರಿಂದ 1978ರ ವರೆಗೆ ಯು. ಪಿ. ಯಾಗಿ ಮುಂದುವರಿದು 1979 ರಿಂದ ಪ್ರೌಢಶಾಲೆಯಾಗಿ ಭಡ್ತಿ ಹೊಂದಿತು. ಆ ಸಮಯದಲ್ಲಿ ಒಟ್ಟು ಮಕ್ಕಳ ಸಂಖ್ಯೆ 653. ಎಲ್. ಪಿ. ಯಾಗಿ ಪ್ರಾರಂಭಗೊಂಡಾಗ 15'x40'ರ ಒಂದು ಕಟ್ಟಡವು ಉದಾರ ದಾನವಾಗಿ ಶಾಲೆಗೆ ಸಿಕ್ಕಿತು. 195-54ರಲ್ಲಿ ಸರಕಾರವು 20'x80'ರ ಒಂದು ಕಟ್ಟಡವನ್ನು ಕಟ್ಟಿಸಿಕೊಟ್ಟಿತು. 1969ನೇ ವರ್ಷದಲ್ಲಿ 1ನೇ ತರಗತಿಯಲ್ಲಿ ಮಲೆಯಾಳ ವಿಭಾಗ ಪ್ರಾರಂಭಗೊಂಡಿತು. ವರ್ಷದಿಂದ ವರ್ಷಕ್ಕೆ ಮಕ್ಕಳ ಸಂಖ್ಯೆ ಹೆಚ್ಚುತ್ತಾ ಬಂತು. 1979 ರಿಂದ 1996ರವರೆಗೆ ಊರವರು, P. T. A. ಮತ್ತು ಸ್ಥಳೀಯ ಪಂಚಾಯತುಗಳು ಒಟ್ಟು ಸೇರಿ 20'x80'ರ ಶಾಶ್ವತ ಕಟ್ಟಡ, 20'x60'ರ 2 ಹುಲ್ಲು ಹೊದೆಸಿದ ಶೆಡ್ಡ್‌ಗಳನ್ನು ಕಟ್ಟಿಸಿಕೊಟ್ಟಿತು. ಈಗ ಸುಮಾರು 1,450 ಮಕ್ಕಳು ವಿದ್ಯಾರ್ಜನೆ ಮಾಡುತ್ತಿರುವರು. ಈಗಿನ ಸ್ಥಿತಿಯಲ್ಲಿ 14 ತರಗತಿಗಳಿಗೆ ಮಾತ್ರ ಸೌಕರ್ಯವಿರುವುದಾದರೂ, ಈ ತರಗತಿಗಳಲ್ಲಿ 1,405 ಮಕ್ಕಳನ್ನು ತುಂಬಿಸಿ ವಿದ್ಯಾರ್ಜನೆ ಮಾಡಿಸುವುದು ವಾಸ್ತವವಾಗಿರುವುದು, ಮಳೆ ಬಿಟ್ಟ ಮೇಲೆ, ಮರದ ಬುಡದಲ್ಲಾಗಲೀ, ಜಗಲಿಯಲ್ಲಾಗಲೀ ಮಕ್ಕಳು ವಿದ್ಯಾರ್ಜನೆ ಮಾಡುವ ದೃಶ್ಯವು ಸರ್ವೇ ಸಾಮಾನ್ಯವಾಗಿರುವುದರಿಂದ ಇಲ್ಲಿ 23 ಕೋಣೆಗಳಿರುವ ಕಟ್ಟಡಗಳು ಅತಿ ಅಗತ್ಯವಾಗಿದೆ. 1981 ರಿಂದ 1990ರ ವರೆಗಿನ ವಿದ್ಯಾಭ್ಯಾಸದ ಫಲಿತಾಂಶವು ಬಹಳ ಉತ್ತಮವಿದ್ದು ಕಲಿಯುವಿಕೆಗೆ ಕಟ್ಟಡಗಳ ಅಸೌಕರ್ಯದಿಂದಾಗಿ ಫಲಿತಾಂಶವೂ ಕಡಿಮೆಯಾಗುತ್ತಾ ಬಂತು. I ರಿಂದ IVರ ವರೆಗಿನ ತರಗತಿಗಳಲ್ಲಿ ಮಲೆಯಾಳ ಮತ್ತು ಕನ್ನಡ ಮಾಧ್ಯಮದ ವಿಭಾಗಗಳಲ್ಲಿ 303+246+549 ಮಕ್ಕಳಿದ್ದು ಕೇವಲ 6 ಕೋಣೆಗಳಿರುವ ಕಟ್ಟಡಗಳಲ್ಲಿ ಬಹಳ ಕಷ್ಟದಿಂದ ಕಲಿಯುತ್ತಿರುವರು. ಸ್ಥಳಾವಕಾಶವು ತೀರ ಕಡಿಮೆಯಾದುದರಿಂದ ಕಲಿಯುವಿಕೆಯ ಗುಣಮಟ್ಟವೂ ಹೀನಸ್ಥಿತಿಗೆ ಬರುತ್ತಾ ಇದೆ. ಈ ಶಾಲೆಗೆ ಸರಾಸರಿ 4 K.M. ದೂರದಿಂದ ಮಕ್ಕಳು ಕಾಲ್ನಡಿಗೆಯಿಂದಲೇ ವಿದ್ಯಾರ್ಜನೆಗಾಗಿ ಬರುತ್ತಾರೆ. ಪ್ರೌಢಶಾಲೆಗಳಲ್ಲಿ ಬೋಧನೋಪಕರಣಗಳು ಇದ್ದರೂ ಅವುಗಳನ್ನು ಜಾಗ್ರತೆಯಾಗಿ ತೆಗೆದಿರಿಸಲು ಸ್ಥಳಾವಕಾಶದ ಕೊರತೆಯಿಂದಾಗಿ ಅವುಗಳ ಪ್ರಯೋಜನ ಪಡೆಯಲು ಕಷ್ಟವಾಗಿರುವುದು. ಈ ಗ್ರಾಮ ಪಂಚಾಯತಿನಲ್ಲಿ ಎಸ್. ಎಸ್. ಎಲ್. ಸಿ. ಕಳೆದ ಬಳಿಕ ಮಕ್ಕಳಿಗೆ ತಮ್ಮ ಮುಂದಿನ ವಿದ್ಯಾಭ್ಯಾಸವನ್ನು ಮುಂದುವರಿಸಲು ಕಾಲೇಜು ಇಲ್ಲದಿರುವುದರಿಂದ ಬಹಳ ಕಷ್ಟ ಪಡುವರು. ಮೇಲಿನ ತರಗತಿಗಳಿಗೆ ತಲಪುವಾಗ ಹುಡುಗಿಯರ ಸಂಖ್ಯೆಯು ಗಣನೀಯವಾಗಿ ಕುಸಿಯುತ್ತಿದೆ.

ತಖ್ತೆ -1

## ಶಾಲೆಗಳ ಅಂಕೆ ಸಂಖ್ಯೆಗಳು

| ಶಾಲೆಗಳ ಹೆಸರು | ಒಟ್ಟು ಮಕ್ಕಳ ಸಂಖ್ಯೆ | | | ಪರಿಶಿಷ್ಟ ಜಾತಿ/ ಪಂಗಡ (SC/ST) | | | ಇತರರು | | | ಅಧ್ಯಾಪಕರು | | | ಅಧ್ಯಾಪಕೇತರರು | | | Drop outs | | |
|---|---|---|---|---|---|---|---|---|---|---|---|---|---|---|---|---|---|---|
| | ಗ | ಹೆ | ಒ | ಗ | ಹೆ | ಒ | ಗ | ಹೆ | ಒ | ಗ | ಹೆ | ಒ | ಗ | ಹೆ | ಒ | ಗ | ಹೆ | ಒ |
| ಸರಕಾರಿ ಪ್ರೌಢ ಶಾಲೆ, ಬೆಳ್ಳೂರು | 201 | [illegible] | [illegible] | 26 | 19 | 45 | 175 | 133 | 308 | 13 | 1 | 14 | 5 | -- | 5 | 12 | 8 | 20 |
| U. P. ವಿಭಾಗ, ಬೆಳ್ಳೂರು | | | | 48 | 31 | 79 | 187 | 210 | 397 | 11 | 1 | 12 | -- | -- | -- | 6 | 2 | 8 |
| L. P. ವಿಭಾಗ, ಬೆಳ್ಳೂರು | 303 | 246 | 549 | 37 | 34 | 71 | 266 | 212 | 478 | 6 | 7 | 13 | -- | -- | -- | 11 | 13 | 24 |
| ಸರಕಾರಿ L. P. ಶಾಲೆ, ನೆಟ್ಟಣಿಗೆ | 59 | 52 | 111 | 21 | 22 | 43 | 38 | 30 | 68 | 3 | 1 | 4 | 1 | -- | 1 | -- | -- | -- |
| ಐಡೆಡ್ ಎಲ್. ಪಿ. ಶಾಲೆ, ಪನೆಯಾಲ | 57 | 47 | 104 | 11 | 12 | 23 | 46 | 35 | 81 | 3 | 1 | 4 | -- | -- | -- | 2 | 2 | 4 |
| ಐಡೆಡ್ ಎಲ್. ಪಿ. ಶಾಲೆ, ಕಕ್ಕೆಬೆಟ್ಟು | 45 | 39 | 84 | 15 | 19 | 34 | 30 | 20 | 50 | 3 | 1 | 4 | -- | -- | -- | -- | 1 | 1 |

ತಖ್ತೆ -2

## ವಿದ್ಯಾಭ್ಯಾಸ ಗುಣಮಟ್ಟ

### ಸರಕಾರಿ ಕಿರಿಯ ಪ್ರಾಥಮಿಕ ಶಾಲೆ, ನೆಟ್ಟಣಿಗೆ

| ತರಗತಿ | ಒಟ್ಟು ಮಕ್ಕಳು | 30%ಕ್ಕಿಂತ ಕಡಿಮೆ ಅಂಕ ಗಳಿಸಿದವರು | 30ರಿಂದ 40% ರ ವರೆಗೆ ಅಂಕ ಪಡೆದವರು | 40ರಿಂದ 50% ಅಂಕ ಪಡೆದವರು | 50%ರಿಂದ 60% ಅಂಕ ಪಡೆದವರು | 60%ಕ್ಕಿಂತ ಹೆಚ್ಚು ಅಂಕ ಪಡೆದವರು |
|---|---|---|---|---|---|---|
| IIIನೇ ತರಗತಿ | 25 | 5 | 4 | 5 | 3 | 8 |
| IVನೇ ತರಗತಿ | 24 | 2 | 7 | 6 | 1 | 8 |

### ಎ. ಎಲ್. ಪಿ. ಶಾಲೆ, ಪನೆಯಾಲ

| | | | | | | |
|---|---|---|---|---|---|---|
| IIIನೇ ತರಗತಿ | 23 | 9 | 3 | 2 | 2 | 7 |
| IVನೇ ತರಗತಿ | 24 | -- | 2 | 4 | 6 | 12 |

### ಎ. ಎಲ್. ಪಿ. ಶಾಲೆ, ಕಕ್ಕೆಬೆಟ್ಟು

| | | | | | | |
|---|---|---|---|---|---|---|
| IIIನೇ ತರಗತಿ | 17 | 2 | 3 | 3 | 3 | 6 |
| IVನೇ ತರಗತಿ | 20 | 2 | 4 | 5 | 2 | 7 |

## ಸರಕಾರಿ ಪ್ರೌಢಶಾಲೆ, ಬೆಳ್ಳೂರು.

| ತರಗತಿ | ಒಟ್ಟು ಮಕ್ಕಳು | 30%ಕ್ಕಿಂತ ಕೆಳಗಿನವರು | 30%ರಿಂದ 40%ರ ಒಳಗಿನವರು | 40%ರಿಂದ 50%ರ ವರೆಗಿನವರು | 50%ರಿಂದ 60%ರ ವರೆಗಿನವರು | 60%ದಿಂದ ಮೇಲಿನವರು | 91-92ರಲ್ಲಿ ಹೆಚ್ಚು ಪಡೆದವರು | S. S. L. C. ಯ ಫಲಿತಾಂಶದ % ಮಾನ | | | |
|---|---|---|---|---|---|---|---|---|---|---|---|
| | | | | | | | | 91-93 | 93-94 | 94-95 | 96-97 |
| 3ನೇ ತರಗತಿ | 127 | 50 | 30 | 20 | 17 | 8 | 2 | | | | |
| 4ನೇ ತರಗತಿ | 152 | 70 | 35 | 30 | 10 | 4 | 3 | | | | |
| 5ನೇ ತರಗತಿ | 163 | 80 | 40 | 24 | 11 | 5 | 3 | | | | |
| 6ನೇ ತರಗತಿ | 194 | 92 | 48 | 23 | 15 | 10 | 6 | | | | |
| 7ನೇ ತರಗತಿ | 162 | 82 | 37 | 30 | 8 | 3 | 2 | | | | |
| 8ನೇ ತರಗತಿ | 164 | 88 | 40 | 31 | 3 | 1 | 1 | | | | |
| 9ನೇ ತರಗತಿ | 114 | 70 | 25 | 10 | 6 | 2 | 1 | | | | |
| 10ನೇ ತರಗತಿ | 75 | 50 | 14 | 3 | 2 | 6 | -- | $\frac{23}{58}$=40% | $\frac{14}{84}$= 17% | $\frac{17}{91}$= 19% | $\frac{25}{70}$=36% |

**ಇಲ್ಲಿನ ಅವಶ್ಯಕತೆಗಳು**

1. 20'x20'ರ 23 ಕೋಣೆಗಳಿರುವ ಶಾಶ್ವತ ಕಟ್ಟಡದ ನಿರ್ಮಾಣ.
2. ಶೌಚಾಲಯಗಳು ಮತ್ತು ಕಕ್ಕಸುಗಳ ನಿರ್ಮಾಣ.
3. ಶಾಲೆಗಳಿಗಿರುವ ಸರಿಯಾದ ಪೀಠೋಪಕರಣಗಳನ್ನು ಒದಗಿಸಬೇಕು.
4. ಆವರಣ ಗೋಡೆಗಳ ನಿರ್ಮಾಣ.
5. ಯೋಗ್ಯವಾದ ಆಟದ ಬಯಲುಗಳ ನಿರ್ಮಾಣ.
6. ಆಟೋಟಗಳಿಗೆ ಬೇಕಾದ ಸಾಧನ ಸೌಕರ್ಯಗಳನ್ನು ಒದಗಿಸಬೇಕು.
7. ಕುಡಿಯುವ ನೀರಿನ ವ್ಯವಸ್ಥೆಗಾಗಿ ನೀರು ಸಂಗ್ರಹಿಸುವ ಟಾಂಕಿ ಮತ್ತು ನಳ್ಳಿಗಳ ವ್ಯವಸ್ಥೆ ಮಾಡಿಸುವುದು ಅಗತ್ಯ.
8. ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಮಕ್ಕಳನ್ನು ತೊಡಗಿಸಲು ಯೋಗ್ಯ ತರಬೇತುದಾರರ ನೇಮಕ ಮಾಡುವುದು ಅಗತ್ಯ.
9. ಪ್ರಥಮ ಚಿಕಿತ್ಸೆಗೆ ವ್ಯವಸ್ಥೆ ಮಾಡಿಸುವುದು.
10. ಲೈಬ್ರೆರಿ, ಪ್ರಯೋಗ ಶಾಲೆ, ವಾಚನಾಲಯಗಳನ್ನು ವ್ಯವಸ್ಥೆಗೊಳಿಸುವುದು.
11. ಪ್ರೌಢಶಾಲೆಯಿಂದ ಪ್ರೈಮರಿ ವಿಭಾಗವನ್ನು ಪ್ರತ್ಯೇಕಿಸಿ ಪ್ರೈಮರಿ ಶಾಲಾ ಆಡಳಿತೆಯನ್ನು ಪ್ರತ್ಯೇಕವಾಗಿ ನಡೆಸುವುದು.
12. ಪ್ರೌಢಶಾಲೆಗೆ "ಪ್ಲಸ್ ಟು"ವಿನ ಸೌಕರ್ಯ ಒದಗಿಸುವುದು.
13. ಶಾಲೆಗೆ ಅಗತ್ಯವಿರುವ ಸ್ಥಳವನ್ನು ಒದಗಿಸುವುದು.

**ಸರಕಾರಿ ಕಿರಿಯ ಪ್ರಾಥಮಿಕ ಶಾಲೆ, ನೆಟ್ಟಣಿಗೆ**

1930ರಿಂದಲೇ ನೆಟ್ಟಣಿಗೆಯಲ್ಲಿ ಎಲ್. ಪಿ. ಶಾಲೆ ಪ್ರಾರಂಭವಾಗಿತ್ತು. 1930ರಿಂದಲೇ ಶಾಲೆಯಿದ್ದರೂ ಇದಕ್ಕೆ ಬೇಕಾದ ಸರಕಾರಿ ಕಟ್ಟಡವಿರಲಿಲ್ಲ. ಅಂದಿನಿಂದ ಇಂದಿನ ತನಕ ಒಂದು ಪರಿಪೂರ್ಣ ಕಟ್ಟಡವನ್ನು ಈ ಶಾಲೆಯು ಹೊಂದಿಲ್ಲ. ಡಿಸ್ಟ್ರಿಕ್ಟ್ ಬೋರ್ಡಿನ ಅಧೀನದಲ್ಲಿದ್ದಾಗಲೂ ಸ್ಥಳಾಭಾವದಿಂದ ಹಾಗೇಯೇ ಮುಂದುವರಿಯುತ್ತಾ ಬಂದು, 1942ರಲ್ಲಿ ಬಾಡಿಗೆಯ ಕಟ್ಟಡವೊಂದರಲ್ಲಿ ಎಲ್. ಪಿ. ವಿಭಾಗ ಪ್ರಾರಂಭವಾಯ್ತು. 1, 2, 3, 4ನೇ ವಾರ್ಡಿನ ಮಕ್ಕಳು ಈ ಶಾಲೆಗೆ ವಿದ್ಯಾರ್ಜನೆಗೆ ಬರುತ್ತಿರುವರು. ಇವರಲ್ಲಿ ಹೆಚ್ಚಿನವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿರುತ್ತಾರೆ. ಈಗ ಒಟ್ಟು 111

ಮಕ್ಕಳು (59+52) ವಿದ್ಯಾರ್ಜನೆ ಮಾಡುತ್ತಿರುವರು. **"ಓಪರೇಶನ್ ಬ್ಲೇಕ್ ಬೋರ್ಡ್"** ಸ್ಕೀಮಿನ ವತಿಯಿಂದ **ಈ ತನಕ 3 ಕೋಣೆಗಳಿರುವ** ಕಟ್ಟಡವು ಲಭಿಸಿದೆ. 4 ಜನ ಅಧ್ಯಾಪಕರೂ, ಒಬ್ಬ ತಾತ್ಕಾಲಿಕ ಮತ್ತು ಅರೆಕಾಲಿಕ ಸಿಬ್ಬಂದಿಯೂ ಕಾರ್ಯ ನಿರ್ವಹಿಸುತ್ತಿದ್ದಾರೆ. ಮಕ್ಕಳು ಕುಳಿತುಕೊಳ್ಳಲು **ಸ್ಥಳಾವಕಾಶ** ಕಡಿಮೆ. ಆದುದರಿಂದ ಕಟ್ಟಡ ಹಾಗೂ ಪೀಠೋಪಕರಣಗಳ ವ್ಯವಸ್ಥೆ ಮಾಡಬೇಕು. ಇಲ್ಲಿನ ಮಕ್ಕಳಿಗೆ ಕುಡಿಯುವ ನೀರಿನ ಸೌಕರ್ಯವಿಲ್ಲ. ಶಾಲೆಗೆ ಆವರಣ ಗೋಡೆಯಿಲ್ಲ. ಶೌಚಾಲಯ, ಪಾಯಿಖಾನೆ, ಆಟದ ಮೈದಾನದ ವ್ಯವಸ್ಥೆಯಿಲ್ಲ.

**ಇಲ್ಲಿ ಅತ್ಯಾವಶ್ಯಕವಾಗಿ ಬೇಕಾದ ವ್ಯವಸ್ಥೆಗಳು**

1. ನೆಟ್ಟಣಿಗೆ ಎಲ್. ಪಿ. ಶಾಲೆಯನ್ನು ಯು. ಪಿ. ಶಾಲೆಯಾಗಿ ಭಡ್ತಿಗೊಳಿಸಬೇಕು.
2. ಹೊಸ ಕಟ್ಟಡವನ್ನು ಒದಗಿಸಬೇಕು.
3. ಕುಡಿಯುವ ನೀರಿನ ವ್ಯವಸ್ಥೆ ಮಾಡುವುದು.
4. ಶೌಚಾಲಯಗಳನ್ನು ಒದಗಿಸುವುದು.
5. ಶಾಲೆಗೆ ಭದ್ರವಾದ ಆವರಣ ಗೋಡೆಯನ್ನು ನಿರ್ಮಿಸುವುದು.
6. ಮಕ್ಕಳಿಗೆ ಮಧ್ಯಾಹ್ನದ ಊಟ ಒದಗಿಸುವ ಸಲುವಾಗಿ ಹೊಸ ಅಡಿಗೆ ಕೋಣೆಯನ್ನು ನಿರ್ಮಿಸುವುದು.
7. ಪ್ರಥಮ ಚಿಕಿತ್ಸಾ ಸೌಲಭ್ಯವನ್ನು ಒದಗಿಸುವುದು.
8. ಆಟದ ಬಯಲನ್ನು ನಿರ್ಮಿಸುವುದು.
9. ಪೀಠೋಪಕರಣಗಳನ್ನು ಒದಗಿಸುವುದು.
10. ತೀರಾ ಹಿಂದುಳಿದ ಪ್ರದೇಶವಾದುದರಿಂದ ಇಲ್ಲೊಂದು ರಂಗಮಂದಿರವನ್ನು ಸ್ಥಾಪಿಸುವುದು.
11. ವಿದ್ಯುತ್ ಸೌಕರ್ಯವನ್ನು ಒದಗಿಸಬೇಕು.
12. 20'x20'ರ 4+1 ಕೋಣೆಗಳಿರುವ ಹೊಸ ಕಟ್ಟಡವನ್ನು (ಶಾಲಾ) ಒದಗಿಸಬೇಕು.

**ಪನೆಯಾಲ ಎ. ಎಲ್. ಪಿ. ಶಾಲೆ**

ಇದು ಸರಕಾರದ ಸಹಾಯದಿಂದ ಖಾಸಗಿಯಾಗಿ ನಡೆಸಲ್ಪಡುವ ಒಂದು ಶಾಲೆಯಾಗಿದೆ. ಈ ಶಾಲೆಯು ಗುಡ್ಡಗಾಡು ಪ್ರದೇಶದಲ್ಲಿದೆ. ಸರಿಯಾದ ವಾಹನ ಸೌಕರ್ಯಗಳಿಲ್ಲ. ಈಗ ಇಲ್ಲಿ 104 ವಿದ್ಯಾರ್ಥಿಗಳು ವಿದ್ಯಾರ್ಜನೆ ಮಾಡುತ್ತಿರುವರು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಕ್ಕಳೂ ಕಲಿಯುತ್ತಿದ್ದಾರೆ. ಸಾಧಾರಣವಾಗಿ 3K. M. ದೂರದಿಂದ ಈ ಶಾಲೆಗೆ ಮಕ್ಕಳು ವಿದ್ಯಾರ್ಜನೆಗಾಗಿ ಬರುತ್ತಿರುವರು. ಇದು ಖಾಸಗಿ ಶಾಲೆಯಾದರೂ ಇಲ್ಲಿಗೆ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ.

**ಇಲ್ಲಿ ಅತ್ಯಾವಶ್ಯಕವಾಗಿ ಬೇಕಾದ ವ್ಯವಸ್ಥೆಗಳು**

1. ಕುಡಿಯುವ ನೀರಿನ ಸರಿಯಾದ ವ್ಯವಸ್ಥೆ ಆಗಬೇಕು.
2. ಮಧ್ಯಾಹ್ನದ ಗಂಜಿ ಊಟ ತಯಾರಿಸಲು ಅಡುಗೆ ಕೋಣೆ ಯೊಂದು ಬೇಕಾಗಿದೆ.
3. ಶೌಚಾಲಯಗಳನ್ನು ವ್ಯವಸ್ಥೆಗೊಳಿಸುವುದು ಮತ್ತು ನೀರನ್ನು ಒದಗಿಸುವುದು.
4. ಪ್ರಥಮ ಚಿಕಿತ್ಸಾ ಸೌಲಭ್ಯವನ್ನು ಒದಗಿಸುವುದು.
5. ಪೀಠೋಪಕರಣಗಳನ್ನು ಒದಗಿಸುವುದು.
6. ಈ ಶಾಲೆಯನ್ನು ಯು. ಪಿ.ಯಾಗಿ ಬದಲಾಯಿಸಬೇಕು.
7. ಕ್ಲಾಸ್ ರೂಂಗಳನ್ನು ಸಮರ್ಪಕವಾಗಿ ಒದಗಿಸಬೇಕು.

**ಕಕ್ಕೆಬೆಟ್ಟು ಎ. ಎಲ್. ಪಿ. ಶಾಲೆ**

ಇದು 6ನೇ ವಾರ್ಡಿನಲ್ಲಿದೆ. ಬಹಳ **ಶೋಚನೀಯಾ** ವಸ್ಥೆಯಲ್ಲಿದೆ. ಈ ಶಾಲೆಗೆ ಬರುವ ಮಕ್ಕಳಿಗೆ ದಾರಿಯ ಸೌಕರ್ಯ ವಿಲ್ಲ. ಬಹಳ ಹಿಂದುಳಿದ ಈ ಪ್ರದೇಶವು ಕರ್ನಾಟಕ ರಾಜ್ಯದ ಗಡಿಯಲ್ಲಿರುವುದರಿಂದ ಇಲ್ಲಿನ ಮಕ್ಕಳು ಕರ್ನಾಟಕದ ಬೇರೆ ಕೆಲವು ಶಾಲೆಗೆ ಹೋಗುತ್ತಾರೆ. ಆದ ಕಾರಣ ಈ ಶಾಲೆಗೆ ಸೇರುವ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಾ ಬಂದಿದೆ. ತೋಡುಗಳಿಗೆ ಸಂಕಗಳೂ ಕೂಡಾ ಇಲ್ಲದಿರುವುದರಿಂದ ಮಕ್ಕಳನ್ನು ಹೆತ್ತವರು ಸರಿಯಾಗಿ ಶಾಲೆಗೆ ಕಳುಹಿಸುತ್ತಿಲ್ಲವೆಂಬುಂದು ಅಪಸ್ವರ ಕೂಡಾ ಕೇಳಿ ಬರುತ್ತಿದೆ. ಪರಿಶಿಷ್ಟ ಜಾತಿಯ ಜನಾಂಗದವರಿದ್ದರೂ ಅವರ ಮಕ್ಕಳಿಗೆ ಸರಿಯಾದ ವಿದ್ಯಾಭ್ಯಾಸ ಸಿಗುತ್ತಿಲ್ಲ.

**ಇಲ್ಲಿ ಅತ್ಯಾವಶ್ಯಕವಾಗಿ ಬೇಕಾದ ಕೆಲವು ವ್ಯವಸ್ಥೆಗಳು**

1. ತರಗತಿ ಕೊಠಡಿಗಳ ವ್ಯವಸ್ಥೆ ಸಮರ್ಪಕಗೊಳಿಸಬೇಕು.
2. ಕುಡಿಯುವ ನೀರಿನ ವ್ಯವಸ್ಥೆ ಬೇಕು.
3. ಗಂಜಿಯೂಟ ತಯಾರಿಸಲು ಅಡುಗೆ ಕೋಣೆಯು ಅವಶ್ಯ ವಾಗಿದೆ.
4. ಪ್ರಥಮ ಚಿಕಿತ್ಸಾ ಸೌಲಭ್ಯವೂ ಬೇಕಾಗಿರುವುದು.
5. ಶೌಚಾಲಯದ ವ್ಯವಸ್ಥೆಗೊಳಿಸುವುದು.
6. ಪೀಠೋಪಕರಣಗಳನ್ನು ಒದಗಿಸುವುದು.
7. ಐತ್ತನಡ್ಕದಿಂದ ಕಕ್ಕೆಬೆಟ್ಟು ಶಾಲಾ ವಠಾರದ ತನಕ ಸರಿಯಾದ ದಾರಿ ನಿರ್ಮಾಣವಾಗಬೇಕು.

ಈ ಪಂಚಾಯತಿನಲ್ಲಿರುವ ವಿದ್ಯಾಸಂಸ್ಥೆಗಳು ಮಂದಗತಿ ಯಲ್ಲಿ ಅಭಿವೃದ್ಧಿಯ ಪಥದತ್ತ ಸಾಗುತ್ತಿದೆ. ವಿದ್ಯಾಭಿವೃದ್ಧಿಗೆ ಬೇಕಾಗಿ ಇನ್ನೂ ಕೆಲವು ಸೌಲಭ್ಯಗಳು ಬೇಕಾಗಿವೆ.

1. 2ನೇ ವಾರ್ಡಿನ ಕುಳದಪಾರೆ ಎಂಬಲ್ಲಿ ಹಲವು ವರ್ಷಗಳ ಹಿಂದೆ ಸಣ್ಣ ಶಾಲೆಯೊಂದು ಕಾರ್ಯವೆಸಗುತ್ತಿತ್ತು. ಈಗ ಆ

ಶಾಲಾ ವ್ಯವಸ್ಥೆ ನಿರ್ನಾಮಗೊಂಡಿದೆ. ಎರಡನೇ ವಾರ್ಡಿನ ಹೆಚ್ಚಿನ ಭಾಗದ ಜನರಿಗೂ ಕುಳದ ಪಾರೆಯೇ ಕೇಂದ್ರ ಸ್ಥಳ ವಾಗಿದೆ. ಮತ್ತು ಪರಿಶಿಷ್ಟ ಜಾತಿ ಮತ್ತು ಪಂಗಡದ ಜನರೇ ಇಲ್ಲಿ ಹೆಚ್ಚಿನವರು. ಹತ್ತಿರದಲ್ಲಿ 5 ಕಿ. ಮಿ. ವ್ಯಾಪ್ತಿಯಲ್ಲಿ ಯಾವುದೇ ಶಾಲೆಗಳಿಲ್ಲ. ಆದುದರಿಂದ ಇಲ್ಲಿಗೆ ಒಂದು ಎಲ್. ಪಿ. ಶಾಲೆ ಅತೀ ಅಗತ್ಯವಾಗಿ ಬೇಕು.

2. ಐತ್ತನಡ್ಕ ಎಂಬಲ್ಲಿ ಆ ವಠಾರದ ಮಕ್ಕಳಿಗಾಗಿ ವಿದ್ಯಾಭ್ಯಾಸ ಮಾಡಲು ಒಂದು ಶಾಲೆಯು ಅತ್ಯಗತ್ಯವಾಗಿದೆ. ಇಲ್ಲಿ ಪರಿ ಶಿಷ್ಟ ಜಾತಿ ಮತ್ತು ಪಂಗಡಗಳ ಮಕ್ಕಳು ಶಾಲಾ ಸೌಕರ್ಯ ವಿಲ್ಲದೆ ವಿದ್ಯಾಭ್ಯಾಸದಿಂದ ವಂಚಿತರಾಗಿದ್ದಾರೆ. ಸುಮಾರು 2 ಕಿ. ಮಿ. ವ್ಯಾಪ್ತಿಯಲ್ಲಿ ಯಾವುದೇ ಸರಿಯಾದ ಶಾಲಾ ವ್ಯವಸ್ಥೆಯಿಲ್ಲದ ಕಾರಣ ಇಲ್ಲಿ ಒಂದು ಪ್ರಾಥಮಿಕ ಶಾಲೆ ಅತೀ ಅಗತ್ಯವಾಗಿದೆ.

3. IVನೇ ವಾರ್ಡ್‌ನ ಕಿನ್ನಿಂಗಾರಿನ ಮಲೆಯಾಳ ಮಾತೃ ಬಾಷೆ ಯ ಮಕ್ಕಳ ವಿದ್ಯಾಭ್ಯಾಸಕ್ಕೆ ಒಂದು ಶಾಲೆಯ ಸೌಕರ್ಯದ ಅಗತ್ಯವಿದೆ.

4. ಎಲ್ಲಾ ಎಲ್. ಪಿ. ಶಾಲೆಗಳಿಗೂ ಒಂದು ಜಾರುಬಂಡಿ ಮತ್ತು ಆಟದ ಉಪಕರಣಗಳನ್ನು ಒದಗಿಸುವುದು ಅತೀ ಅಗತ್ಯವಾಗಿದೆ.

5. ಈ ಪಂಚಾಯತಿನಲ್ಲಿ ಪ್ರೌಢಶಾಲಾ ವಿದ್ಯಾಭ್ಯಾಸ ಮುಗಿದ ಬಳಿಕ ಹೆಚ್ಚಿನ ಮಕ್ಕಳು ವಿದ್ಯಾಭ್ಯಾಸ ಮುಂದುವರಿಸದಿರುವ ಕಾರಣ ಈ ಪಂಚಾಯತ್‌ನಲ್ಲಿ ಒಂದು ತಾಂತ್ರಿಕ ವಿದ್ಯಾಲಯ (I. T. I.) ಮಂಜೂರಾಗಬೇಕು.

6. ಈ ಪಂಚಾಯತಿಗೆ ಒಳಪಟ್ಟ ಪ್ರತಿಯೊಂದು ಪ್ರಾಥಮಿಕ ಶಾಲೆಗಳಲ್ಲಿ ಪ್ರೀ ಪ್ರೈಮರಿ ತರಗತಿಗಳನ್ನು ಸೇರಿಸಬೇಕು.

7. "ಜಿಲ್ಲಾ ಪ್ರಾಥಮಿಕ ವಿದ್ಯಾಭ್ಯಾಸ ಅಭಿವೃದ್ಧಿ ಯೋಜನೆ" (DPEP) ಯ ಅನುಸಾರವಾಗಿ Iನೇ ತರಗತಿಯಿಂದ IVನೇ ತರಗತಿಯವರೆಗಿನ ಎಲ್ಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಪಾಠ ಪುಸ್ತಕಗಳನ್ನು ಧರ್ಮಾರ್ಥವಾಗಿ ಲಭಿಸುವಂತೆ ಮಾಡ ಬೇಕು.

8. ಈ ಪಂಚಾಯತಿಗೆ ಒಳಪಟ್ಟ ಪ್ರತಿಯೊಂದು ಶಾಲೆಗಳಿಗೆ ತಾಗಿಕೊಂಡಿರುವ ಖಾಲಿ ಪಟ್ಟಾ ಸ್ಥಳಗಳನ್ನು ಆಯಾ ಶಾಲೆ ಗಳಿಗೆ, ಸ್ವಾಧೀನ ತೆಗೆಯಲು ಪಂಚಾಯತುಗಳಿಗೆ ಅಧಿಕಾರ ಕೊಡಬೇಕು.

9. ಪ್ರೌಢಶಾಲೆಗಳಲ್ಲಿ ಗ್ರಂಥಾಲಯ, Staff Room, Office Room, Reading Room, Kitchen Room, Sports and Games Room ಮೊದಲಾದ ಕೋಣೆ ಗಳನ್ನು ಅಗತ್ಯವಾಗಿ ನಿರ್ಮಿಸಬೇಕು, ಅಲ್ಲದೆ, School Co-operative Society ಕೂಡಾ ಅಗತ್ಯವಾಗಿದೆ.

10. ಶಾಲೆಗಳಿಗೆ ಪೂರ್ಣವಾಗಿ ವಿದ್ಯುತ್ ಪೂರೈಸಬೇಕು.

11. ಪ್ರೌಢಶಾಲೆಗೆ ಶಾಶ್ವತ ರಂಗಮಂಟಪವನ್ನು ನಿರ್ಮಿಸಬೇಕು.

12. ಪ್ರೌಢಶಾಲೆಯಲ್ಲಿ ಕಂಪ್ಯೂಟರ್ ತರಗತಿಗಳನ್ನು ತೆರೆಯು ವುದು.

****

# 10

# ಕುಡಿನೀರು, ಆರೋಗ್ಯ ಹಾಗೂ ಪರಿಸರ ಶುಚಿತ್ವ

ಶುದ್ಧ ವಾಯು, ಶುದ್ಧನೀರು, ಪುಷ್ಟಿದಾಯಕವಾದ ಆಹಾರ ಹಾಗೂ ಪರಿಸರ ಶುಚಿತ್ವ ಇವುಗಳು ಮನುಷ್ಯನ ಆರೋಗ್ಯವನ್ನು ಸಂರಕ್ಷಿಸುವ ಮುಖ್ಯ ವಿಷಯಗಳು. "ಆರೋಗ್ಯವೇ ಭಾಗ್ಯ" ಎಂಬ ನಾಣ್ಣುಡಿಯ ಅರ್ಥ, ಮಹತ್ವ ನಮಗೆ ತಿಳಿದಿದೆ. ಆದುದರಿಂದ ಆಸ್ಪತ್ರೆಗಳಲ್ಲಿ ಔಷಧಿ ಪೂರೈಸುವ ಸಂದರ್ಭದಲ್ಲಿ ಹಾಗೂ ವೈದ್ಯಕೀಯ ಸಲಹೆಗಳನ್ನು ನೀಡುವ ಸಂದರ್ಭದಲ್ಲಿ ಈ ಮೇಲಿನ ಅಂಶಗಳಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಬೇಕಾಗುತ್ತದೆ.

ಬೆಳ್ಳೂರು ಪಂಚಾಯತಿನ ನಾಗರಿಕರು ಪ್ರಸ್ತುತ ಸಂದರ್ಭದಲ್ಲಿ ಕೇವಲ ಪರಿಮಿತವಾದ ಕೆರೆ, ಬಾವಿ, ಕೊಳವೆಬಾವಿಗಳನ್ನು ಕುಡಿನೀರಿಗಾಗಿ ಆಶ್ರಯಿಸಿದ್ದಾರೆ. ವೈದ್ಯಕೀಯ ನೆರವಿಗಾಗಿ ಈಗ ಇರುವ ಒಂದು ಪ್ರಾಥಮಿಕ ಆರೋಗ್ಯಕೇಂದ್ರ, ಒಂದು ಸರಕಾರಿ ಆಯುರ್ವೇದ ಕೇಂದ್ರ, ಇತರ 4 ಮಂದಿ ಖಾಸಗಿ ವೈದ್ಯರುಗಳನ್ನು ಅವಲಂಭಿಸಿದ್ದಾರೆ. ಪ್ರಾಥಮಿಕ ಆರೋಗ್ಯಕೇಂದ್ರ ಹಾಗೂ ಸರಕಾರಿ ಆಯುರ್ವೇದದ ಕೇಂದ್ರಗಳಲ್ಲಿ ಸಾಕಷ್ಟು ಸೌಲಭ್ಯಗಳಿಲ್ಲ. ಆದುದರಿಂದ ಹೆಚ್ಚಿನ ವೈದ್ಯಕೀಯ ನೆರವಿಗಾಗಿ ಕಾಸರಗೋಡು ಹಾಗೂ ದೂರದ ಮಂಗಳೂರಿನಲ್ಲಿರುವ ಆಸ್ಪತ್ರೆ, ವೈದ್ಯರುಗಳನ್ನು ಅವಲಂಬಿಸಬೇಕಾದ ಪರಿಸ್ಥಿತಿ ಬಂದಿದೆ.

ಪಾಯಿಖಾನೆ ಸೌಲಭ್ಯ ಇರುವ ಮನೆಗಳ ಸಂಖ್ಯೆಯೂ ವಿರಳವಾಗಿದೆ.

ಕುಡಿನೀರು: ಗುಡ್ಡ, ಬೆಟ್ಟ, ಕಣಿವೆಗಳಿಂದ ಕೂಡಿದ ಈ ಗ್ರಾಮೀಣ ಪ್ರದೇಶದಲ್ಲಿ ಕುಡಿನೀರಿನ ಸಮಸ್ಯೆ ಬಹಳ ಗಂಭೀರವಾಗಿದೆ. ಹಿಂದೆ ಕುಡಿ ನೀರಿಗಾಗಿ ಜನರು ತೋಡು, ಕೆರೆ, ಬಾವಿಗಳನ್ನು ಆಶ್ರಯಿಸಿದ್ದರು. ಈಗ ಈ ಮೂಲಗಳೊಂದಿಗೆ ಸಾರ್ವಜನಿಕ ಬಾವಿ, ಕೊಳವೆ ಬಾವಿಗಳ ಸೌಲಭ್ಯವೂ ಇದೆ. ಆದರೆ ಜನಸಂಖ್ಯಾ ಹೆಚ್ಚಳದಿಂದ ಕುಡಿನೀರು ಸಮಸ್ಯೆಯಲ್ಲಿ ಮಾಡಿದ ಈ ಪರಿಹಾರಗಳು ಯಾವುದೂ ಪರಿಣಾಮಕಾರಿಯಾಗಿಲ್ಲ. ನೀರಿನ ಮೂಲಗಳಲ್ಲಿ ಹೆಚ್ಚಿನವುಗಳು ಮಾರ್ಚ್ ತಿಂಗಳಿನಲ್ಲಿ ಬರಿದಾಗುತ್ತವೆ. ಇದು ಸಮಸ್ಯೆಯನ್ನು ಇನ್ನಷ್ಟು ಜಟಿಲಗೊಳಿಸಿದೆ. ಈಗ ಇರುವ ಕುಡಿನೀರು ವ್ಯವಸ್ಥೆಯ ತಖ್ತೆ

| ವಾರ್ಡ್ ಸಂಖ್ಯೆ | ಸಾರ್ವಜನಿಕ ಬಾವಿ | ಬೋರ್‌ವೆಲ್ | ಸಾರ್ವಜನಿಕ ನಳ್ಳಿನೀರಿನ ವ್ಯವಸ್ಥೆ | ಸಾಮಾನ್ಯ ಬಾವಿ (ಖಾಸಗಿ) | ಮನೆಗಳ ಸಂಖ್ಯೆ |
|---|---|---|---|---|---|
| 1 | 4 | 2 | -- | । | । |
| 2 | 1 | 4 - (1) | -- | । | । |
| 3 | 1 | 4 | -- | 0 | 0 |
| 4 | 4 | (3) | -- | 4 | 4 |
| 5 | 4 | 2 - (1) | -- | 5 | 0 |
| 6 | 1 | (2) | -- | 1 | 2 |
| 7 | 3 | 1 | -- | । | । |
| 8 | 3 | 5 | -- | । | । |
| | 21 | 24 - (5) | -- | । | । |

ಆಧಾರ: ಸೆಕೆಂಡರಿ ಡಾಟಾ.

◯: ಕೆಟ್ಟು ಹೋದ ಬೋರ್‌ವೆಲ್ ಆವರಣದಲ್ಲಿದೆ.

ಮೇಲಿನ ತಖ್ತೆಯಿಂದ ಜನರು ಕುಡಿನೀರಿಗಾಗಿ ಇತ್ತೀಚಿನವರೆಗೂ ಬಾವಿಗಳನ್ನೇ ಆಶ್ರಯಿಸಿರುವುದು ವ್ಯಕ್ತವಾಗುತ್ತದೆ. ಸಾರ್ವಜನಿಕ ನಳ್ಳಿ ನೀರು ವ್ಯವಸ್ಥೆ ಇಲ್ಲದಿರುವುದು, ಕೊಳವೆ ಬಾವಿ ಕೆಟ್ಟು ಹೋಗುವುದು ಕುಡಿನೀರು ಸಮಸ್ಯೆಯನ್ನು ಮತ್ತಷ್ಟು ಉಲ್ಬಣಗೊಳಿಸಿದೆ.

**ಕುಡಿ ನೀರಿನ ಸಮಸ್ಯೆಗಳು:**

1. ಸಾರ್ವಜನಿಕ ಬಾವಿಗಳ, ಕೊಳವೆ ಬಾವಿಗಳ ಕೊರತೆ.

2. ಕೊಳವೆ ಬಾವಿಗೆ ಅಳವಡಿಸಿದ ಯಂತ್ರಗಳು ಆಗಾಗ ಕೆಟ್ಟು ನೀರು ಉಪಯೋಗಕ್ಕೆ ಸಿಗದಿರುವುದು.

3. ಕೊಳವೆ ಬಾವಿಗಳ ನೀರು ಕೆಲವು ಕಡೆ ಕುಡಿಯಲು ಸಾಧ್ಯವಾಗದ ಸ್ಥಿತಿಯಲ್ಲಿರುವುದು.

4. ಕಾಲನಿಗಳು ಸೇರಿದಂತೆ ಪಂಚಾಯತಿನ ಯಾವುದೇ ಕಡೆ ನಳ್ಳಿ ನೀರನ ಸೌಲಭ್ಯ ಇಲ್ಲದಿರುವುದು.

5. ಸಾರ್ವಜನಿಕ ಬಾವಿಗಳು ಮಾರ್ಚ್, ಎಪ್ರಿಲ್ ತಿಂಗಳಲ್ಲಿ ಬತ್ತಿ ಹೋಗುವುದು.

6. ಖಾಸಗಿ ಬಾವಿ ತೋಡಲು ಮತ್ತು ಬಾವಿಗಳನ್ನು ನೀರಿನ ಮಟ್ಟಕ್ಕಿಂತ ಆಳಗೊಳಿಸಿ ದುರಸ್ತಿಗೊಳಿಸಲು ಆರ್ಥಿಕ ತೊಂದರೆ ಇರುವುದು.

7. ನೀರಿನ ಸರಿಯಾದ ಸಂರಕ್ಷಣೆ, ಉಪಯೋಗದ ಬಗ್ಗೆ ಜನರಿಗೆ ಸಾಕಷ್ಟು ತಿಳುವಳಿಕೆ ಇಲ್ಲದಿರುವುದು.

**ಪರಿಹಾರ ಮಾರ್ಗಗಳು :**

ಇಲ್ಲಿ ಕುಡಿನೀರಿನ ಸಮಸ್ಯೆ ಹಲವು ವಿಧಗಳಲ್ಲಿ ಉಂಟಾಗುವುದರಿಂದ ಅವುಗಳನ್ನು ನೀಗಿಸಲು ಹಲವು ಯೋಜನೆಗಳ ಅವಶ್ಯಕತೆ ಕಂಡುಬರುವುದು.

I. ಹೊಸಬಾವಿ, ಕೊಳವೆಬಾವಿಗಳು ಕುಡಿನೀರಿಗಾಗಿ ಈ ಕೆಳಗಿನ ಸ್ಥಳಗಳಲ್ಲಿ ಅಗತ್ಯವಾಗಿದೆ.

| ವಾರ್ಡ್ | ಕೊಳವೆ ಬಾವಿ ಅಗತ್ಯವಿರುವ ಸ್ಥಳ | ಹೊಸ ಬಾವಿಗಳ ಅಗತ್ಯವಿರುವ ಸ್ಥಳ. |
|---|---|---|
| I | ಕೊಲ್ಯ | 1. ಸರಳಿಮೂಲೆ 2. ಪಾದೆಗದ್ದೆ. |
| II. | 1. ಪುಂಡಿಕ್ಕಾ 2. ಬೀರಮೂಲೆ 3. ಕುಳ. | 1. ಮರದ ಮೂಲೆ 2. ನಾಕೂರು ಕೊಲನಿ. |
| III. | 1. ನೆಟ್ಟಣಿಗೆ ಜಿ.ಎಲ್. ಪಿ. ಶಾಲೆ ಹತ್ತಿರ 2. ಮುದ್ದಮೂಲೆ 3.ನೆಟ್ಟಣಿಗೆ ದೇವಸ್ಥಾನ 4. ಪಡ್ಡೆ ್ಯ ಮೂಲೆ | 1. ಕೊಡಿಯಡ್ಕ 2. ಎಡಮೊಗರು 3. ದಾಸರ ಮೂಲೆ. |
| IV. | 1. ಅಡ್ಕ 2. ಕನಕತ್ತೋಡಿ, 3. ಕುಳೂರು. | 1. ಕೋಟಿಮೂಲೆ 2. ಕೊಡೆಂಚ್ಚಿಕ್ಕಾರು 3. ಜವನಿಗುಡ್ಡೆ. |
| V. | 1. ಪನೆಯಾಲ 2. ಪೆರ್ವತ್ತೋಡಿ. 3. ಐತ್ತನಡ್ಕ ಭಜನಾಮಂದಿರದ ಬಳಿ, 4. ಬೀಜದ ಕಟ್ಟೆ ಕಾಲನಿ 5. ಪಳ್ಳಪಾಡಿ. | 1. ಬೀಜದ ಕಟ್ಟೆ 2. ಮಣ್ಣಾಪು 3. ಭೂತಾನ ಕೊಲನಿ 4. ಗುರಿಯಡ್ಕ 5 ಭೂತಾನ. 6. ಗುಳಿಗ ಮೂಲೆ |
| VI. | 1 ಬೊಳ್ಳಂದೂರು. 2. ಕಕ್ಕೆಬೆಟ್ಟು | 1. ಗುತ್ಯಡ್ಕ 2. ಕಕ್ಕೆಬೆಟ್ಟು |
| VII. | ಕಾಪಿಕಾಡು. | 1. ತೋಟದ ಮೂಲೆ 2. ತೋಟದ ಮೂಲೆಕಾಲನಿ 3. ನೂಜಿ 4. ಬಸ್ತಿಗುಡ್ಡೆ 5. ಪೊಡಿಕ್ಕಳ. |
| VIII. | 1. ನೆಲ್ಲಿತ್ತಡ್ಕ 2 ಕಲ್ಪಣೆ 3. ಪಂಬುಡೆ 4. ಮಿತ್ತಜಾಲು | 1. ಗೋಳಿಕಟ್ಟೆ 2. ಕಜೆಮುಂಡ 3. ಅಡ್ವಳ 4 ಅನೆಕ್ಕಳ. |

II. ಹೊಸಬಾವಿ ನಿರ್ಮಿಸಿ ಪಂಪು, ಟ್ಯಾಂಕ್, ಓವರ್ ಹೆಡ್ ಟ್ಯಾಂಕ್, ನಿರ್ಮಿಸಿ ನಳ್ಳಿನೀರಿನ ವ್ಯವಸ್ಥೆಯಿಂದ ಕುಡಿನೀರು ಸೌಲಭ್ಯ ನೀಡಬೇಕಾದ ಪ್ರದೇಶಗಳು.

1. ವಾರ್ಡ್ I ರಲ್ಲಿ : ಕಜೆ ಎಂಬಲ್ಲಿ ಪರಿಶಿಷ್ಟ ವರ್ಗ ಕೊಲನಿಗೆ ಮತ್ತು ಸಾರ್ವಜನಿಕರಿಗೆ ನಳ್ಳಿನೀರಿನ ಸೌಲಭ್ಯ (ಇರುವ ಸಾರ್ವಜನಿಕ ಬಾವಿಯನ್ನು ಆಳಗೊಳಿಸಿ, ವಿಸ್ತಾರಗೊಳಿಸಿ ಈ ಯೋಜನೆಗೆ ಉಪಯೋಗಿಸಬಹುದು.)

2. ವಾರ್ಡ್ II ರಲ್ಲಿ : ಬಜ ಪರಿಶಿಷ್ಟ ಜಾತಿ ಕೊಲನಿ ಮತ್ತು ತುರ್ಕರ ಮೂಲೆ ಪ್ರದೇಶಕ್ಕೆ .

3. ವಾರ್ಡ್ III: ರಲ್ಲಿ ಮುಗುಳ್ಳಿ ಮೂಲೆ ಪರಿಶಿಷ್ಟ ವರ್ಗ ಕಾಲೊನಿ ಮತ್ತು ಪಡ್ಡೆಯಿ ಮೂಲೆ ಪರಿಶಿಷ್ಟ ಜಾತಿ ವರ್ಗ ಕಾಲೊನಿ ಅಲ್ಲದೆ ೨ ಕಿ. ಮೀ. ದೂರದ ಮನೆಗಳವರೆಗೆ ಮತ್ತು ಎಡವೊಗರು ಪ್ರದೇಶದಲ್ಲಿ ಕುಡಿ ನೀರು ಸೌಲಭ್ಯ ಒದಗಿಸುವುದು. ಈ ಯೋಜನೆಯನ್ನು ಟ್ಯಾಂಕ್ ಮಾಡಿ ಕಾರ್ಯಗತಗೊಳಿಸಬಹುದು.

4. ವಾರ್ಡ್ IV: ಮದಕ್ಕದಲ್ಲಿರುವ ಕೆರೆದುರಸ್ತಿ ಮಾಡಿ ಪಂಪ್ ಮುಖಾಂತರ ನೀರು ಶೇಖರಿಸಿ ನಳ್ಳಿ ನೀರಿನ ಯೋಜನೆ. ಇದರ ಸೌಲಭ್ಯ ಪಡೆಯುವವರು. ಮದಕ್ಕ ಕಾಲನಿ, ಬೆಳೇರಿ, ಕಿನ್ನಿಂಗಾರು ಪ್ರದೇಶಗಳ ನಾಗರಿಕರು,ಸರ್ಕಾರಿ ಕಛೇರಿ, ಬ್ಯಾಂಕು, ಮತ್ತು ಇನ್ನಿತರ ಆಫೀಸು ಪ್ರಾಥಮಿಕ ಆರೋಗ್ಯ ಕೇಂದ್ರ. .

**5.** ವಾರ್ಡ್ V ರಲ್ಲಿ : ಇರುವ **ಕೊಳವೆ ಬಾವಿಗೆ ಓವರ್ ಹೆಡ್ ಟ್ಯಾಂಕಿ ನಿರ್ಮಿಸಿ ನಳ್ಳಿನೀರಿನ ವ್ಯವಸ್ಥೆಗೊಳಿಸುವುದು.** ಇದರಿಂದ ಸೌಲಭ್ಯ ಪಡೆಯುವ ಪ್ರದೇಶಗಳೆಂದರೆ ಮುಕ್ಕಂಗೋಳಿ ಪರಿಶಿಷ್ಟ ಜಾತಿ ಕಾಲೊನಿ ಪಳ್ಳಪ್ಪಾಡಿ, ಬೆಳ್ಳೂರು ಪಂಚಾಯತು ಕಛೇರಿಯ ಪರಿಸರ ಸ್ಥಳಗಳು.

**6.** ವಾರ್ಡ್ VI : ಶಾಂತಿ ಗುರಿ ಪರಿಶಿಷ್ಟ ಜಾತಿ ಕಾಲೊನಿ ಸಮೀಪ.

7. ವಾರ್ಡ್ VII ತೋಟದ ಮೂಲೆ ಗುಡ್ಡದ ಮೇಲಿನಿಂದ ಬರುವ ನಿರನ್ನು ಟ್ಯಾಂಕಿಯಲ್ಲಿ ಶೇಖರಿಸಿ ನಳ್ಳಿನೀರಿನ ವ್ಯವಸ್ಥೆ ಮಾಡಬಹುದು.

**8.** ವಾರ್ಡ್ VIII ಬೆಳ್ಳೂರು ಸರಕಾರೀ ಪ್ರೌಢಶಾಲೆಯ ಬಳಿ ಸಾರ್ವಜನಿಕ ಬಾವಿಗಳನ್ನು ನೀರಿನ ಮಟ್ಟಕ್ಕಿಂತ ಆಳಗೊಳಿಸುವುದು, ವಿಶಾಲಗೊಳಿಸುವುದು. ಬಳಿಕ ರಿಂಗ್ ಹಾಕಿ ಮಾರ್ಚ್ ಅನಂತರವೂ ಕುಡಿ ನೀರು ಸೌಲಭ್ಯ ಸಿಗುವಂತೆ ಮಾಡಬಹುದು. ನಳ್ಳಿನೀರಿನ ವ್ಯವಸ್ಥೆ ಮಾಡುವುದು.

III. ಖಾಸಗಿ ಬಾವಿಗಳನ್ನು ಆಳಗೊಳಿಸಿ ವಿಶಾಲಗೊಳಿಸಿ ರಿಂಗ್ ಹಾಕಲು ಧನ ಸಹಾಯ, ಸಾಲ ನೀಡುವುದು.

IV. ಆರ್ಥಿಕವಾಗಿ ಹಿಂದುಳಿದ ಜನರಿಗೆ ಬಾವಿ ನಿರ್ಮಿಸುವುದಕ್ಕೂ ಮತ್ತು ದುರಸ್ಥಿಗೊಳಿಸುವುದಕ್ಕೂ 50% ಸಹಾಯಧನ ನೀಡುವ ಯೋಜನೆ ಜ್ಯಾರಿಗೊಳಿಸುವುದು.

V. ಹೊಸಬಾವಿ ನಿರ್ಮಿಸಲು 25% ಸಬ್ಸಿಡಿಯೊಂದಿಗೆ ಸಾಲ ನೀಡುವ ಯೋಜನೆ ತಯಾರಿಸುವುದು.

VI. ಕೊಳವೆಬಾವಿಯ ನೀರು ಕಬ್ಬಿಣದ ತುಕ್ಕು ಹಿಡಿದು ಹಾಳಾಗುವುದರಿಂದ ಬದಲಿ ವ್ಯವಸ್ಥೆ ಮಾಡಿ ಶುದ್ಧ ನೀರು ಲಭಿಸುವಂತೆ ಮಾಡುವುದು.

VII. ಕೆಟ್ಟುಹೋದ ಕೊಳವೆ ಬಾವಿಗಳನ್ನು ತಕ್ಷಣ ರಿಪೇರಿ ಮಾಡಿಸಿ ನೀರು ಸಿಗುವಂತೆ ಸೌಲಭ್ಯ ಕಲ್ಪಿಸಲು ಸಾಕಷ್ಟು ಹಣ ಕಾದಿರಿಸುವುದು.

VIII. ಜಲ ಸಂರಕ್ಷಣೆ, ಉಪಯೋಗಗಳ ಬಗ್ಗೆ ಜನರಿಗೆ ಅರಿವು ಮೂಡಿಸುವ ಯೋಜನೆ ತಯಾರಿಸುವುದು.

IX. ಸಮುದ್ರಕ್ಕೆ ಸೇರಿ ಹಾಳಾಗುವ ಮಳೆ ನೀರನ್ನು ಕುಡಿನೀರು ಹಾಗೂ ಕೃಷಿಗೆ ಉಪಯೋಗಿಸುವ ಒಂದು ಸಮಗ್ರ ಯೋಜನೆ ಕಾರ್ಯಗತ ಗೊಳಿಸುವುದು.

ನೆರೆಯ ಪಂಚಾಯತುಗಳಲ್ಲಿ ಹರಿಯುವ ಪಯಸ್ವಿನೀ ನದಿಯಲ್ಲಿ ನೀರಿನ ಕ್ಷಾಮದ ಸಮಯದಲ್ಲೂ ನೀರು ಸಮುದ್ರಕ್ಕೆ ಹರಿದು ಸರಿಯಾದ ಬಳಕೆಯಿಲ್ಲದಾಗುತ್ತದೆ. ಪಯಸ್ವಿನೀ ನದಿಗೆ ಸೂಕ್ತ ಸ್ಥಳದಲ್ಲಿ ಅಣೆಕಟ್ಟು ನಿರ್ಮಿಸಿದಲ್ಲಿ ಈ ಪಂಚಾಯತು ಸ್ಥಳವೂ ಸೇರಿದಂತೆ ಹಲವು ಸ್ಥಳಗಳಿಗೆ ಕುಡಿನೀರು ಹಾಗೂ ಕೃಷಿನೀರು ಸೌಲಭ್ಯ ಏರ್ಪಡಿಸಬಹುದು. ಪಯಸ್ವಿನೀ ನದಿ ನೀರನ್ನು ಸಂಪೂರ್ಣ ಜನೋಪಯೋಗಿಯಾಗಿ ಮಾಡುವ ಒಂದು ಸಮಗ್ರ ಯೋಜನೆ ತಯಾರಿಸಿ ಕಾರ್ಯಗತಗೊಳಿಸುವುದು ಅತೀ ಅಗತ್ಯವಾಗಿದೆ.

ಆರೋಗ್ಯ : ಆರೋಗ್ಯ ಸಂರಕ್ಷಣೆಯ ಬಗ್ಗೆ ಸರಿಯಾದ ತಿಳುವಳಿಕೆ ಇಲ್ಲದಿರುವುದು, ಮಾರ್ಗದರ್ಶನದ ಕೊರತೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳ ಅಭಾವ ಈ ಗ್ರಾಮದ ಜನರ ಆರೋಗ್ಯ ಸಂರಕ್ಷಣೆಗೆ ಒಂದು ಸವಾಲಾಗಿತ್ತು. ಇದರಿಂದ ಹೆಚ್ಚಿನ ಜನರು ಈ ಊರಿನ ನಾಟಿ ವೈದ್ಯರ ಚಿಕಿತ್ಸೆ ಪಡೆಯುತ್ತಿದ್ದರೂ ತಿಳುವಳಿಕೆ ಇಲ್ಲದೆ ಮಂತ್ರ ತಂತ್ರಗಳ ಮೊರೆ ಹೋಗುತ್ತಿದ್ದರು. ತಾಯಿತ ಕಟ್ಟುವುದು, ಹರಕೆ ಹೊರುವುದು, ಪ್ರೇತ ಬಿಡಿಸುವುದು, ಮಾಟ, ಇತ್ಯಾದಿಗಳಲ್ಲಿ ನಂಬಿಕೆ ಇರಿಸಿದ್ದರು. ಆದುದರಿಂದ ನಾಡಿನ ವೈದ್ಯರ ಚಿಕಿತ್ಸೆಯೂ ಸಾಕಷ್ಟು ಪರಿಣಾಮ ಬೀರುತ್ತಿರಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಗ್ರಾಮದ ಜನತೆಗೆ ವರದಾನವೆಂಬಂತೆ ನಾಟೆಕಲ್ಲಿನಲ್ಲಿ 1974ರಲ್ಲಿ ಒಂದು ಆಯುರ್ವೇದ ಆಸ್ಪತ್ರೆ ಪ್ರಾರಂಭವಾಯಿತು. 1989ರಲ್ಲಿ ಕಿನ್ನಿಂಗಾರಿನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವು ತೆರೆಯಲ್ಪಟ್ಟಿತು. ಆದರೂ ಈ ಎರಡೂ ಆಸ್ಪತ್ರೆಗಳಲ್ಲಿ ವೈದ್ಯರ, ಸಿಬ್ಬಂಧಿವರ್ಗದವರ, ಔಷಧಗಳ ಕೊರತೆ ಹೆಚ್ಚಾಗಿ ಕಂಡುಬರುತ್ತಿತ್ತು. ತುಳು ಮತ್ತು ಕನ್ನಡ ಅರಿಯದ ವೈದ್ಯರು, ಸಿಬ್ಬಂಧಿ ವರ್ಗದವರು ಬಂದಾಗ ಜನರಿಗೆ ಪ್ರಯೋಜನ ಪಡೆಯಲು ಬಹಳ ಕಷ್ಟವಾಗುತ್ತಿತ್ತು. ವಿಚಾರವಂತರು ಚಿಕಿತ್ಸೆಗೆ ನೆರೆಯ ರಾಜ್ಯ ಅಥವಾ ಪಂಚಾಯತು ಆಸ್ಪತ್ರೆಯನ್ನು ಅವಲಂಬಿಸುತ್ತಿದ್ದರು. ಅವಿಚಾರವಂತರು ಮೂಢ ನಂಬಿಕೆಗಳ ಮೊರೆ ಹೋಗುತ್ತಿದ್ದರು. ಇದರಿಂದ ಆರೋಗ್ಯ ಸಮಸ್ಯೆ ಇಲ್ಲಿ ಬಹಳ ದೊಡ್ಡದಾಗಿ ಕಂಡು ಬರುತ್ತದೆ.

ಪ್ರಕೃತ ಬೆಳ್ಳೂರು ಪಂಚಾಯತಿನಲ್ಲಿರುವ ಆರೋಗ್ಯ ವಿಭಾಗದ ಬಗ್ಗೆ ಇರುವ ವಿವಿಧ ತಖ್ತೆಗಳು ಈ ರೀತಿ ಇವೆ.

I. ಡಿಸ್ಪೆನ್ಸರಿಗಳ ವಿವರ :-

| ಕ್ರಮ ಸಂಖ್ಯೆ | ವೈದ್ಯಪದ್ಧತಿ | ಸರಕಾರಿ | ಖಾಸಗಿ | ಡಿಸ್ಪೆನ್ಸರಿ ಸರಕಾರಿ | ಡಿಸ್ಪೆನ್ಸರಿ ಖಾಸಗಿ | ಮಾತೃ ಸಂರಕ್ಷಣಾ ಕೇಂದ್ರ ಸರಕಾರಿ | ಮಾತೃ ಸಂರಕ್ಷಣಾ ಕೇಂದ್ರ ಖಾಸಗಿ | ಒಟ್ಟು ಉದ್ಯೋಗಸ್ಥರು |
|---|---|---|---|---|---|---|---|---|
| 1. | ಅಲೋಪತಿ | -- | -- | 1 | -- | 2 | -- | 12 |
| 2. | ಆಯುರ್ವೇದಿಕ್ | -- | -- | 1 | 3 | -- | -- | 6 |

ಮೂಲ : ಸೆಕೆಂಡರಿ ಡಾಟಾ.

ಒಂದು ಖಾಸಗಿ ಹೋಮಿಯೋಪತಿ ಡಿಸ್ಪೆನ್ಸರಿಯು ನಾಟೆಕಲ್ಲಿನಲ್ಲಿ ಒಂದು ವರ್ಷದಿಂದೀಚೆಗೆ ಕಾರ್ಯ ನಿರ್ವಹಿಸುತ್ತದೆ.

ಜನಸಂಖ್ಯೆ :

| ಪುರುಷರು | ಸ್ತ್ರೀಯರು | ಮಕ್ಕಳು | ಒಟ್ಟು |
|---|---|---|---|
| 4572 | 4529 | 1392 | 9101 |

ಮೂಲ : ಸೆಕೆಂಡರಿ ಡಾಟಾ.

III. ಜನನ ಮರಣ ವಿವರ :

| ವರ್ಷ | ಜನನ | ಮರಣ |
|---|---|---|
| 1993 - 94 | 92 | 42 |
| 1994 - 95 | 101 | 43 |
| 1995 - 96 | 102 | 45 |

ಮೂಲ: ಪಂಚಾಯತು ಜನನ ಮರಣ ರಿಜಿಸ್ಟರು

IV. ಮಕ್ಕಳ ಆರೋಗ್ಯ ಪಾಲನಾ ಸ್ಥಿತಿ

| ಪ್ರಾಯ | ಸಾಮಾನ್ಯ | | 1ನೇ ಗ್ರೇಡ್ | | 2ನೇ ಗ್ರೇಡ್ | | 3ನೇ ಗ್ರೇಡ್ | |
|---|---|---|---|---|---|---|---|---|
| | ಗಂಡು | ಹೆಣ್ಣು | ಗಂಡು | ಹೆಣ್ಣು | ಗಂಡು | ಹೆಣ್ಣು | ಗಂಡು | ಹೆಣ್ಣು |
| 1 ವರ್ಷದ ಕೆಳಗೆ | 86 | 82 | 20 | 22 | 13 | 15 | -- | -- |
| 1-3 ವರ್ಷ | 202 | 198 | 23 | 26 | 15 | 16 | 1 | 2 |
| 3-6 ವರ್ಷ | 179 | 171 | 44 | 52 | 25 | 27 | 2 | 2 |

ಮೂಲ : ಸೆಕೆಂಡರಿ ಡಾಟಾ

V ಈಗ ಜೀವಂತ ಮಕ್ಕಳಿರುವ ಮಾತೆಯರ ಸಂಖ್ಯೆ

| ಒಂದು ಮಗು ಇರುವ ಮಾತೆಯರು | ಇಬ್ಬರು ಮಕ್ಕಳು ಇರುವ ಮಾತೆಯರು | ಇಬ್ಬರಿಗಿಂತ ಜಾಸ್ತಿ ಮಕ್ಕಳಿರುವ ಮಾತೆಯರು |
|---|---|---|
| 114 | 362 | 682 |

ಮೂಲ : ಸೆಕೆಂಡರಿ ಡಾಟಾ

**VI ಸಂತಾನ ನಿಯಂತ್ರಣಕ್ಕೊಳಗಾದ ಮಾತೆಯರ ಸಂಖ್ಯೆ**

(ಜೀವಂತ ಮಕ್ಕಳಿರುವ ಮಾತೆಯರು)

| ಒಂದು ಮಗು ಇರುವ ಮಾತೆಯರು | ಇಬ್ಬರು ಮಕ್ಕಳು ಇರುವ ಮಾತೆಯರು | ಇಬ್ಬರಿಗಿಂತ ಜಾಸ್ತಿ ಮಕ್ಕಳಿರುವ ಮಾತೆಯರು |
|---|---|---|
| 91 | 285 | 545 |

ಮೂಲ: ಸೆಕೆಂಡರಿ ಡಾಟಾ

**VII ಟಿಟೇನಸ್ ಟೆಕ್ಸೋಯಿಡ್ (T. T.) ಕಬ್ಬಿಣ ಸತ್ವ, ಫೋಲಿಕಾಸಿಡ್ ಮಾತ್ರೆಗಳು ಸಿಕ್ಕಿದ ಗರ್ಭಿಣಿಯರ ವಿವರ:**

| ಗರ್ಭಿಣಿಯರ ಸಂಖ್ಯೆ | ಟಿಟನಸ್ ಟೆಕ್ಸೋಯಿಡ್ ( T.T.) | | | ಕಬ್ಬಿಣ ಸತ್ವ, ಫೋಲಿಕಾಸಿಡ್ ಮಾತ್ರೆಗಳು |
|---|---|---|---|---|
| | I Dose | II Dose | IIIDose | |
| | 61 | 78 | 31 | 112 |

ಆಸ್ಪತ್ರೆಗಳಲ್ಲಿ ಆದ ಹೆರಿಗೆಗಳ ಸಂಖ್ಯೆ -- 112

ಮನೆಗಳಲ್ಲಿ ಆದ ಹೆರಿಗೆಗಳ ಸಂಖ್ಯೆ -- 56

ಮೂಲ : ಸೆಕೆಂಡರಿ ಡಾಟಾ

**VIII**

ಒಂದು ವರ್ಷಕ್ಕಿಂತ ಕಡಿಮೆ ಪ್ರಾಯದ ಮಕ್ಕಳ ಸಂಖ್ಯೆ -- 168

ಪ್ರತಿರೋಧ ಚುಚ್ಚುಮದ್ದು ಹಾಕಿಸಿಕೊಂಡ ಮಕ್ಕಳು -- 158

ಗರ್ಭಿಣಿಯರ ಸಂಖ್ಯೆ -- 112

ಮೂಲ : ಸೆಕೆಂಡರಿ ಡಾಟಾ

**IX ಮಕ್ಕಳಿಗೆ ರೋಗ ಪ್ರತಿರೋಧ ಚುಚ್ಚುಮದ್ದು ಕೊಡಿಸಿಕೊಂಡವರು**

| ಮಕ್ಕಳು | ಬಿ. ಸಿ. ಜಿ. | ಡಿ. ಪಿ. ಟಿ | | | | ಪೋಲಿಯೋ | | | | ಟಿ. ಟಿ. | | | | ದಡಾರ |
|---|---|---|---|---|---|---|---|---|---|---|---|---|---|---|
| | | ID | IID | IIID | B. D. | ID | IID | IIID | B. D. | ID | IID | IIID | B. D. | |
| 1ವ. ಕ್ಕಿಂತ ಕೆಳಗೆ | M/F 68/66 | 80/78 | 71/68 | 105/85 | -- | 80/78 | 71/68 | 104/85 | | | | | | 77/65 |
| 1-3 ವ. | | | | | 68/72 | | | | 117/114 | | | | | |
| 3-6 ವ. | | | | | | | | | | | | | | 182/189 |

ಮೂಲ ಸೆಕೆಂಡರಿ ಡಾಟಾ

ಕಬ್ಬಿಣ ಸತ್ವ, ಫೋಲಿಕಾಸಿಡ್ ಮಾತ್ರೆ ಸಿಕ್ಕಿದ ಮಕ್ಕಳ ಸಂಖ್ಯೆ -- 250

ವಿಟಮಿನ್ ಎ. ಪೋಲಿಯೋ ಬಿಂದು ಔಷಧಿ ಸಿಕ್ಕಿದ ಮಕ್ಕಳ ಸಂಖ್ಯೆ -- 440

ಮೂಲ: ಸೆಕೆಂಡರಿ ಡಾಟಾ

**X ಅಂಗವಿಕಲರು**

| ಕುರುಡರು | ಕಿವುಡರು | ಮೂಗರೂ ಕಿವುಡರೂ | ನಡೆಯಲು ಸಾಧ್ಯವಿಲ್ಲದವರು | ಮಂದಬುದ್ಧಿಯವರು |
|---|---|---|---|---|
| 7 | 9 | -- | 20 | 6 |

ಮೂಲ: ಸೆಕೆಂಡರಿ ಡಾಟಾ

**XI ಸ್ಥಿರ ರೋಗಗಳು**

| ರಕ್ತದೊತ್ತಡ | ಸಿಹಿಮೂತ್ರ | ಕ್ಯಾನ್ಸರ್ | ಕುಷ್ಠ | ಕ್ಷಯ | ಹೃದಯ | ಒಟ್ಟು |
|---|---|---|---|---|---|---|
| 4 | 3 | -- | 1 | 8 | 3 | 19 |

ಮೂಲ: ಸೆಕೆಂಡರಿ ಡಾಟಾ

XII ಸಾಂಕ್ರಾಮಿಕ ರೋಗಗಳು

| ವರ್ಷ | ಜಲಜನ್ಯ ರೋಗಗಳು | ವಾಯುಜನ್ಯ ರೋಗಗಳು | ಪ್ರಾಣಿಜನ್ಯ ರೋಗಗಳು |
|---|---|---|---|
| 1995-96 | 106 | 22 | 4 |

ಮೂಲ: ಸೆಕೆಂಡರಿ ಡಾಟಾ

**ಆರೋಗ್ಯ ಸಂರಕ್ಷಣಾ ಸಮಸ್ಯೆಗಳು:**

1. ಆರೋಗ್ಯ ಸಂರಕ್ಷಣಾ ಕ್ರಮಗಳ ಬಗ್ಗೆ ಜನರಿಗೆ ಸಾಕಷ್ಟು ತಿಳುವಳಿಕೆ ಇಲ್ಲದಿರುವುದು.
2. ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸಾಕಷ್ಟು ಸೌಲಭ್ಯಗಳ ಕೊರತೆ ಔಷಧಗಳ ಕೊರತೆ ಇರುವುದು.
3. ಕುಟುಂಬ ಕಲ್ಯಾಣ ಕೇಂದ್ರಗಳು ಅಗತ್ಯದಷ್ಟು ಇಲ್ಲದಿರುವುದು. ಇರುವ ಕೇಂದ್ರಗಳಿಗೆ ಕಟ್ಟಡದ ಕೊರತೆ ಇರುವುದು.
4. ಮನೆಗಳಿಗೆ ಭೇಟಿ ಕೊಡಬೇಕಾದ ಸಿಬ್ಬಂಧಿ ವರ್ಗದವರು ಸರಿಯಾಗಿ ಕೆಲಸ ನಿರ್ವಹಿಸದೆ ಇರುವುದು.
5. ಸಿಬ್ಬಂಧಿ ವರ್ಗದವರಿಗೆ ಕನ್ನಡ ಮತ್ತು ತುಳು ತಿಳಿಯದಿರುವುದು. ಇದರಿಂದ ಮನೆ ಮನೆಗೆ ಭೇಟಿ ಕಾರ್ಯಕ್ರಮ ಪರಿಣಾಮ ಬೀರದಿರುವುದು.
6. ಆಯುರ್ವೇದ ಆಸ್ಪತ್ರೆಯಲ್ಲಿ ಕಟ್ಟಡದ ಮತ್ತು ವೈದ್ಯರ ಹಾಗೂ ಸಿಬ್ಬಂಧಿಗಳ ಹಾಗೂ ಇನ್ನಿತರ ಸೌಲಭ್ಯಗಳ ಕೊರತೆ.

<u>ಪರಿಹಾರಗಳು</u> : ಜನರಿಗೆ ಆರೋಗ್ಯ ಸಂರಕ್ಷಣೆಯ ಬಗ್ಗೆ ಸಾಕಷ್ಟು ತಿಳುವಳಿಕೆ ನೀಡುವುದರೊಂದಿಗೆ ಆರೋಗ್ಯ ಕೇಂದ್ರಗಳಲ್ಲಿರುವ ಸಮಸ್ಯೆಗಳನ್ನು ಪರಿಹರಿಸಬೇಕು. ಆರೋಗ್ಯ ಕೇಂದ್ರವು ಸಕಲ ಸೌಕರ್ಯಗಳಿಂದ ಪರಿಪೂರ್ಣವಾಗಿದ್ದರೆ ಮಾತ್ರ ಆರೋಗ್ಯ ಸಂರಕ್ಷಣೆಯಲ್ಲಿ ಅಭಿವೃದ್ಧಿ ಸಾಧಿಸಬಹುದು. ಅದಕ್ಕಾಗಿ ಈ ಕೆಳಗಿನ ಪರಿಹಾರ ಕಾರ್ಯಕ್ರಮಗಳನ್ನು ಅವಶ್ಯವಾಗಿ ಕೈಗೆತ್ತಿಕೊಳ್ಳಬೇಕು.

1. ಜನರಿಗೆ ಆರೋಗ್ಯ ಸಂರಕ್ಷಣೆಯ ಬಗ್ಗೆ ತಿಳುವಳಿಕೆ ಉಂಟಾಗಲು ವಾರ್ಡು ಮಟ್ಟದಲ್ಲಿ ತಿಂಗಳಿಗೊಮ್ಮೆಯಾದರೂ ತಜ್ಞರಿಂದ ಅರಿವು ಮೂಡಿಸುವ ಶಿಬಿರಗಳನ್ನು ನಡೆಸಬೇಕು.
2. ಕುಟುಂಬ ಯೋಜನಾ ಕೇಂದ್ರದ ಮನೆ ಮನೆಗೆ ಭೇಟಿ ಕೊಡುವ ಸಿಬ್ಬಂಧಿಯನ್ನು ಪ್ರತೀ ವಾರ್ಡಿಗೊಬ್ಬರಂತೆ ನೇಮಿಸುವುದು. ಈ ಕಾರ್ಯಕ್ರಮ ಪರಿಣಾಮಕಾರಿಯಾಗಲು ಕನ್ನಡ ಮತ್ತು ಈ ಪ್ರದೇಶಗಳ ಭಾಷೆ ತಿಳಿದಿರುವ ಸಿಬ್ಬಂಧಿಗಳನ್ನು ನೇಮಿಸುವುದು.
3. ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಕನಿಷ್ಠ 25 ಹಾಸಿಗೆ ಸೌಕರ್ಯವುಳ್ಳ ಒಳರೋಗಿ ಆಸ್ಪತ್ರೆಯಾಗಿ ಭಡ್ತಿಗೊಳಿಸುವುದು.
4. ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ತುರ್ತುಚಿಕಿತ್ಸಾ ವಿಭಾಗ, ಹೆರಿಗೆ ವಿಭಾಗ, ಮಕ್ಕಳ ವಿಭಾಗಗಳು ಪ್ರತ್ಯೇಕವಾಗಿ ಕಾರ್ಯ ನಿರ್ವಹಿಸುವಂತೆ ಮಾಡುವುದು.
5. ಆಸ್ಪತ್ರೆಗೆ ಕ್ಲಿನಿಕಲ್ ಲ್ಯಾಬ್, ಅಂಬ್ಯುಲೆನ್ಸ್, ಜನರೇಟರ್, ವಾಹನ ಸೌಕರ್ಯ ಒದಗಿಸುವುದು.
6. ಆಸ್ಪತ್ರೆಯ ವೈದ್ಯರಿಗೆ ಮತ್ತು ಸಿಬ್ಬಂಧಿ ವರ್ಗದವರಿಗೆ ವಸತಿ ಸೌಕರ್ಯ ಏರ್ಪಡಿಸಿ ದಿನಪೂರ್ತಿ ಇವರ ಸೇವೆ ಸಿಗುವಂತೆ ವ್ಯವಸ್ಥೆ ಮಾಡುವುದು.
7. ಹಾವು ಕಡಿತ, ಹುಚ್ಚುನಾಯಿ ಕಡಿತಕ್ಕೆ ಚುಚ್ಚುಮದ್ದಿನ ಸೌಲಭ್ಯ ಒದಗಿಸುವುದು.
8. ತಿಂಗಳಿಗೊಮ್ಮೆ ತಜ್ಞ ವೈದ್ಯರ ಸಂದರ್ಶನ ಕಾರ್ಯಕ್ರಮ ಏರ್ಪಡಿಸುವುದು.
9. ಗರ್ಭಸ್ಥ ಶಿಶು ತಪಾಸಣಾ ಕಾರ್ಯಕ್ರಮ ನಡೆಸುವುದು.
10. ತಜ್ಞ ವೈದ್ಯರಿಂದ ಮೆಡಿಕಲ್ ಕ್ಯಾಂಪ್ ನಡೆಸುವುದು. ಶಾಲೆಗಳಲ್ಲಿ ಮಕ್ಕಳ ರೋಗ ತಪಾಸಣಾ ಕಾರ್ಯಕ್ರಮ ನಡೆಸುವುದು. ಮಕ್ಕಳಲ್ಲಿ ಸಾಧಾರಣವಾಗಿ ಕಂಡು ಬರುವ ರಕ್ತಹೀನತೆ, ಹೊಟ್ಟೆ ಹುಳ, ತುರಿಕಜ್ಜಿ, ದೃಷ್ಟಿದೋಷ, ಮುಂತಾದವುಗಳಿಗೆ ಶಾಲೆಯಲ್ಲಿ ನಡೆಸುವ ರೋಗ ತಪಾಸಣಾ ಕಾರ್ಯಕ್ರಮದೊಂದಿಗೆ ಔಷಧ ನೀಡುವುದು. ಇಂತಹ ಕಾರ್ಯಕ್ರಮಗಳಿಗೆ ಸಾಕಷ್ಟು ಹಣ ಕಾದಿರಿಸುವುದು.
11. ಸೊಳ್ಳೆ ನಿರ್ಮೂಲನಾ ಕಾರ್ಯಕ್ರಮವನ್ನು ಇಡಿ ಪಂಚಾಯತಿನಲ್ಲಿ ಹಮ್ಮಿಕೊಳ್ಳುವುದು. ಇದಕ್ಕಾಗಿ ಪ್ರತ್ಯೇಕ ಹಣ ತೆಗೆದಿರಿಸುವುದು.
12. ಔಷಧಗಳ ಕೊರತೆ ಅನುಭವಕ್ಕೆ ಬರುವುದರಿಂದ ಬೇಕಾದಷ್ಟು ಔಷಧಗಳ ಕೊರತೆ ಅನುಭವಕ್ಕೆ ಬರುವುದರಿಂದ ಬೇಕಾದಷ್ಟು ಔಷಧಗಳನ್ನು ಸೂಕ್ತ ಸಮಯದಲ್ಲಿ ಪೂರೈಸುವುದು.
13. ಐತನಡ್ಕ ಹಾಗು ಕಿನ್ನಿಂಗಾರು ಕುಟುಂಬ ಕಲ್ಯಾಣ ಕೇಂದ್ರಗಳಿಗೆ ಶಾಶ್ವತ ನೆಲೆಯ ಕಟ್ಟಡ ಒದಗಿಸುವುದು.
14. ವಾರ್ಡಿಗೆ ಒಂದರಂತೆ ಕುಟುಂಬ ಕಲ್ಯಾಣ ಕೇಂದ್ರಗಳಿಗೆ ಶಾಶ್ವತ ನೆಲೆಯ ಕಟ್ಟಡ ಒದಗಿಸುವುದು.
15. ಪೋಷಕಾಂಶಗಳ ಕೊರತೆ ಇರುವ ಮಕ್ಕಳಿಗೆ ಪೋಷಕಾಂಶಗಳನ್ನು ಒದಗಿಸುವುದು.

16. ಮಲೇರಿಯಾ, ಕೆಂಗಣ್ಣು ವಾಂತಿಬೇಧಿ, ಅರಸಿನ ಮಂಡ, ಮೊದಲಾದ ಸಾಂಕ್ರಾಮಿಕ ರೋಗಗಳಿಗೆ ಚಿಕಿತ್ಸೆ ನೀಡುವುದು ಮತ್ತು ರೋಗ ನಿರೋಧಕ ವ್ಯವಸ್ಥೆ ಮಾಡುವುದು.

17. ಕುಟುಂಬ ಕಲ್ಯಾಣ ಕೇಂದ್ರದ ಕಾರ್ಯವ್ಯಾಪ್ತಿಯಲ್ಲಿ ಬರುವ ಮಹಿಳಾ ಸ್ವಾಸ್ಥ್ಯ ಸಂಘಗಳನ್ನು ಸೇರಿಸಿಕೊಂಡು ಆರೋಗ್ಯ ಪಾಲನೆಯ ಕುರಿತಾದ ಜಾಗೃತಿ ಕಾರ್ಯಕ್ರಮಗಳನ್ನು ನಡೆಸುವುದು.

18. ಪ್ರಸ್ತುತವಿರುವ ಆಯುರ್ವೇದ ಆಸ್ಪತ್ರೆಗೆ ಒಂದು ಶಾಶ್ವತ ನೆಲೆಯ ಕಟ್ಟಡ ಒದಗಿಸುವುದು. 20 ಹಾಸಿಗೆಗಳುಳ್ಳ ಸೌಕರ್ಯವಿರುವ ಚಿಕಿತ್ಸಾಲಯವಾಗಿ ಅದನ್ನು ಭಡ್ತಿಗೊಳಿಸುವುದು.

19. ಈಗ ಇರುವ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಆಯುರ್ವೇದ ಆಸ್ಪತ್ರೆಯ ಎಲ್ಲಾ ಅಗತ್ಯಗಳನ್ನು ತಕ್ಷಣ ಈಡೇರಿಸುವುದು.

20. ನೇಚರೋಪತಿ, ಹೋಮಿಯೋಪತಿ, ಆಸ್ಪತ್ರೆಗಳನ್ನು ಹೊಸದಾಗಿ ಪ್ರಾರಂಭಿಸುವುದು.

21. ಮಾರಕ ರೋಗಗಳಿಂದ ಬಳಲುವವರಿಗೆ, ಅಪಘಾತಗಳಿಂದ ದೈಹಿಕ ಹಾನಿಗೊಳಗಾದವರಿಗೆ ಶಸ್ತ್ರಚಿಕಿತ್ಸೆಯೇ ಮೊದಲಾದ ಶುಶ್ರೂಷೆಗಳ ಅಗತ್ಯವಿದೆ. ಅಂಥವರಿಗೆ ಧನ ಸಹಾಯ ಒದಗಿಸಲು ಮುಂಚಿತವಾಗಿ ಹಣ ಕಾದಿರಿಸುವುದು.

22. ರೋಗ ನಿವಾರಣಾ ಮಾರ್ಗೋಪಾಯವಾಗಿ ಯೋಗ ಕೇಂದ್ರಗಳನ್ನು ಸ್ಥಾಪಿಸಿ ಪ್ರೋತ್ಸಾಹಿಸುವುದು.

23. ಪಂಚಾಯತ್ ವ್ಯಾಪ್ತಿಯಲ್ಲಿರುವ ನಾಟಿ ವೈದ್ಯರನ್ನು ಗುರುತಿಸುವುದು. ಅವರ ಸೇವೆಗಳಿಗೆ ಪ್ರಚಾರ ಕೊಡುವುದು. ಅವರಿಗೆ ಬೇಕಾಗುವ ಸಹಾಯ ಸಹಕಾರಗಳನ್ನು ಒದಗಿಸುವುದು. ಅವರು ತಮ್ಮ ಅನುಭವ ಹಾಗು ಆಲೋಚನೆಗಳನ್ನು ಮುಂದಿನ ಪೀಳಿಗೆಗೆ ಉಪದೇಶಿಸುವಂತೆ ಪ್ರೇರೇಪಣೆ ಈಯುವುದು.

24. ಪ್ರದೇಶದ ಶುಚೀಕರಣಕ್ಕಾಗಿ ಸೂಕ್ತ ಸಂಖ್ಯೆಯ ನೌಕರರನ್ನು ನೇಮಿಸುವುದು.

25. ಜನಸಂಖ್ಯಾ ನಿಯಂತ್ರಣ ಕಾರ್ಯಕ್ರಮವನ್ನು ಇನ್ನಷ್ಟು ಬಲಪಡಿಸುವುದು.

26. ಮರಣೋತ್ತರ ಪರೀಕ್ಷಾ ಕೇಂದ್ರವನ್ನು ಮುಳ್ಳೇರಿಯಾದಲ್ಲಿ ಸ್ಥಾಪಿಸಿದರೆ ಬೆಳ್ಳೂರು, ಕುಂಬ್ಡಾಜೆ, ದೇಲಂಪಾಡಿ, ಕಾರಡ್ಕ ಪಂಚಾಯತು ನಿವಾಸಿಗಳಿಗೆ ಪ್ರಯೋಜನ ದೊರೆಯುವುದು.

**ಪರಿಸರ ಶುಚಿತ್ವ**

ಶುದ್ಧವಾದ ನೀರು, ಉತ್ತಮ ರೀತಿಯ ವೈದ್ಯಕೀಯ ಸೌಲಭ್ಯಗಳಿದ್ದರೂ ಪರಿಸರ ಶುಚಿತ್ವವಿಲ್ಲದಿದ್ದರೆ ರೋಗಗಳು ಕಡಿಮೆಯಾಗುವುದಿಲ್ಲ. ರೋಗಗಳು ಬರದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳುವುದು, ಯಾವಾಗಲೂ ಕ್ಷೇಮ ಗುಣಪಡಿಸುವುದಕ್ಕಿಂತ ತಡೆಗಟ್ಟುವುದೇ ಲೇಸು. ನಾವು ಪರಿಸರ ಶುಚಿತ್ವದ ವಿಷಯದಲ್ಲಿ ತುಂಬಾ ಕಾಳಜಿ ವಹಿಸಬೇಕು. ಪರಿಸರ ಶುಚಿತ್ವವು ಒಂದು ಸಾಮಾಜಿಕ ಜವಾಬ್ದಾರಿಯಾಗಿದೆ.

**ಕಾರಣಗಳು:** ಯಾವುದೇ ಬೃಹತ್ ಕೈಗಾರಿಕೆಗಳು ಇಲ್ಲಿ ಇಲ್ಲದ ಕಾರಣ ವಾಯು ಮಾಲಿನ್ಯ, ಜಲಮಾಲಿನ್ಯ, ಶಬ್ದ ಮಾಲಿನ್ಯಗಳು ಇಲ್ಲಿ ಕಂಡು ಬರುವುದಿಲ್ಲ. ಆದರೂ ಪರಿಸರ ಶುಚಿತ್ವ ಸಾಕಷ್ಟು ಇಲ್ಲ. ಪರಿಸರಗಳಿಗೆ ಶುಚಿತ್ವದ ಕೊರತೆಯೇ ಈ ಪ್ರದೇಶದ ಜನ ನಾನಾ ಬಗೆಯ ತುತ್ತಾಗುವ ಪ್ರಧಾನ ಕಾರಣವಾಗಿದೆ.

**ಪರಿಸರ ಮಾಲಿನ್ಯದ ಕಾರಣಗಳು:**

1. ಪ್ರತಿ ಮನೆಗೂ ಕಕ್ಕುಸು ಸೌಲಭ್ಯ ಇಲ್ಲದಿರುವುದು.
2. ಸಾರ್ವಜನಿಕ ಕಕ್ಕುಸು, ಶೌಚಾಲಯಗಳು ಅಗತ್ಯವಿರುವಷ್ಟು ಇಲ್ಲದಿರುವುದು.
3. ಕಸದ ತೊಟ್ಟಿ ಮಾರ್ಗದ, ಪಟ್ಟಣಗಳ ಬಳಿ ಇಲ್ಲದಿರುವುದು.
4. ಬಾವಿಗಳಲ್ಲಿ ಕೆಸರು ತುಂಬಿ ನೀರು ಮಲಿನವಾಗುವುದು.
5. ಸರಕಾರಿ ಬಾವಿ, ಖಾಸಗಿ ಬಾವಿಗಳ ನೀರು ಕೆಲವು ಸಲ ಕುಡಿಯಲು ಸೂಕ್ತವಲ್ಲದೆ ಇರುವುದು.
6. ಕಟ್ಟೆ ಇಲ್ಲದ ಖಾಸಗಿ ಬಾವಿಗಳಿರುವುದು.
7. ಉಪಯೋಗ ಶೂನ್ಯವಾದ ಬಾವಿಗಳಿರುವುದು.
8. ಜನರಿಗೆ ಸಾಕಷ್ಟು ತಿಳುವಳಿಕೆ, ಆರ್ಥಿಕ ಸ್ಥಿತಿ ಇಲ್ಲದಿರುವುದು.

**ಪರಿಸರ ಶುಚಿತ್ವ ಕಾಪಾಡಲು ಕೈಗೊಳ್ಳಬೇಕಾದ ಮಾರ್ಗೋಪಾಯಗಳು.**

1. ಪ್ರತಿ ಮನೆಗೂ ಕನಿಷ್ಟ ಒಂದರಂತೆ ಕಕ್ಕುಸು ನಿರ್ಮಾಣ ಯೋಜನೆಯ ಅಗತ್ಯವಿದೆ. ಗ್ರಾಮೀಣ ಪ್ರದೇಶದ ಈ ಪಂಚಾಯತಿನ ಜನರ ಆರ್ಥಿಕ ಸ್ಥಿತಿ ಕೆಳಮಟ್ಟದಲ್ಲಿದೆ. ಇದರಿಂದಾಗಿ ಇಲ್ಲಿ ಬೆರಳೆಣಿಕೆಯಷ್ಟು ಮನೆಗಳಲ್ಲಿ ಮಾತ್ರ ಕಕ್ಕುಸು ಸೌಲಭ್ಯವಿದೆ. ಸ್ವಂತ ಖರ್ಚಿನಿಂದ ಕಕ್ಕುಸು ಕಟ್ಟಿಸಲು ನಾಗರಿಕರು ಆರ್ಥಿಕವಾಗಿ ಅಸಮರ್ಥರಾದ ಕಾರಣ ಪ್ರತಿ ಮನೆಗೂ ಕನಿಷ್ಟ ಒಂದರಂತೆ ಕಕ್ಕುಸು ನಿರ್ಮಾಣದ ಯೋಜನೆ ತಯಾರಿಸಿ ಕಾರ್ಯಗತಗೊಳಿಸಬೇಕು.

2. ಸಾರ್ವಜನಿಕ ಕಕ್ಕುಸು, ಶೌಚಾಲಯಗಳ ನಿರ್ಮಾಣ ಸೆಕೆಂಡರಿ ಡಾಟಾದಂತೆ ಈ ಗ್ರಾಮದಲ್ಲಿ ಕೇವಲ 5 ಸಾರ್ವಜನಿಕ ಕಕ್ಕುಸು ಶೌಚಾಲಯಗಳಿವೆ. ಇದು ಜನರ ಅಗತ್ಯಕ್ಕೆ ಸಾಲದು. ಆದುದರಿಂದ ಹೊಸದಾಗಿ ಕನಿಷ್ಟ ನಾಲ್ಕು ಸಾರ್ವಜನಿಕ ಕಕ್ಕುಸುಗಳನ್ನು ನಿರ್ಮಿಸಬೇಕು.

3. ಕಸದ ತೊಟ್ಟಿಗಳನ್ನು ಅಗತ್ಯವಿರುವಲ್ಲಿ ಸ್ಥಾಪಿಸುವುದು.

4. ನೀರು ಹಾಳಾಗದಂತೆ ಸಂರಕ್ಷಿಸುವುದು. ಸರಕಾರಿ ಬಾವಿ, ಖಾಸಗಿ ಬಾವಿಗಳ ಸಮೀಪವೇ ಸ್ನಾನ ಮಾಡುವುದರಿಂದ, ಬಟ್ಟೆ ತೊಳೆಯುವುದರಿಂದ ನೀರು ಮಲಿನವಾಗುತ್ತದೆ. ಈ ರೀತಿ ಮಲಿನವಾಗುವುದನ್ನು ತಡೆಗಟ್ಟಲು ಅರಿವು ಮೂಡಿಸುವ ಶಿಬಿರಗಳನ್ನು ಏರ್ಪಡಿಸಬೇಕು. ಮತ್ತು ಸೂಕ್ತ ಕ್ರಮ ಕೈಗೊಳ್ಳಬೇಕು. ಬಟ್ಟೆ ಒಗೆಯಲು ಸ್ನಾನಮಾಡಲು ಬದಲಿ ಏರ್ಪಾಡು ಕೈಗೊಳ್ಳುವುದು. ಹತ್ತಿರದಲ್ಲಿರುವ ಮರಗಳ ತರಗೆಲೆ, ಕಡ್ಡಿ ಬಾವಿಗೆ ಬಿದ್ದು ನೀರು ಮಲಿನವಾಗುತ್ತದೆ. ಇದಕ್ಕೆ ಎಲ್ಲಾ ಬಾವಿಗಳಿಗೆ ಬಲೆಹೊದಿಸುವ ಕ್ರಮ ಕೈಗೊಳ್ಳುವುದು.

5. ಬಾವಿಗಳ ಕೆಸರು ತೆಗೆಸುವುದು: ನೀರಿನ ಕ್ಷಾಮ ಉಂಟಾದಾಗ ಬಾವಿಗಳಲ್ಲಿರುವ ಕೆಸರಿನಿಂದ ನೀರು ಮಲಿನವಾಗುತ್ತದೆ. ಇದನ್ನು ತಡೆಗಟ್ಟಲು ಕಾಲ ಕಾಲಕ್ಕೆ ಬಾವಿಗಳ ಬಾವಿಗಳ ಕೆಸರು ತೆಗೆಸಲು ಹಣ ಕಾದಿರಿಸಿ ಕೆಸರು ತೆಗೆದು ಶುದ್ಧವಾದ ನೀರು ದೊರಕುವಂತೆ ಮಾಡುವುದು.

6. ಕಟ್ಟೆ ಇಲ್ಲದ ಖಾಸಗಿ ಬಾವಿಗಳಿಗೆ ಕಟ್ಟೆಯನ್ನು ನಿರ್ಮಿಸಬೇಕು ಇಲ್ಲದೆ ಇದ್ದರೆ ಉಪಯೋಗಿಸಿದ ನೀರು ಪುನಃ ಬಾವಿಗೆ ಹರಿದು ಜಲ ಮಾಲಿನ್ಯ ಉಂಟಾಗುವುದು. ಆದುದರಿಂದ ಕಟ್ಟೆ ಇಲ್ಲದ ಬಾವಿಗಳಿಗೆ ಕಟ್ಟೆ ನಿರ್ಮಿಸುವ ಕಾರ್ಯಕ್ರಮ ಅಗತ್ಯ.

7. ಉಪಯೋಗ ಶೂನ್ಯವಾದ ಬಾವಿಗಳನ್ನು ಮುಚ್ಚುವುದು. ನೀರಿಲ್ಲದೆ ಬಾವಿಗಳು ಉಪಯೋಗ ಶೂನ್ಯವಾಗಿದೆ. ಇವುಗಳು ಪರಿಸರ ಶುಚಿತ್ವಕ್ಕೆ ಬಾಧಕವಾಗುವುದರಿಂದ ಅವುಗಳನ್ನು ಮುಚ್ಚಿಸುವ ಕ್ರಮ ಕೈಗೊಳ್ಳಬೇಕು.

8. ಅರಿವು ಮೂಡಿಸುವ ಶಿಬಿರ: ಪರಿಸರ ಶುಚಿತ್ವದ ಬಗ್ಗೆ ಜನರಲ್ಲಿ ತಿಳುವಳಿಕೆ ಮೂಡಿಸಲು ಶಿಬಿರಗಳನ್ನು ಏರ್ಪಡಿಸುವುದು ಅಗತ್ಯವಾಗಿದೆ.

9. ಪರಿಸರ ಶುಚಿತ್ವ ಕಾರ್ಯಕ್ರಮ: ಸಾರ್ವಜನಿಕ ಸಭೆ, ಉತ್ಸವ, ಸಮಾರಂಭಗಳ ಮೊದಲು ಯಾ ಅನಂತರ ಪರಿಸರ ಶುಚಿತ್ವ ಕಾರ್ಯಕ್ರಮ ಹಮ್ಮಿಕೊಳ್ಳುವುದು.

10. ಸಾರ್ವಜನಿಕ ಕಕ್ಕುಸು, ಶೌಚಾಲಯಗಳ ಶುಚಿತ್ವ ಕಾಪಾಡಿಕೊಳ್ಳುವುದು.

11. ಈ ಮೇಲಿನ ಉದ್ದೇಶಗಳಿಗೆ ಸಾಕಷ್ಟು ಹಣ ಕಾದಿರಿಸುವುದು.

12. ಜಲ ಶುದ್ಧೀಕರಣ ಕಾರ್ಯಕ್ರಮ: ಬಾವಿ ಕೆರೆಗಳ ನೀರು ಹಾಳಾಗದಂತೆ ಅಗತ್ಯ ಬಂದಾಗಲೆಲ್ಲ ಕ್ಲೋರಿನೇಶನ್ ಮೂಲಕ ಜಲ ಶುದ್ಧೀಕರಣ ಕಾರ್ಯಕ್ರಮ ಕೈಗೊಳ್ಳುವುದು.

#######

# 11

# ಸಾರಿಗೆ ಸೌಕರ್ಯ

'ಅಶನ-ವಸನ-ವಸತಿ' ಹಾಗೂ ಶಿಕ್ಷಣ ಇವು ಮಾನವನ ಪ್ರಾಥಮಿಕ ಅವಶ್ಯಕತೆಗಳು. ಸಾರಿಗೆ ಇವುಗಳನ್ನು ಪರಸ್ಪರ ಪೋಣಿಸುವ ಒಂದು ದಾರ. ಮಾನವನ ಶರೀರದಲ್ಲಿ ರಕ್ತನಾಳಗಳು ಇರುವಂತೆ ಒಂದು ಪ್ರದೇಶದಲ್ಲಿ ರಸ್ತೆಗಳು ಇರುತ್ತವೆ. ರಕ್ತನಾಳಗಳ ದೋಷಗಳಿಂದಲಾಗಿ ಅಂಗಾಗಗಳು ಕಾರ್ಯಹೀನಗೊಳ್ಳುತ್ತವೆ. ರಸ್ತೆಗಳು ದೋಷ ಪೂರ್ಣವಾದರೆ ಆ ಪ್ರದೇಶದ ಅಭಿವೃದ್ಧಿ ಮೊಟಕುಗೊಳ್ಳುತ್ತದೆ. ಇದರಿಂದಾಗಿ ಒಂದು ಪ್ರದೇಶದ ಅಭಿವೃದ್ಧಿಯು ಅಲ್ಲಿ ಹರಡಿಕೊಂಡಿರುವ ಸಾರಿಗೆ ಹಾಗೂ ಸಂಪರ್ಕ ಜಾಲಗಳನ್ನು ಹೊಂದಿಕೊಂಡಿರುತ್ತದೆ.

ಗುಡ್ಡಗಾಡುಗಳ ನಮ್ಮ ಪಂಚಾಯತಿನಲ್ಲಿ ಹೇಳುವಷ್ಟು ದೊಡ್ಡ ವ್ಯಾಪಾರ ಕೇಂದ್ರಗಳಿಲ್ಲ. ಆದುದರಿಂದ ಇಲ್ಲಿನ ಜನರು ತಮ್ಮ ಕೊಡು ಕೊಳ್ಳುವಿಕೆಗಾಗಿ ನೆರೆಯ ರಾಜ್ಯ, ಇಲ್ಲವೇ ಅನ್ಯ ಪಂಚಾಯತಿನ ಮೊರೆ ಹೋಗುವುದು ಅನಿವಾರ್ಯ.

ರಸ್ತೆ, ವಾಹನಗಳು ಕಡಿಮೆಯಿದ್ದ ಅದೊಂದು ಕಾಲ ಊರಿಂದೂರಿಗೆ ಕಾಲ್ನಡಿಗೆಯಲ್ಲಿಯೇ ಪ್ರಯಾಣ ಬೆಳೆಸುತ್ತಿದ್ದ ಜನರು ತಮ್ಮ ಸಾಮಾನು ಸರಂಜಾಮುಗಳನ್ನು ತಲೆಹೊರೆಯಿಂದಲೇ ಒಯ್ಯುತ್ತಿದ್ದರು. ದಾರಿ ಮಧ್ಯದಲ್ಲಿ ತಲೆಹೊರೆಯನ್ನು ಇಳಿಸಿ ವಿಶ್ರಾಂತಿ ಪಡೆಯಲ್ಲಿಕ್ಕಾಗಿ ಎತ್ತರವಾದ ಹೇರುಕಲ್ಲನ್ನು ನಾಟುತ್ತಿದ್ದರು ಅಂತಹ ಪ್ರದೇಶಕ್ಕೆ ನಾಟೆಕಲ್ಲು ಎಂದೇ ಹೆಸರಾಯಿತು. ನಮ್ಮ ಪಂಚಾಯತ್ ಕಛೇರಿಯಿಂದ ಒಂದು ಕಿ. ಮೀ. ದೂರದಲ್ಲಿ ಈ ನಾಟೆಕಲ್ಲು ಎಂಬ ಸ್ಥಳವಿದೆ.

ಅಲ್ಲೊಂದು ಇಲ್ಲೊಂದು ಎತ್ತಿನಗಾಡಿ, ಕುದುರೆಗಾಡಿಗಳು ಓಡುತ್ತಿದ್ದ ಕಾಲವದು. ಈಗಿನ ಪಂಚಾಯತು ಕಛೇರಿಯಿಂದ ಸುಮಾರು ನಾಲ್ಕು ಕಿ. ಮೀ. ದೂರದ ಬೆಟ್ಟದ ತನಕ ಎತ್ತಿನ ಗಾಡಿಗಳು ಹರಿದು ಬರುತ್ತಿದ್ದುದರಿಂದ ಗಾಡಿಗುಡ್ಡೆ ಎಂದೇ ಜನರು ಆ ಬೆಟ್ಟವನ್ನು ಕರೆದರು.

ಊರಿಂದೂರಿಗೆ ಅಲೆದು ವ್ಯಾಪಾರವನ್ನು ನಡೆಸುತ್ತಿದ್ದ ಅಲೆಮಾರಿ ವ್ಯಾಪಾರಿಗಳ ಕೈಯಿಂದ ಅಂದಿನ ಆಳರಸರು ಸುಂಕವನ್ನು ಪಡೆಯುತ್ತಿದ್ದ ಪ್ರದೇಶವು ಸುಂಕದ ಕಟ್ಟೆ ಎಂಬ ಹೆಸರಿನಿಂದ ಇಂದಿಗೂ ಕರೆಯಲ್ಪಡುತ್ತದೆ. ಈ ಸ್ಥಳವು ಬೆಳ್ಳೂರು ಪಂಚಾಯತ್ ಕಛೇರಿಯಿಂದ ಎರಡು ಕಿ. ಮೀ. ದೂರದಲ್ಲಿದೆ.

ಮುಳ್ಳೇರ್ಯಾ, ಆರ್ಲಪದವು, ಸುಳ್ಯಪದವು ಎಂಬವು ಬೆಳ್ಳೂರಿನ ಸಮೀಪದ ವ್ಯಾಪಾರೀ ಕೇಂದ್ರಗಳಾಗಿದ್ದು, ಮುಳ್ಳೇರ್ಯವು ನಮ್ಮದೇ ರಾಜ್ಯದಲ್ಲಿಯೂ ಉಳಿದೆರಡು ಸಮೀಪದ ಕರ್ಣಾಟಕದಲ್ಲಿವೆ. ಹೇಗಿದ್ದರೂ ವಾಹನ ಸೌಕರ್ಯಗಳು ಕಡಿಮೆಯಾಗಿದ್ದು ಕನಿಷ್ಠ ಐದು ಮೈಲುಗಳಷ್ಟು ನಡೆಯಬೇಕಾಗಿತ್ತು. ಆಮೇಲಷ್ಟೇ ಆಗೊಂದು ಈಗೊಂದು ಓಡುವ ಬಸ್ಸುಗಳನ್ನು ಹಿಡಿದು ದೂರದ ಕಾಸರಗೋಡಿಗೋ, ಸುಳ್ಯ, ಪುತ್ತೂರಿಗೋ ಹೋಗಬೇಕಾಗಿತ್ತು.

1950ರ ಸುಮಾರಿಗೆ ಮದ್ರಾಸು ಸರಕಾರದ ಅಧೀನದಲ್ಲಿ ಈ ಪ್ರದೇಶವಿದ್ದಾಗ ಮುಳ್ಳೇರ್ಯಾ ಹಾಗೂ ಆರ್ಲಪದವುಗಳನ್ನು ಜೋಡಿಸುವ ಒಂದು ರಸ್ತೆಯ ನಿರ್ಮಾಣವಾಯಿತು. ಇದು ಬೆಳ್ಳೂರಿನ ಮೂಲಕ ಹಾದು ಹೋಗುವುದಾದರೂ ಕಚ್ಚಾ ರಸ್ತೆಯಾಗಿದ್ದುದರಿಂದ ವಾಹನ ಓಡಾಟಕ್ಕೆ ಯೋಗ್ಯವಾಗಿರಲಿಲ್ಲ.

1960ರಲ್ಲಿ ನಾಟೆಕಲ್ಲಿನ ತನಕ ಕಿರುವಾಹನಗಳು ಓಡಾಡಬಲ್ಲ ಅಗಲ ಕಿರಿದಾದ ರಸ್ತೆಯ ನಿರ್ಮಾಣವಾಗಿ ಕಾರು ಜೀಪುಗಳು ಓಡಲಾರಂಭಿಸಿ ಸಾರಿಗೆಗೆ ಒಂದು ಹೊಸ ಆಯಾಮವನ್ನಿತ್ತಿತು. 1970ರ ಕಾಲಕ್ಕೆ ಮುಳ್ಳೇರ್ಯಾ ಮಾರ್ಗವಾಗಿ ಗಾಡಿಗುಡ್ಡೆಗೆ ಬಸ್ಸುಗಳ ಓಡಾಟ ಪ್ರಾರಂಭವಾಯಿತೆನ್ನಬಹುದು. ಏನಿದ್ದರೂ ಬೆಳ್ಳೂರು ಪಂಚಾಯಿತಿನ ಜನರು ಬಸ್ಸು ಹಿಡಿಯಲು ಬೇರೊಂದು ಪಂಚಾಯತೋ ರಾಜ್ಯವೋ ಎಂಬಂತೆ ನಡೆದು ಸೇರಬೇಕಾಗಿತ್ತು. 1980ರ ಅನಂತರ ಸಾರಿಗೆ ವ್ಯವಸ್ಥೆಯು ಪುರೋಗಾಮಿಯಾಗಿ, ಬದಿಯಡ್ಕದಿಂದ ಕಿನ್ನಿಂಗಾರು ತನಕ ಬಸ್ಸು ಓಡಲು ತೊಡಗಿತ್ತು, 1985ರಲ್ಲಿ ಮುಳ್ಳೇರ್ಯಾದಿಂದ ಸುಮಾರು 5ಕಿ. ಮೀ. ದೂರದ ಬೆಳ್ಳೂರು ಪಳ್ಳಪ್ಪಾಡಿಯ ತನಕವೂ ಪಿ. ಡಬ್ಲ್ಯೂಡಿಯ ವತಿಯಿಂದ ರಸ್ತೆಗೆ ಡಾಮಾರು ಚೆಲ್ಲಿಯಾಯಿತು. ಓಡಾಡುವ ಬಸ್ಸುಗಳ ಸಂಖ್ಯೆಯು ಹೆಚ್ಚಾಗಿ ಜನರಿಗೆ ಸೌಕರ್ಯ ಒದಗಿತು.

1987ರ ಸುಮಾರಿಗೆ ಬದಿಯಡ್ಕದಿಂದ ಮುಳ್ಳೇರ್ಯದಾರಿಯಾಗಿ ಕಿನ್ನಿಂಗಾರಿಗೆ, ಕಾಸರಗೊಡಿನಿಂದ ನಾಟೆಕಲ್ಲು ದಾರಿಯಾಗಿ ಕಾಯರ್ದಪದವು ಎಂಬಲ್ಲಿಗೂ ಬಸ್ಸುಗಳ ಓಡಾಟ ಪ್ರಾರಂಭವಾಯಿತು. ನಾಕೂರು, ಕಣ್ಣಡ್ಕ, ಕುಳದಪಾರೆ, ಕಕ್ಕೆಬೆಟ್ಟು ಇಲ್ಲಿನ ಪೌರರಿಗೆ ಕಾಯರ್ದಪದವು ಬಸ್ಸು ವರದಾನವೇ ಆಯಿತು. ಆದರೆ ಈಗ ರಸ್ತೆಯ ದುಸ್ಥಿತಿಯಿಂದಾಗಿ ಸದ್ರಿ ಬಸ್ಸು ಕಾಯರ್ದಪದವಿಗೆ ಹೋಗುವುದನ್ನು ಬಿಟ್ಟು, ಪಳ್ಳಪ್ಪಾಡಿಯಿಂದ ತಿರುಗಿ ಮಿಂಚಿ ಪದವಿಗೆ ಹೋಗುತ್ತಿದೆ. ಕಾಸರಗೋಡಿನಿಂದ ಬೆಳಿಂಜೆ ದಾರಿಯಾಗಿ ಕಾಯಿಮಲೆ ಎಂಬಲ್ಲಿಗೆ ಬಸ್ಸುಗಳು ಬರುವುದಿದ್ದರೂ, ಮಳೆಗಾಲದಲ್ಲಿ ಓಡಾಟವನ್ನು ನಿಲ್ಲಿಸುತ್ತವೆ. ರಸ್ತೆಯ ದುಸ್ಥಿತಿಯೇ ಇದಕ್ಕೆ ಕಾರಣ.

ನಿರಂತರ ಬೆಳೆಯುತ್ತಿರುವ ಜನಸಂಖ್ಯೆಯು ನಮ್ಮ ಸಜೀವ ಸಮಸ್ಯೆ. ಪ್ರಾಥಮಿಕ ಅವಶ್ಯಕತೆಗಳನ್ನು ಪೂರೈಸುವುದು ನಮ್ಮೆಲ್ಲರ

ಹೊಣೆ. ಈ ನಿಟ್ಟಿನಿಂದ ಕೈಗಾರಿಕೆ, ಕೃಷಿ, ವಸತಿ ನಿರ್ಮಾಣ ಮೊದಲಾದವುಗಳಲ್ಲಿ ಕ್ರಾಂತಿಯಾಗಬೇಕು. ಅದಕ್ಕೆ ಪೂರ್ವಭಾವಿಯಾಗಿ ಪ್ರಸ್ತುತ ಇರುವ ಸಾರಿಗೆ ಹಾಗೂ ಸಂಪರ್ಕ ವ್ಯವಸ್ಥೆಯು ಕ್ಷಿಪ್ರ ಪ್ರಗತಿಯನ್ನು ಸಾಧಿಸಬೇಕು. ಇದನ್ನು ಸಾಧಿಸಲಿಕ್ಕಾಗಿ ಈಗ ಇರುವ ಸಾರಿಗೆ, ಸಂಪರ್ಕ ವ್ಯವಸ್ಥೆಯನ್ನೊಮ್ಮೆ ಅಧ್ಯಯನ ಮಾಡುವುದು ಉತ್ತಮವಲ್ಲವೆ ?

P.W. D. ರಸ್ತೆ, ಪಂಚಾಯತು ರಸ್ತೆ ಮತ್ತು ಕಾಲು ದಾರಿಗಳೆಂಬ ಮೂರು ಪ್ರಧಾನ ವರ್ಗೀಕರಣವು ಇದಕ್ಕೆ ಪೂರಕವಾದೀತು.

1 ಈಗ ಇರುವ P.W. D. ರಸ್ತೆಯ ವಿವರವನ್ನು ತಖ್ತೆ 1ರಲ್ಲಿ ಕೊಡಲಾಗಿದೆ.

2 ಪ್ರಸ್ತುತ ಇರುವ ಪಂಚಾಯತು ರಸ್ತೆಗಳ ವಿವರವು ತಖ್ತೆ 2ರಲ್ಲಿ ಕೊಡಲಾಗಿದೆ.

3 ಹೊಸತಾಗಿ ನಿರ್ಮಾಣಗೊಳ್ಳಬೇಕಾದ ಪಂಚಾಯತು ರಸ್ತೆಗಳ ವಿವರವನ್ನು ತಖ್ತೆ 3ರಲ್ಲಿ ಕೊಡಲಾಗಿದೆ.

****

## ತಖ್ತೆ - 1

| ಕ್ರಮ ಸಂಖ್ಯೆ | ರಸ್ತೆಯ ಹೆಸರು | ಉದ್ದ ಕಿ. ಮೀಗಳಲ್ಲಿ | ಡಾಮರು ಹಾಕಿದ ಭಾಗ ಕಿ. ಮೀಗಳಲ್ಲಿ | ಇನ್ನು ಡಾಮರು ಆಗಬೇಕಾದ ಭಾಗ ಕಿ.ಮೀಗಳಲ್ಲಿ | ಇತರ ವಿವರಗಳು |
|---|---|---|---|---|---|
| 1 | ಮುಳ್ಳೇರ್ಯಾ ಆರ್ಲಪದವು ರಸ್ತೆ | 7K. M. | 4 K. M. | 3 K. M. | ನಾಟೆಕಲ್ಲಿನಿಂದ ನೆಟ್ಟಣಿಗೆ ಜಂಕ್ಷನ್ ತನಕ ಕಿನ್ನಿಂಗಾರಿನಿಂದ ವಾಣಿ ನಗರ ತನಕ ಡಾಮರು ಆಗಿದೆ. ಮಧ್ಯೆ ಬಾಕಿ ಇದೆ. ಮೋರಿಗಳ ಕೆಲಸ,' ಡಾಮರೀಕರಣ ಆಗುತ್ತಿದ್ದು, ಸರಳಿ ಮೂಲೆಯಲ್ಲಿ ಒಂದು ಸಂಕದ ಕೆಲಸವೂ ನಡೆಯುತ್ತಿದೆ. |
| 2 | ಬದಿಯಡ್ಕ ಸುಳ್ಯಪದವು ರಸ್ತೆ ಬೆಳಿಂಜೆ ದಾರಿಯಾಗಿ | 8K. M. | 4 K. M. | 4 K. M. | ನಾಟೆಕಲ್ಲಿನಿಂದ ನೆಟ್ಟಣಿಗೆ ಜಂಕ್ಷನ್ ತನಕ ಡಾಮರು ಆಗಿದ್ದು, ಜಂಕ್ಷನ್‌ನಿಂದ ಕರ್ನಾಟಕ ಗಡಿ ಸುಳ್ಯಪದವು ಸಂಕದ ತನಕ ಡಾಮರು ಆಗಬೇಕಷ್ಟೆ. ಕರ್ಕಟಗೋಳಿಯಿಂದ ನಾಟೆ ಕಲ್ಲು ತನಕ ಡಾಮರು ಆಗಬೇಕು. |
| 3 | ಬದಿಯಡ್ಕ ಸುಳ್ಯಪದವು ರಸ್ತೆ ಯೇತಡ್ಕ ದಾರಿಯಾಗಿ | 12K. M. | --- | 12 K. M. | ಬೀಜದ ಕಟ್ಟೆಯಿಂದ ಸುಳ್ಯಪದವು ತನಕ ಇರುವ ಭಾಗವು ಬೆಳ್ಳೂರು ಪಂಚಾಯ್ತಿಗೆ ಸೇರಿದೆ. ಡಾಮರಿನ ಕೆಲಸ, ಮೋರಿಗಳ ನಿರ್ಮಾಣ, ರಸ್ತೆಯನ್ನು ಅಗಲಗೊಳಿಸುವುದು ನಡೆಯುತ್ತಿದೆ. |
| | | | | | |

## ತಖ್ತೆ - 2

| ಕ್ರಮ ಸಂಖ್ಯೆ | ರಸ್ತೆಯ ಹೆಸರು | ಉದ್ದ ಕಿ. ಮೀಗಳಲ್ಲಿ | ಡಾಮರು ಹಾಕಿದ್ದು | ಇನ್ನು ಡಾಮರು ಆಗಬೇಕಾದ್ದು | ಇತರ ವಿವರಗಳು |
|---|---|---|---|---|---|
| 1 | ಪನೆಯಾಲದಿಂದ ಜವುನಿ ಗುಡ್ಡೆ | 0.864 | --- | ✓ | ಇದನ್ನು ಅಗಲಗೊಳಿಸಿ ದೊಂಪತ್ತಡ್ಕದಲ್ಲಿ, ಪನೆಯಾಲ ಶಾಲೆಯ ಎದುರುಗಡೆ, ದೇವಸ್ಥಾನದ ಬಳಿ ಮೋರಿಗಳು ಬೇಕು. ಡಾಮರು ಆಗಬೇಕು. |
| 2 | ಬೀಜದ ಕಟ್ಟೆಯಿಂದ ಕಾಯಿಮಲೆ | 1.020 | --- | ✓ | ಕಾಯಿಮಲೆಯಲ್ಲಿ ಅಣೆಕಟ್ಟು ಸಹಿತ ಸಂಕ ನಿರ್ಮಿಸಿ ಕಾಯಿಮಲೆಗೆ ಬರುತ್ತಿರುವ ವಾಹನಗಳು ಸರ್ವ ಋತು P. W. D. ಗಳಲ್ಲಿಯೂ ಬದಿಯಡ್ಕ ಸುಳ್ಯಪದವು ರಸ್ತೆಗೆ ಸೇರು ಸೌಕರ್ಯ ಒದಗಿಸುವುದು. |
| 3 | ಜವುನಿಗುಡ್ಡೆಯಿಂದ ಹೊಸಗದ್ದೆ | 0.150 | --- | ✓ | ಕೇವಲ 150 ಮೀಟರುಗಳಷ್ಟು ಮಾತ್ರ ಆಗಿದ್ದು ತಾಂತ್ರಿಕ ಅಡಚಣೆಯಿಂದ ಸ್ಥಗಿತಗೊಂಡಿದೆ. ಅದನ್ನು ಪೂರ್ಣಗೊಳಿಸಿ ಆ ಪ್ರದೇಶದ ಜನರಿಗೆ ಇದರ ಪೂರ್ಣ ಪ್ರಯೋಜನ ಲಭಿಸಬೇಕು |
| 4 | ಕಿನ್ನಿಂಗಾರಿನಿಂದ ಕೋಟಿಮೂಲೆ | 1.290 | --- | ✓ | ಮೋರಿಗಳ ನಿರ್ಮಾಣ ಕಾರ್ಯವು ಆಗಿದ್ದು ರಸ್ತೆಯನ್ನು ಅಗಲಗೊಳಿಸಿದೆ. ಇದನ್ನು ಕರೋಡಿಯ ಮೂಲಕ ಮುಂದುವರಿಸಿ, ರೆಂಜೆಪುಡೆಯಲ್ಲಿ ತೋಡಿಗೆ ಅಣೆಕಟ್ಟು ಸಹಿತ ಸಂಕ ನಿರ್ಮಿಸಿ ಗೋಳಿಕಟ್ಟೆ ರಸ್ತೆಗೆ ಸೇರಿಸಿ ಡಾಮರು ಹಾಕಿಸಬೇಕು. ಆಗ ಮುಳ್ಳೇರ್ಯಾ ಆರ್ಲಪದವು ರಸ್ತೆಯ ಉದ್ದವು ಸಾಮಾನ್ಯ 6ಕಿ.ಮೀ. ಕಡಿಮೆ ಯಾಗುವುದು. |
| 5 | ಕನಕತ್ತೋಡಿನಿಂದ ಕಿನ್ನಿಂಗಾರಿಗೆ | 0.840 | --- | ✓ | ರಸ್ತೆಯನ್ನು ಅಗಲಗೊಳಿಸಿ ಡಾಮರು ಹಾಕಬೇಕು |
| 6 | ಕುಳೂರಿನಿಂದ ಕಿನ್ನಿಂಗಾರು | 1.080 | --- | ✓ | ಕುಳೂರಿನಿಂದ ಕಿನ್ನಿಂಗಾರಿಗೆ ಪ್ರಸ್ತುತ ಇರುವ ರಸ್ತೆಯು P. W. D. ರಸ್ತೆಯನ್ನು ಸೇರುವಲ್ಲಿ ಮೋರಿಗಳ ನಿರ್ಮಾಣವಾಗಬೇಕು |
| 7 | ಬೆಳ್ಳೆಚ್ಚಾಲಿನಿಂದ ಈಂದುಮೂಲೆ | 1.656 | --- | ✓ | |
| 8 | ಈಂದು ಮೂಲೆಯಿಂದ ತೋರಣ ಕುಕ್ಕು | 1.710 | --- | ✓ | ರಸ್ತೆಯನ್ನು ದುರಸ್ತಿಗೊಳಿಸಿ ಡಾಮರು ಹಾಕುವುದು ಅಗತ್ಯ ಈ ರಸ್ತೆಯನ್ನು ಮುಂಡಾಸಿನ ಮೂಲಕ ಮುಂದುವರಿಸಿ ತೋಡಿಗೆ ಅಣೆಕಟ್ಟು ಸಹಿತ ಸಂಕ ನಿರ್ಮಿಸಿ, ಕಿನ್ನಿಂಗಾರು ರೇಶನ್ ಅಂಗಡಿ ಹತ್ತಿರಕ್ಕೆ ಸೇರಿಸಿ ವಾಹನ ಸಂಚಾರಕ್ಕೆ ಯೋಗ್ಯವಾಗಿಸುವುದು. |

## ತಖ್ತೆ - 3

| 1 | 2 | 3 | 4 | 5 | 6 |
|---|---|---|---|---|---|
| 9 | ಮೂಲೆತ್ತಡ್ಕದಿಂದ ಕೈಪ್ಪಂಗಳ | 0.750 | --- | ✓ | ದುರಸ್ತಿಗೊಳಿಸಿ ಡಾಮರು ಆಗಬೇಕು |
| 10 | ಬಜದಿಂದ ಕಜೆ | 0.610 | --- | ✓ | ರಸ್ತೆ ಅಗಲಗೊಳಿಸಿ ಡಾಮರು ಹಾಕಬೇಕು |
| 11 | ಕೊಲ್ಯದಿಂದ ಸಂಕಣ್ಣ ಮೂಲೆ | 3-096 | --- | ✓ | ರಸ್ತೆಯನ್ನು ದುರಸ್ತಿಗೊಳಿಸಿ ಡಾಮರು |
| 12 | ಬಜದಿಂದ ಕುಳದ ಪಾರೆ | 1.064 | --- | ✓ | ನೆಟ್ಟಣಿಗೆಯಿಂದ ಬಜಕ್ಕೆ ಬರುವ ರಸ್ತೆಗೆ ಬಜದಲ್ಲಿ ಎರಡು ತೋಡುಗಳಿಗೆ ಸಂಕ ನಿರ್ಮಿಸಿ ಕುಳದ ಪಾರೆ ರಸ್ತೆಗೆ ಸೇರಿಸಬೇಕು. |
| 13 | ಕುಡುತ್ತಡ್ಕ ಬಜ | 1.070 | --- | ✓ | ಬಜದಲ್ಲಿ ಅಣೆಕಟ್ಟು ಸಹಿತ ಸಂಕವಾಗಿ ರಸ್ತೆಗೆ ಡಾಮರು ಆಗಬೇಕು. |
| 14 | ಕಾಯರ್ಪದವಿನಿಂದ ಕಕ್ಕೆ ಬೆಟ್ಟು | 1.616 | --- | ✓ | ರಸ್ತೆಯನ್ನು ಅಗಲಗೊಳಿಸಿ ಡಾಮರು ಹಾಕಬೇಕು |
| 16 | ಮಂಜತ್ತೂರು ಪಿಲಿಪ್ಪುಡೆ | 3.744 | --- | ✓ | ಪಿಲಿಪ್ಪುಡೆಯಲ್ಲಿ ಈಗ ಇರುವ ಸಂಕದ ಅಡಿಪಾಯಕ್ಕೆ ಹಾನಿ ಉಂಟಾಗಿದೆ. ಈಗಲೇ ದುರಸ್ತಿಗೊಳಿಸಿದರೆ ಸುಲಭದಲ್ಲಿ ಆಗಬಹುದು. ರಸ್ತೆಗೆ ಡಾಮರು ಆಗಬೇಕು. |
| 17 | ಸಬ್ಬುಕಜೆಯಿಂದ ಕುಳದಪಾರೆ | 2.070 | --- | ✓ | ರಸ್ತೆಯನ್ನು ಪೂರ್ತಿಗೊಳಿಸಿ ನಾಕೂರಿನಲ್ಲಿ ಅಣೆಕಟ್ಟು ಸಹಿತ ಸಂಕದ ನಿರ್ಮಾಣವಾಗಿ, ಡಾಮರು ಹಾಕಿಸಬೇಕು. |
| 18 | ಕಟ್ಟೆಯಿಂದ ಎಡಮೊಗರು | 1.000 | --- | ✓ | ಮೋರಿಗಳ ನಿರ್ಮಾಣದೊಂದಿಗೆ ರಸ್ತೆಗಳನ್ನು ಅಗಲಗೊಳಿಸುವುದು. ಡಾಮರು ಹಾಕಬೇಕು. |
| 19 | ಬೈರ್ತಿಯಡ್ಕದಿಂದ ಬಜ | 1.065 | --- | ✓ | ರಸ್ತೆಯನ್ನು ಅಗಲಗೊಳಿಸಿ ಮೋರಿಗಳ ನಿರ್ಮಾಣವಾಗಬೇಕು. ಡಾಮರು ಹಾಕಬೇಕು. |
| 20 | ಐತ್ತನಡ್ಕದಿಂದ ಮಣ್ಣಾಪು | 0.730 | --- | ✓ | ರಸ್ತೆಯನ್ನು ಅಗಲಗೊಳಿಸಿ, ಮೋರಿಗಳ ನಿರ್ಮಾಣವಾಗಬೇಕು. |
| 21 | ಗುತ್ಯಡ್ಕದಿಂದ ಮಿತ್ತೂರು | 0.504 | --- | ✓ | ರಸ್ತೆಯನ್ನು ಅಗಲಗೊಳಿಸಿ ಮೋರಿಗಳ ನಿರ್ಮಾಣವಾಗಬೇಕು. ಡಾಮರು ಹಾಕಿಸಬೇಕು. |
| 22 | ಮಿಂಚಿಪದವಿನಿಂದ ಐತ್ತನಡ್ಕ ದಾರಿಯಾಗಿ ಕುಳೂರು | 4.040 | --- | ✓ | ಡಾಮರು ಆಗಬೇಕು. ಅಗಲಗೊಳಿಸಬೇಕು |

## ತಖ್ತೆ - 2

| 1 | 2 | 3 | 4 | 5 | 6 |
|---|---|---|---|---|---|
| 23 | ಸುರಂಗದ ಮೂಲೆಯಿಂದ ತೋಟದ ಮೂಲೆ | 0.270 | --- | ✓ | ರಸ್ತೆಯನ್ನು ಅಗಲಗೊಳಿಸಿ ಡಾಮರು ಆಗಬೇಕು ಮೋರಿಗಳ ನಿರ್ಮಾಣವಾಗಬೇಕು. |
| 24 | ನಾಟೆಕಲ್ಲಿನಿಂದ ಮಿಂಚಿಪದವು | 2-340 | --- | ✓ | ರಸ್ತೆಯನ್ನು ದುರಸ್ತಿಗೊಳಿಸಿ ಡಾಮರು ಹಾಕಿಸಬೇಕು. |
| 25 | ಗೋಳಿಕಟ್ಟೆಯಿಂದ ಕ್ಯಾಮಲೆಗೆ | 2.400 | --- | ✓ | ಗೋಳಿಕಟ್ಟೆಯಿಂದ ಅಡ್ವಳ ದೇವಸ್ಥಾನ ಬಳಿಯಾಗಿ ಮುಂದುವರಿದು ಮಿತ್ತಜಾಲು ದಾರಿಯಾಗಿ ಕಾಯಿಮಲೆಯನ್ನು ಸೇರುವ ರಸ್ತೆಯನ್ನು ದುರಸ್ತಿಗೊಳಿಸಿ, ಮೋರಿಗಳನ್ನು ನಿರ್ಮಿಸಿ ಡಾಮರು ಹಾಕಿಸಬೇಕು. |
| 26 | ಮಾಲೆಂಕಿ ತೋಟದ ಮೂಲೆ | 1.110 | --- | ✓ | ಪೊಸವಳಿಕೆ ಎಂಬಲ್ಲಿ ರಸ್ತೆ ಅಗಲಗೊಳಿಸಬೇಕು. ಮೋರಿಗಳ ನಿರ್ಮಾಣಬೇಕು. ಡಾಮರು ಹಾಕಿಸಿ ಚರಂಡಿಗಳನ್ನು ವ್ಯವಸ್ಥೆಗೊಳಿಸಬೇಕು. |
| 27 | ಮಣ್ಣಾಪಿನಿಂದ ಕಕ್ಕೆಬೆಟ್ಟು | 0.350 | --- | ✓ | ರಸ್ತೆಯನ್ನು ಅಗಲಗೊಳಿಸಿ, ಮೋರಿಗಳನ್ನು ನಿರ್ಮಿಸಿ ಡಾಮರು ಹಾಕಿಸಬೇಕು. |
| 28 | ಶಾಂತಿಗುರಿಯಿಂದ ಕಕ್ಕೆಬೆಟ್ಟು | 0.190 | --- | ✓ | ಮೋರಿಗಳನ್ನು ನಿರ್ಮಿಸಬೇಕು ರಸ್ತೆಯನ್ನು ಅಗಲಗೊಳಿಸಿ ಡಾಮರು ಹಾಕಿಸಬೇಕು. |
| 29 | ದಾಸರ ಮೂಲೆಯಿಂದ ನೆಕ್ಲಿಕಾರು | 0.420 | --- | ✓ | ರಸ್ತೆಯನ್ನು ಅಗಲಗೊಳಿಸಿ ಮೋರಿಗಳನ್ನು ನಿರ್ಮಿಸಬೇಕು. ಡಾಮರು ಹಾಕಿಸಬೇಕು. |
| 30 | ಕನಕತ್ತೋಡಿಯಿಂದ ನೆಕ್ಲಿಕಾರು | 0.360 | --- | ✓ | ಈಗ ನಿರ್ಮಿತವಾಗಿರುವ ರಸ್ತೆಯನ್ನು ಅಗಲಗೊಳಿಸಿ ಮೋರಿಗಳನ್ನು ನಿರ್ಮಿಸಬೇಕು. ವಾಹನ ಸಂಚಾರಕ್ಕೆ ಯೋಗ್ಯವಾಗಿಸಿ, ಕೆಟ್ಟು ಹೋಗದಂತೆ ಡಾಮರು ಹಾಕಿಸಬೇಕು. |
| 31 | ಅನೆಕ್ಕಳದಿಂದ ಕೊಯಂಗೋಡು | 0.684 | --- | ✓ | ರಸ್ತೆಯನ್ನು ಅಗಲಗೊಳಿಸಿ ಮೋರಿಗಳನ್ನು ನಿರ್ಮಿಸಬೇಕು. ಡಾಮರು ಹಾಕಿಸಬೇಕು |
| 32 | ನಾಟೆಕಲ್ಲಿನಿಂದ ಅನೆಕ್ಕಳ | 0.360 | --- | ✓ | ರಸ್ತೆಯನ್ನು ಅಗಲಗೊಳಿಸಿ ಚರಂಡಿಗಳನ್ನು ನಿರ್ಮಿಸಬೇಕು. |
| 33 | ನೇಜಕ್ಕಾರಿನಿಂದ ಮಹಾ ವಿಷ್ಣು ದೇವಸ್ಥಾನ | 0.076 | --- | ✓ | ಈ ರಸ್ತೆಯನ್ನು ಎತ್ತರಿಸಿ ಡಾಮರು ಹಾಕಿಸಬೇಕು. |
| 34 | ಕರ್ಕಟಗೋಳಿಯಿಂದ ಕಾಯಿಮಲೆ | 0.860 | --- | ✓ | ಕರ್ಕಟಗೋಳಿ ಕಾಯಿಮಲೆ ರಸ್ತೆಗೆ ಡಾಮರು ಆಗಿದ್ದರೂ ಈಗ ಕೆಟ್ಟು ಹೋಗಿದೆ. ರಸ್ತೆಯನ್ನು ಅಗಲಗೊಳಿಸಿ ಇನ್ನೊಮ್ಮೆ ಡಾಮರ್ ಹಾಕಿಸಬೇಕು. |

| ತಖ್ತೆ - 3 | | | | | |
|---|---|---|---|---|---|
| ಕ್ರಮ ಸಂಖ್ಯೆ | ರಸ್ತೆಯ ಹೆಸರು | ರಸ್ತೆಯ ಉದ್ದ ಕಿ. ಮೀಗಳಲ್ಲಿ | ಸಂಕಗಳ ಸಂಖ್ಯೆ | ಮೋರಿಗಳ ಸಂಖ್ಯೆ | ಇತರ ವಿವರಗಳು ಮತ್ತು ಸಲಹೆಗಳು |
| 1 | ಬೆಳ್ಳೂರು ಭೂತಾನ ಪರಿಶಿಷ್ಟ ಜಾತಿ ಕೊಲನಿಗೆ | 2-000 | --- | 5 | ಪರಿಶಿಷ್ಟ ಜಾತಿಯವರಿಗೆ ಅನುಕೂಲವಾಗುವುದರೊಂದಿಗೆ ಉಳಿದ ಕೃಷಿಕರಿಗೂ, ಅನ್ಯರಿಗೂ ಸೌಕರ್ಯವಾಗುವುದು. |
| 2 | ಮುಕುಡಂಗೋಳಿ ಅಡ್ವಳ | 1-000 | --- | 1 | ಅಡ್ವಳ, ಭೂತಾನ ಹಾಗೂ ಮುಕುಡಂಗೋಳಿ ವಾಸಿಗರಿಗೆ ಸೌಕರ್ಯ. |
| 3 | ಅಡ್ವಳದಿಂದ ಕರೋಡಿಗೆ | 1-000 | --- | 3 | ಅಡ್ವಳ ತೋಡಿಗೆ ರೆಂಜೆಪುಡೆಯಲ್ಲಿ ಅಣೆಕಟ್ಟು ಸಹಿತ ಸಂಕ ನಿರ್ಮಿಸಿ ಸಂಪರ್ಕ ಕಲ್ಪಿಸಿದರೆ ಸಾರ್ವಜನಿಕರಿಗೂ, ಕೃಷಿಕರಿಗೂ ಅನುಕೂಲ. |
| 4 | ಕರೋಡಿಯಿಂದ ಮಾವಿನ ಹಿತ್ತಿಲು | 1-000 | --- | 3 | --- |
| 5 | ಪರ್ವತ್ತೋಡಿ ಬಾಳೆಗದ್ದೆ | 1-500 | --- | 4 | --- |
| 6 | ಕಜೆಮುಂಡ ಅಡ್ವಳ | 1-000 | --- | 3 | ಗೇರು ತೋಟದ ಮೂಲಕ ಹಾದು ಹೋಗಲು ಇರುವ ಅಡಚಣೆಯನ್ನು ನಿವಾರಿಸಬೇಕು. |
| 7 | ಗೋಳಿ ಕಟ್ಟೆ ಕಲ್ಪಣೆಗೆ ಪರಿಶಿಷ್ಟ ವರ್ಗದ ಕೊಲನಿಯ ಮೂಲಕ | 1-500 | --- | 4 | --- |
| 8 | ಮಿತ್ತಜಾಲು ನೆಲ್ಲಿತ್ತಡ್ಕ | 1-000 | --- | 4 | --- |
| 9 | ನಾಟೆಕಲ್ಲು ಅನೆಕ್ಕಳ | 0-500 | --- | 4 | --- |
| 10 | ಕಟ್ಟೆಯಿಂದ ನೆಟ್ಟಣಿಗೆ ದೇವಸ್ಥಾನಕ್ಕೆ | 1-000 | --- | 3 | --- |
| 11 | ಜವುನಿಗುಡ್ಡೆ ಹೊಸಗದ್ದೆ ಬೆಳೆರಿ ತನಕ | 1-500 | --- | 4 | ಈಗ ಅರ್ಧವಾಗಿರುವ ರಸ್ತೆಯನ್ನು ಪೂರ್ತಿಗೊಳಿಸಿ ಸೌಕರ್ಯ ಮಾಡುವುದು. |
| 12 | ಪಳ್ಳಪ್ಪಾಡಿಯಿಂದ ಗುರಿಯಡ್ಕ ಪರಿಶಿಷ್ಟ ಜಾತಿ ಕೊಲನಿಗೆ | 1-000 | --- | 3 | --- |
| 13 | ಕಕ್ಕೆ ಬೆಟ್ಟು ಐತ್ತನಡ್ಕ | 2-000 | 1 | 5 | ವಿದ್ಯಾರ್ಥಿಗಳಿಗೂ ಬಹಳ ಅನುಕೂಲ. |
| 14 | ಗುತ್ಯಡ್ಕ ಮಿಂಚಿಪದವು | 2-000 | --- | 5 | --- |
| 15 | ಶಾಂತಿಗುರಿ ಪರಿಶಿಷ್ಟ ಜಾತಿ ಕೊಲನಿಯಿಂದ ಕಕ್ಕೆಬೆಟ್ಟು | 2-000 | --- | 6 | --- |

## ತಖ್ತೆ - 3

| 1 | 2 | 3 | 4 | 5 | 6 |
|---|---|---|---|---|---|
| 16 | ಪಳ್ಳಪ್ಪಾಡಿಯಿಂದ ಪಂಬೆಜಾಲಿಗೆ | 1-000 | --- | 4 | ಪಂಬೆಜಾಲಿನ ಗದ್ದೆ ಕೃಷಿಕರಿಗೂ ಇದು ಅನುಕೂಲ. |
| 17 | ಅಲೈಕ್ಕಿಯಿಂದ ಬೈಕೋಡಿಗೆ ಕಲ್ಕದ ದಾರಿಯಾಗಿ | 1-000 | --- | 4 | ಕಲ್ಲೇರಿ ಮೂಲೆ ಗುಡ್ಡದ ತಪ್ಪಲಿನಲ್ಲಿ ವಾಸಿಸುವವರಿಗೆ ಇದು ಅತಿ ಅನುಕೂಲ. |
| 18 | ಪಳ್ಳಪ್ಪಾಡಿಯಿಂದ ಬಸ್ತಿಗುಡ್ಡೆ ಮುಕ್ಕುಂಜ ದಾರಿ | 2-000 | 2 | 5 | ಜಾಲು, ಮುಕ್ಕುಂಜ, ಕಡೆಂಗದ ಹಾಗೂ ಬಸ್ತಿಗುಡ್ಡೆಯ ನಿವಾಸಿಗಳಿಗೆ ಸೌಕರ್ಯ. |
| 19 | ಆಜಡ್ಕ ಕಾಯರ್ಪದವು | 1-500 | --- | 5 | ಕಾಯರ್ಪದವಿನಿಂದ ಆಜಡ್ಕಕ್ಕೆ ಮುಂದುವರಿಸಿ ಐತ್ತನಡ್ಕ ರಸ್ತೆಯೊಂದಿಗೆ ಸೇರಿಸಬೇಕು. |
| 20 | ಎಡೆಯೋಣೆ ಬೊಳ್ಳಂದೂರು | 2-000 | 2 | 5 | --- |
| 21 | ಅಮೆರಡ್ಕ ಕಲ್ಲೇರಿಮೂಲೆ | 2-000 | --- | 2 | --- |
| 22 | ಮುಂಡಾಸು ರೆಂಜೆಮೂಲೆ ಕೊಲ್ಲಡ್ಕ | 2-000 | --- | 2 | --- |
| 23 | ಕೊಲ್ಲಡ್ಕ ಸಂಕಣ್ಣ ಮೂಲೆ | 1-000 | --- | 2 | --- |
| 24 | ಪಟ್ರಮೂಲೆ ಸಂಕಣ್ಣ ಮೂಲೆ | 2-000 | --- | 4 | --- |
| 25 | ಕಾಯರ್ಪದವು ದೇವರ ಗುಂಡಿ | 1-500 | --- | 5 | --- |
| 26 | ತುರ್ಕರಮೂಲೆ ಬಜ | 2-000 | --- | 4 | --- |
| 27 | ಪಾದೆಗದ್ದೆ ಬೀರಮೂಲೆ ಪಿಲಿಪ್ಪುಡೆ | 3-000 | --- | 5 | --- |

ಮೇಲೆ ತಖ್ತೆಯಲ್ಲಿ ಸೂಚಿಸಿದ ಎಲ್ಲ ಕಡೆಗಳಲ್ಲಿಯೂ ಪಂಚಾಯತು ರಸ್ತೆಗಳನ್ನು ನಿರ್ಮಿಸಿ, ಡಾಮರು ಹಾಕಿಸಿ ಕಾಲಕಾಲಕ್ಕೆ ದುರಸ್ತಿ ಕಾರ್ಯಗಳನ್ನು ಮಾಡಿಕೊಂಡು ವಾಹನ ಓಡಾಟಕ್ಕೆ ಅನುಕೂಲವಾಗಿರಿಸಿದರೆ ಗ್ರಾಮಾಭಿವೃದ್ಧಿಯ ಕಾರ್ಯಗಳು ಸುಲಭವಾಗುವುದು.

ಗ್ರಾಮದ ಮೂಲೆ ಮೂಲೆಯಿಂದ ವಾಹನಗಳನ್ನು ಹಿಡಿಯಲು ನಡೆದು ಬರುವರೇ ಕಾಲುದಾರಿಯು ಅತಿ ಅಗತ್ಯ. ಈ ನಿಟ್ಟಿನಿಂದ ಈಗಾಗಲೇ ಇರುವ ಪಂಚಾಯತು ಕಾಲುದಾರಿಗಳನ್ನು ದುರಸ್ತಿಗೊಳಿಸಿ ಅಗತ್ಯವಿರುವಲ್ಲಿ ಶಾಶ್ವತ ಕಾಲು ಸಂಕಗಳನ್ನು ನಿರ್ಮಿಸಬೇಕು. ಅಲ್ಲದೆ ಹೊಸದಾಗಿ ಕಾಲು ಸಂಕಗಳನ್ನು ನಿರ್ಮಿಸಿಬೇಕು. ಅಗತ್ಯವಿರುವ ಹಣವನ್ನು ಕಾದಿರಿಸಬೇಕು.

## ಈಗ ಊರ್ಜಿತವಿರುವ ಪಂಚಾಯತು ಕಾಲುದಾರಿಗಳು

| ಕ್ರಮ ಸಂಖ್ಯೆ | ದಾರಿಯ ಹೆಸರು | ಉದ್ದ ಕಿ.ಮೀ ಗಳಲ್ಲಿ | ಅಡ್ಡ ತೋಡುಗಳಿವೆಯೇ ? | ಸಂಕ ಇವೆಯೇ ? | ಸಂಕಗಳ ಅಗತ್ಯವಿದೆಯೇ ? ಎಷ್ಟು? ಎಲ್ಲಿ? |
|---|---|---|---|---|---|
| 1 | ಮಿಂಚಿಪದವು-ಕಕ್ಕೆಬೆಟ್ಟು | 0-800 | ✓ | ಮರದ ಸಂಕ ಇದೆ. | ಕಕ್ಕೆಬೆಟ್ಟಿನಲ್ಲಿ ಶಾಶ್ವತ ಸಂಕ ಬೇಕು. |
| 2 | ಸಬ್ಬುಕಜೆ-ಕುಳದಪಾರೆ | 1-500 | ✓ | ಮರದ ಸಂಕ ಇದೆ. ನಾಕೂರಿನಲ್ಲಿ. | --- |
| 3 | ಪಳ್ಳದ-ಮೂಲೆ ಕಿನ್ನಿಂಗಾರು ವಿಲೇಜ್ ಆಫೀಸ್ ತನಕ | 0-450 | ✓ | ಇಲ್ಲ | 3 ಸಂಕಗಳು ಬೇಕ್ಕು |
| 4 | ಸಬ್ಬುಕಜೆ-ಕಣ್ಣಡ್ಕ | 3-000 | --- | --- | --- |

## ಶಾಶ್ವತ ಕಾಲುದಾರಿ ಮತ್ತು ಶಾಶ್ವತ ಕಾಲು ಸಂಕ ಬೇಕಾದ ಸ್ಥಳ ಮತ್ತು ವಿವರ

1. ದಾಸರ-ಮೂಲೆ ಕುಳೂರು ದಾರಿಗೆ ಕುಳೂರು ಬಳಿ ಶಾಶ್ವತವಾಗಿ ಮೆಟ್ಟಲುಗಳ ನಿರ್ಮಾಣ.
2. ನೆಟ್ಟಣಿಗೆ ಶಾಲೆಯಿಂದ ಕಿನ್ನಿಂಗಾರಿಗೆ ಇರುವ ದಾರಿಯ ದುರಸ್ತಿ ಹಾಗೂ ಕಾಲು ಸಂಕಗಳ ನಿರ್ಮಾಣ.
3. ಪಳ್ಳಪ್ಪಾಡಿ-ಎಡಮೊಗರು ಕಾಲುದಾರಿ, ಕಾಲು ಸಂಕಗಳ ನಿರ್ಮಾಣ.
4. ಮುದ್ರೆಕೊಚ್ಚಿಯಿಂದ ನೂಂಜ ದಾರಿಯಾಗಿ ಪಳ್ಳಪ್ಪಾಡಿಗಿರುವ ಕಾಲುದಾರಿ ದುರಸ್ತಿ ಮತ್ತು ಕಾಲು ಸಂಕ ನಿರ್ಮಾಣ.

ಅಲ್ಲದೆ ಕೆಳಗೆ ಕಾಣಿಸಿದ ಸ್ಥಳಗಳಲ್ಲಿ ಶಾಶ್ವತ ಕಾಲು ಸಂಕಗಳನ್ನು ನಿರ್ಮಿಸಿ ಸೌಕರ್ಯ ಮಾಡಿಕೊಡಬೇಕು. ಕಾಲು ದಾರಿಯ ನಿರ್ಮಾಣವೂ ಆಗಬೇಕು.

| | ಕಾಲುದಾರಿ | | | ಕಾಲು ಸಂಕ |
|---|---|---|---|---|
| 1 | ಕನಕತ್ತೋಡಿ | - | ನಾಟೆಕಲ್ಲು | ಅಡ್ಕಳ ದೇವಸ್ಥಾನದ ಬಳಿ |
| 2 | ಕುಳದ ಪಾರೆ | - | ಬಜ | ಬಜ |
| 3 | ಅಡ್ಕಳ | - | ಮುಕುಡಂಗೋಳಿ | ಅಡ್ಕಳ, ಬಾಳೆಗದ್ದೆ |
| 4 | ಅಡ್ಕಳ | - | ನಾಟೆಕಲ್ಲು | ಭೂತಾನ |
| 5 | ಮುಕುಡಂಗೋಳಿ | - | ನಾಟೆಕಲ್ಲು | ಕೊಯಂಗೋಡು |
| 6 | ಐತ್ತನಡ್ಕ | - | ಕಕ್ಕೆಬೆಟ್ಟು | ಬನದ ಗದ್ದೆ |
| 7 | ಐತ್ತನಡ್ಕ | - | ಬಸ್ತಿಗದ್ದೆ | ಕಡೆಂಗ |
| 8 | ನಿಡಿಯಡ್ಕ | - | ನಾಕೂರು | ನಾಕೂರು |
| 9 | ಬೆಳ್ಳೂರು | - | ಪುಳಿತ್ತಡಿ | ಪುಳಿತ್ತಡಿ |
| 10 | | | | ಮುಂಡಾಸು |
| 11 | | | | ರೆಂಜಮೂಲೆ |

| | |
|---|---|
| 12 | ಕೊಲ್ಲಡ್ಕ |
| 13 | ಕೆಳಗಿನ ನಾಕೂರು |
| 14 | ನಾಕೂರು |
| 15 | ನಿಡಿಯಡ್ಕ |
| 16 | ನೆಟ್ಟಣಿಗೆ ಶಾಲಾ ಬಳಿ |
| 17 | ದೇವರ ಗುತ್ತು |
| 18 | ಚೆರುಮೂಲೆ |
| 19 | ಸಸಿ ಹಿತ್ತಿಲು |
| 20 | ಪಡ್ಶೈಮೂಲೆ |
| 21 | ಎಡಮೊಗರು |
| 22 | ಮಣ್ಣಾಪು |
| 23 | ಕಕ್ಕೆಬೆಟ್ಟು I |
| 24 | ಕಕ್ಕೆಬೆಟ್ಟು II |
| 25 | ಕಡಮ ಗದ್ದೆ I |
| 26 | ಕಡಮ ಗದ್ದೆ II |
| 27 | ಆಜಡ್ಕ ಹೊಸಮನೆ |
| 28 | ಕುಡ್ವ |
| 29 | ಕೆಳಗಿನ ಕಲ್ಕ |
| 30 | ಜಾಲು |
| 31 | ಕೊಡ್ವಲೆ |
| 32 | ಅಡ್ವಳ |
| 33 | ಪಂಬೆಜಾಲು |
| 34 | ನೇಜಿಕ್ಕಾರು |
| 35 | ತೋಟದ ಮೂಲೆ |
| 36 | ಅಲಾಬಿ |
| 37 | ಕಾಯಿಮಲೆ |
| 38 | ಪೆರ್ವತ್ತೋಡಿ |
| 39 | ಕನಕತ್ತೋಡಿ |

ಸಾರಿಗೆ ಹಾಗೂ ಸಂಪರ್ಕದ ದೃಷ್ಟಿಯಿಂದ ಕೆಲವು ಕಾರ್ಯಕ್ರಗಳನ್ನು ಹಮ್ಮಿಕೊಳ್ಳುವುದು ಅತಿ ಅಗತ್ಯ

**I P. W. D. ರಸ್ತೆಗೆ ಸಂಬಂಧಿಸಿ ಕೆಲವು ಸಲಹೆಗಳು**

1. ರಸ್ತೆಗಳ ಬದಿಗಳಲ್ಲಿ ಚರಂಡಿಗಳ ನಿರ್ಮಾಣ.
2. ಶಾಲಾ ಪರಿಸರದಲ್ಲಿ ವೇಗ ನಿಯಂತ್ರಣಕ್ಕೆ ಉಬ್ಬು ರಸ್ತೆ ನಿರ್ಮಾಣ.
3. ವಾಹನ ಚಾಲಕರಿಗೆ ಸೂಚನಾ ಫಲಕಗಳನ್ನು ನೆಡುವುದು
4. ದಾರಿ ದೀಪ ವ್ಯವಸ್ಥೆ.
5. ನೇಜಿಕ್ಕಾರಿನಲ್ಲಿ ಪ್ರಕೃತ ಇರುವ ಸೇತುವೆಯ ಪುನರ್ನವೀಕರಣ, ಕಾನಕ್ಕೋಡು ತಿರುವು, ನೇಜಿಕ್ಕಾರು ತಿರುವುಗಳನ್ನು ಹೋಗಲಾಡಿಸಿ ರಸ್ತೆಯನ್ನು ನೇರಗೊಳಿಸಿ ಪ್ರಯಾಣಿಕರಿಗೆ ಧೈರ್ಯ ಬರುವಂತೆ ಮಾಡಬೇಕು.
6. ಡಾಮರು ಆಗಲು ಬಾಕಿ ಇರುವ ಎಲ್ಲ ರಸ್ತೆಗಳಿಗೂ ಡಾಮರು ಹಾಕಿಸಬೇಕು
7. ಸರ್ವಕಾಲೀನ ರಸ್ತೆಗಳಾಗಿ ಅಭಿವೃದ್ಧಿಗೊಳಿಸುವುದು.

| ಬಸ್ಸು ತಂಗುದಾಣ ಬೇಕಾದ ಸ್ಥಳಗಳು | | |
|---|---|---|
| 1 ನಾಟೆಕಲ್ಲು ಶಾಲೆಯ ಬಳಿ | 9 ಎಯಿಪಂಜಿಗುಳಿ | 17 ಎಡೆಮೊಗರು |
| 2 ಕೊಯಂಗೋಡು ಜಂಕ್ಷನ್ | 10 ಶಾಂತಿಗುರಿ | 18 ಕಲ್ಲಗ |
| 3 ಗೋಳಿಕಟ್ಟೆ ಜಂಕ್ಷನ್ | 11 ಐತ್ತನಡ್ಕ | 19 ಕಿನ್ನಿಂಗಾರು ರೇಶನು ಅಂಗಡಿ ಬಳಿ |
| 4 ಕರ್ಕಟಗೋಳಿ | 12 ನೆಟ್ಟಣಿಗೆ ಜಂಕ್ಷನ್ | 20 ಕುಳೂರು ಮಾರ್ಗ ಜಂಕ್ಷನ್ |
| 5 ಕಾಯಿಮಲೆ | 13 ಕಟ್ಟೆ | 21 ಕೋಟಿಮೂಲೆ ಮಾರ್ಗ ಜಂಕ್ಷನ್ |
| 6 ಓಲಸರಿ | 14 ಜವುನಿ ಗುಡ್ಡೆ | 22 ಗೋಳಿಯಡಿ |
| 7 ಪೊಸವಳಿಗೆ | 15 ಬೀಜದ ಕಟ್ಟೆ | 23 ಪಳ್ಳಪ್ಪಾಡಿ ಜಂಕ್ಷನ್ |
| 8 ಬಸ್ತಿ | 16 ಬೆಳೆರಿ | 24 ಬೆಳ್ಳೆಚ್ಚಾಲು |
| | | 25 ಪಂಚಾಯತು ಆಫೀಸು ಬಳಿ |

ನಾಟೆಕಲ್ಲು ಹಾಗೂ ಕಿನ್ನಿಂಗಾರು ಮುಂದೆ ನಗರಗಳಾಗಿ ಬೆಳೆಯಲಿರುವುದರಿಂದ, ಇಲ್ಲಿಗೆ ಮುಳ್ಳೇರ್ಯ, ಬದಿಯಡ್ಕ, ಅರ್ಲಪದವು, ಸುಳ್ಯ, ಸುಳ್ಯಪದವು ಮೊದಲಾದೆಡೆಗಳಿಂದ ವಾಹನಗಳು ಬರುವುದು. ಅದ್ದರಿಂದ ನಾಟೆಕಲ್ಲು ಹಾಗೂ ಕಿನ್ನಿಂಗಾರಿನಲ್ಲಿ ಬಸ್ ನಿಲ್ದಾಣಗಳು ಅಗತ್ಯ.

ರಾಜ್ಯ ಹಾಗೂ ಅಂತಾರಾಜ್ಯ ಮಟ್ಟದಲ್ಲಿ ಬಸ್‌ಗಳ ಓಡಾಟ ಅಗತ್ಯ. ಈ ದೃಷ್ಠಿಯಿಂದ ಪುತ್ತೂರು-ಕಾಸರಗೋಡು ಸಾರಿಗೆ ವ್ಯವಸ್ಥೆ ಆಗಬೇಕು. ಮುಂದೆ ಮಧೂರಿನ ತನಕವೂ ಮುಂದುವರಿಯಬೇಕು.

ಗ್ರಾಮಾಭಿವೃದ್ದಿಗಾಗಿ ರಸ್ತೆಗಳ ನಿರ್ಮಾಣ ಆಗಬೇಕು. ರಸ್ತೆಗಳನ್ನು ಅಗಲಗೊಳಿಸಲು ಅತಿ ಅಗತ್ಯ ಹಾಗೂ ಅನಿವಾರ್ಯ ಎನಿಸಿದಲ್ಲಿ ಖಾಸಗಿ ಆಸ್ತಿಯನ್ನು ಸರಿಯಾದ ಪರಿಹಾರ ಇಲ್ಲವೇ ಸರಕಾರೀ ಭೂವಿಯ ಬದಲಾವಣೆ ಮಾಡಿ ಸ್ವಾಧೀನಪಡಿಸಿಕೊಳ್ಳುವ ಅಧಿಕಾರ ಪಂಚಾಯತಿಗಿರಬೇಕು.

ಪಂಚಾಯತು ಪ್ರದೇಶದ ಎಲ್ಲಾ ಸಾರ್ವಜನಿಕ ಕಾಲು ದಾರಿಗಳನ್ನು ಮತ್ತು ರೆವೆನ್ಯೂ ರಿಕಾರ್ಡಿನಲ್ಲಿರುವ ಕಾಲು ದಾರಿಗಳನ್ನು ನಕ್ಷೆ ಸಮೇತ ಪಂಚಾಯತಿಗೆ ದೊರೆಕುವಂತೆ ಮಾಡಿ ಅದರ ಸಂಪೂರ್ಣ ರಕ್ಷಣೆಯ ಜವಬ್ದಾರಿಯನ್ನು ಪಂಚಾಯತಿಗೆ ನೀಡಬೇಕು.

ದೂರ ಸಂಪರ್ಕವನ್ನು ಸುಗಮಗೊಳಿಸಲು Telephone ವ್ಯವಸ್ಥೆಯನ್ನು ಇನ್ನಷ್ಟು ವಿಪುಲಗೊಳಿಸಬೇಕು. ಕಿನ್ನಿಂಗಾರಿನಲ್ಲಿ Telephone exchange ಸ್ಥಾಪಿಸಿಬೇಕು. ಪನೆಯಾಲ ಹಾಗೂ ಕುಳದಪಾರೆಗಳಲ್ಲಿ ಬ್ರಾಂಚ್ ಪೋಸ್ಟ್ ಆಫೀಸನ್ನು ತೆರೆಯಬೇಕು. ಕಿನ್ನಿಂಗಾರು, ನೆಟ್ಟಣಿಗೆ ಪೋಸ್ಟ್ ಆಫೀಸ್‌ಗಳಿಗಳಿಗೂ Telephone ಸಂಪರ್ಕ ಆಗಬೇಕು.

ಇಂತು ಮುಂದುವರಿದರೆ "ಹವಳದುಂಗುರಕ್ಕೆ ಪರಿಮಳ" ಬಂದೀತು

***

# 12
# ಇಂಧನ

ಒಂದು ದೇಶದ ಆರ್ಥಿಕ ಅಭಿವೃದ್ಧಿಯು ಆ ದೇಶದಲ್ಲಿನ ಇಂಧನ ಲಭ್ಯತೆಯನ್ನು ಅವಲಂಬಿಸಿದೆ. ಇಂಧನದ ತಳಹದಿಯ ಮೇಲೆ ಯಾವುದೇ ರಾಷ್ಟ್ರವು ಬಲಿಷ್ಠವಾಗಲು ಸಾಧ್ಯ. ಗೃಹೋಪಯೋಗೀ ಅಗತ್ಯಕ್ಕೆ, ವಾಣಿಜ್ಯ ಅಭಿವೃದ್ಧಿಗೆ, ಆಧುನಿಕ ತಂತ್ರದ ಕೃಷಿಗೆ, ಕೈಗಾರಿಕಾ ಪುರೋಗತಿಗೆ ಇಂಧನವು ಬಹು ಅವಶ್ಯ. ಬೆಳ್ಳೂರು ಗ್ರಾಮದಲ್ಲಿರುವ ಇಂಧನ ಮೂಲ, ವಿದ್ಯುತ್ ಮೂಲಗಳ ಲಭ್ಯತೆ, ಇಂಧನ ಮೂಲದಲ್ಲುಂಟಾಗಿರುವ ಬದಲಾವಣೆ, ಪರಂಪರಾಗತ ಇಂಧನ ಮೂಲಗಳ ಉಪಯೋಗ, ಇಂಧನ ಸಂರಕ್ಷಣೆ, ಇಂಧನ ವಲಯದ ಪ್ರಧಾನ ಸಮಸ್ಯೆ. ಇವುಗಳನ್ನು ವಿವರಣಾತ್ಮಕ ಹಾಗೂ ಗುಣಾತ್ಮಕವಾಗಿ ವಿಮರ್ಶಿಸಿ ಇಂಧನ ವಲಯದಲ್ಲಿ ಪರಿಹಾರ ಮಾರ್ಗಗಳನ್ನು ಕಂಡುಹಿಡಿಯುವ ಒಂದು ಯೋಜನೆಯನ್ನು ಜ್ಯಾರಿಗೊಳಿಸಿ ಈ ಜನಯೋಜನಾ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿದೆ.

ಕೆಲವೇ ವರ್ಷಗಳ ಹಿಂದಿನವರೆಗೆ ಕಟ್ಟಿಗೆ, ಬೆರಣಿ ಮೊದಲಾದವುಗಳು ಈ ಪ್ರದೇಶದ ಪ್ರಧಾನ ಇಂಧನ ವಸ್ತುವಾಗಿದ್ದವು. ಗೃಹೋಪಯೋಗಕ್ಕಾಗಿ ಮಾತ್ರ ಇಂಧನವನ್ನು ಬಳಸುತ್ತಿದ್ದರು. ಕೃಷಿಯೇ ಪ್ರಧಾನ ಜೀವನ ಮಾರ್ಗವಾಗಿದ್ದರೂ ನೀರಿಗೆ ಏತ, ತೋಡಿಗೆ ಕಟ್ಟೆ ಹಾಕಿ ದೊರೆತ ನೀರಾವರಿಯಿಂದ ಕೃಷಿ ಮಾಡುತ್ತಿದ್ದರು. ಕೃಷಿ ಆಧುನೀಕರಣವಾದಂತೆ, ನೀರಿನ ಮಟ್ಟ ಕೆಳಗಿಳಿದಂತೆ, ಕೃಷಿ ಪಂಪಿಗೂ ಇಂಧನ ಉಪಯೋಗಿಸಲು ಪ್ರಾರಂಭವಾಯಿತು. ಪಂಚಾಯತಿನ ಎಲ್ಲಾ ಭಾಗಗಳಿಗೂ ವಿದ್ಯುತ್ ಸಂಪರ್ಕ ಇಲ್ಲದ ಕಾರಣ ವಿದ್ಯುತ್‌ನ ಸದುಪಯೋಗ ಪಡೆಯಲು ಈಗಲೂ ಸಾಧ್ಯವಾಗುತ್ತಿಲ್ಲ. ಬಯೋಗ್ಯಾಸ್ ಒಲೆ, ಸೌರದೀಪಗಳ ಉಪಯೋಗಗಳ ಮನೆ ಬೆರಳೆಣಿಕೆಯಷ್ಟು ಮಾತ್ರ. ಈಗ ಲಭ್ಯವಿರುವ ಇಂಧನವು, ಗೃಹೋಪಯೋಗೀ, ವಾಣಿಜ್ಯ ಎಂಬ ವಲಯಗಳಲ್ಲಿ ಉಪಯೋಗಿಸಲ್ಪಡುತ್ತದೆ.

**ಪ್ರಧಾನವಾಗಿ ಉಪಯೋಗಿಸುವ ಇಂಧನ ಮೂಲ ಲಭ್ಯತೆಗಳ ನೋಟ.**

**1. ಸೌದೆ:** ಈ ಗ್ರಾಮದಲ್ಲಿ ಗೃಹೋಪಯೋಗಿಯೂ, ವಾಣಿಜ್ಯಕ್ಕೂ (ಹೋಟೇಲುಗಳಿಗೆ) ಅಡುಗೆಗೆ ಬಳಸುವ ಪ್ರಧಾನ ಇಂಧನದ ಮೂಲ ಸೌದೆಯಾಗಿದೆ. ಹಿಂದಿನ ಕಾಲದಲ್ಲಿ ಕಾಡಿನಲ್ಲಿ ಧಾರಾಳ ಕಟ್ಟಿಗೆ ಸಿಗುತ್ತಿದ್ದುದರಿಂದ, ಬದಲಿ ಉತ್ತಮ ಮೂಲ ಇಲ್ಲದಿದ್ದುದರಿಂದ ಜನರು ಅಡುಗೆಗೆ ಸೌದೆ ಉಪಯೋಗಿಸುತ್ತಿದ್ದರು. ಕಾಡಿನ ಮರಗಳ ಕಟ್ಟಿಗೆ, ಅಡಿಕೆ ಮರದ ಸಲಾಕೆಯನ್ನು ಉಪಯೋಗಿಸುತ್ತಿದ್ದರು. ದೂರದ ಕಾಡಿನಿಂದ ಕಟ್ಟಿಗೆ ತರಲು ಗಂಡಸರು, ಹೆಂಗಸರು, ಮಕ್ಕಳು ಹೋಗುತ್ತಿದ್ದರು. ಇದರಿಂದ ಈಗಲೂ ಅವರ ಸಮಯ, ಶಕ್ತಿಯ ಸದುಪಯೋಗವಾಗುವುದಿಲ್ಲ. ಮಕ್ಕಳ ಸಮಯವು ಹಾಳಾಗುತ್ತದೆ. ಕಟ್ಟಿಗೆ ಲಭ್ಯತೆ ಕೊರತೆ ಈ ಸಮಸ್ಯೆಯನ್ನು ಬಿಗಡಾಯಿಸಿದೆ. ಇದನ್ನೇ ಉದ್ಯೋಗವಾಗಿ ಮಾಡಿದವರೂ ಇದ್ದರು.

**2. ಬೆರಣಿ** : ಸೌದೆಯ ಸಂಗ್ರಹದ ಕಷ್ಟದಿಂದ ಕೆಲವರು ಸಗಣಿಯನ್ನು ತಟ್ಟಿ, ಒಣಗಿಸಿ ಬೆರಣಿಯಾಗಿ ಮಾಡಿ ಅಡುಗೆಗೆ ಇಂಧನವಾಗಿ ಉಪಯೋಗಿಸುತ್ತಾರೆ.

**3. ತೆಂಗಿನ ಉತ್ಪನ್ನ, ಅಡಿಕೆ ಸಿಪ್ಪೆ, ಕಸಕಡ್ಡಿ :** ತೆಂಗಿನ ಉತ್ಪನ್ನಗಳು ಭಾಗಶಃ ಅಡುಗೆಗಾಗಿ ಉಪಯೋಗಿಸಿದರೂ ಉಳಿದ ತೆಂಗಿನ ಉತ್ಪನ್ನ, ಅಡಿಕೆ ಸಿಪ್ಪೆ, ಕಸ ಕಡ್ಡಿಗಳನ್ನು ಭತ್ತ ಬೇಯಿಸಲು, ಬಚ್ಚಲು ನೀರನ್ನು ಬಿಸಿಮಾಡಲು ಉಪಯೋಗಿಸುತ್ತಾರೆ. ಇದರ ಲಭ್ಯತೆ ಕೆಲವು ಮನೆಗಳಿಗೆ ಮಾತ್ರ ಸೀಮಿತವಾಗಿದೆ.

**4. ವಿದ್ಯುತ್ : ಸಹಿತ ಬೆಳಕು ನೀಡುವ ಇತರ ಇಂಧನಗಳ ಬಳಕೆಗೆ ಈ ಗ್ರಾಮದಲ್ಲಿ ಕೊರತೆಯಾದ ಕಾರಣ 95% ದಿಂದಲೂ ಹೆಚ್ಚು ಮನೆಗಳಲ್ಲಿ ಬೆಳಕಿಗೆ ಚಿಮಿಣಿ ಎಣ್ಣೆಯನ್ನು ಉಪಯೋಗಿಸುತ್ತಾರೆ. ಗೂಡಂಗಡಿ, ಅಂಗಡಿ, ಹೋಟೇಲುಗಳಲ್ಲೂ ಬೆಳಕಿಗೆ ಇಂಧನವಾಗಿ ಚಿಮಿಣಿ ಎಣ್ಣೆಯನ್ನು ಆಶ್ರಯಿಸಿದ್ದಾರೆ.**

1. ಕೃಷಿಗೆ : ಹೊಸ ತಂತ್ರಜ್ಞಾನದಿಂದ ಇಲ್ಲಿ ಬೇಸಾಯ ಹಾಗೂ ಕೃಷಿಗಳನ್ನು ಮಾಡಲು ಪ್ರಾರಂಭಿಸಿದ ಕಾರಣ ಕೃಷಿಗೆ ಸೀಮೆ ಎಣ್ಣೆ, ಡೀಸಲ್ ಪಂಪು, ಟಿಲ್ಲರ್ ಉಪಯೋಗಿಸಲು ಪ್ರಾರಂಭಿಸಿದ್ದಾರೆ.

**ಅಡುಗೆ ಮಾಡಲು :** ಕಟ್ಟಿಗೆಯ ಅಭಾವ, ವಿದ್ಯುತ್ ವ್ಯವಸ್ಥೆಯ ಅಭಿವೃದ್ಧಿಯ ಮಂದಗತಿ ಇವುಗಳಿಂದ ಈ ಗ್ರಾಮದಲ್ಲಿ ಅಡುಗೆ ಮಾಡಲು ಸೀಮೆ ಎಣ್ಣೆಯನ್ನು ಇಂಧನವಾಗಿ ಉಪಯೋಗಿಸುತ್ತಾರೆ.

ಈ ಗ್ರಾಮದಲ್ಲಿರುವ ಒಟ್ಟು 4 ರೇಶನ್ ಅಂಗಡಿಯಿಂದ ಕಳೆದ ಐದು ವರ್ಷಗಳಲ್ಲಿ ಕೃಷಿಗೂ, ಅಡುಗೆ ಮಾಡಲೂ ವಿತರಿಸಿದ ಎಣ್ಣೆ ಹಾಗೂ ಬೆಳಕಿಗೆ ವಿತರಿಸಿದ ಎಣ್ಣೆಯ ತಖ್ತೆಯನ್ನು ನೀಡಲಾಗಿದೆ. ಇದರಿಂದ ಜನರು ಸೀಮೆ ಎಣ್ಣೆಯನ್ನು ಇಂಧನವಾಗಿ ಆಶ್ರಯಿಸಿದ ಪ್ರಮಾಣದ ಅಂದಾಜು ತಿಳಿಯುವುದು.

| ಇಸವಿ | ಪರ್ಮಿಟುಗಳ ಸಂಖ್ಯೆ | ಪರ್ಮಿಟುಗಳಲ್ಲಿ ವಿತರಿಸಲಾದ ಎಣ್ಣೆ (ಲೀಟರುಗಳಲ್ಲಿ) | ಕಾರ್ಡುಗಳ ಮೂಲಕ ವಿತರಿಸಿದ ವಿತರಿಸಿದ ಎಣ್ಣೆ. |
|---|---|---|---|
| 1991-1992 | 274 | 15,864 | 54,635 |
| 1992-1993 | 318 | 17,754 | 56,764 |
| 1993-1994 | 292 | 16,162 | 59,700 |
| 1994-1995 | 332 | 12,658 | 60,993 |
| 1995-1996 | 270 | 15,166 | 58,590 |

**ಡೀಸಲ್:** ಗ್ರಾಮದ ಎಲ್ಲಾ ಕಡೆ ವಿದ್ಯುತ್ ಸೌಕರ್ಯ ಇಲ್ಲ. ಇರುವ ವಿದ್ಯುತ್ ಸರಬರಾಜಿನಲ್ಲಿ ವೈಫಲ್ಯವಿದೆ. ಆದುದರಿಂದ ಜನರು ಕೃಷಿಗೆ ಡೀಸಲ್ ಪಂಪುಗಳನ್ನು ಆಶ್ರಯಿಸಿದ್ದಾರೆ. ಡೀಸಲನ್ನು ಕೃಷಿಕ್ಷೇತ್ರದಲ್ಲಿ ಇಂಧನವಾಗಿ ಉಪಯೋಗಿಸುತ್ತಾರೆ.

**ಅಡುಗೆ ಅನಿಲ:** ಅಡುಗೆ ಅನಿಲವನ್ನು ಇಂಧನವಾಗಿ ಉಪಯೋಗಿಸುವ ಮನೆಗಳು ತೀರಾ ವಿರಳವಾಗಿದೆ. ಗೋಬರ್‌ಗ್ಯಾಸ್, ಬಯೋಗ್ಯಾಸ್, ಅಡುಗೆ ಅನಿಲ, ಸೌರಶಕ್ತಿ ಮೊದಲಾದವುಗಳನ್ನು ಇಂಧನವಾಗಿ ಉಪಯೋಗಿಸುವ ಮನೆಗಳು ತೀರಾ ವಿರಳ.

**ವಿದ್ಯುತ್ :** ವಿದ್ಯುತ್‌ನ ಅಭಿವೃದ್ಧಿ ಕಾರ್ಯ ಮಂದಗತಿಯಲ್ಲಿರುವುದರಿಂದಲೂ, ಸರಬರಾಜು ವೈಫಲ್ಯದಿಂದಲೂ, ವಿದ್ಯುತ್ತನ್ನು ಬೆಳಕಿಗೆ, ಕೃಷಿಗೆ, ಇಂಧನವಾಗಿ ಉಪಯೋಗಿಸಲು ಜನರಿಗೆ ಸಾಧ್ಯವಾಗಿಲ್ಲ.

ಈ ಗ್ರಾಮದ 15% ಮನೆಗಳಿಗೆ ಮಾತ್ರ ವಿದ್ಯುತ್ ಸೌಲಭ್ಯ ದೊರಕಿರುತ್ತದೆ. ಈಗ IVನೇ ವಾರ್ಡಿನ ಕಿನ್ನಿಂಗಾರು ಪ್ರದೇಶದಲ್ಲಿ ಕೆಲವು ಕಡೆ ವಿದ್ಯುತ್ ಸರಬರಾಜಿನ ಯೋಜನೆ ಅಭಿವೃದ್ಧಿಯಲ್ಲಿದೆ.

**ಸಮಸ್ಯೆಗಳು**

**1. ವಿದ್ಯುತ್ ಸಮಸ್ಯೆ**

1. ಗ್ರಾಮದ ಹೆಚ್ಚಿನ ಕಡೆ ವಿದ್ಯುತ್ ಇಲ್ಲ.
2. ವೋಲ್ಟೇಜ್ ಕೊರತೆ, ಅಘೋಷಿತ ವಿದ್ಯುತ್ ಕಡಿತ.
3. ವಿದ್ಯುತ್ ಸೋರಿಕೆ.
4. ವೋಲ್ಟೇಜ್ ಸ್ಟೆಬಿಲೈಸರ್‌ಗಳ ಉಪಯೋಗ
5. ವಿದ್ಯತ್ ಕಛೇರಿ ದೂರದಲ್ಲಿರುವುದರಿಂದ ಸಂಪರ್ಕಿಸಲು ಅಸಾಧ್ಯವಾಗುವುದು.
6. ಮುಳ್ಳೇರಿಯಾ 110 ಕೆ.ವಿ. ಸಬ್ ಸ್ಟೇಶನ್ ಆಗದಿರುವುದು.
7. ಹಣ ಪಾವತಿಗೆ ಹತ್ತಿರದಲ್ಲಿ ವ್ಯವಸ್ಥೆ ಇಲ್ಲದಿರುವುದು.
8. ವಿದ್ಯುತ್ ದೋಷ, ದುರಸ್ತಿ ಕಾರ್ಯ ತಿಂಗಳುಗಳ ತನಕ ನಡೆಯದೆ ಇರುವುದು.
9. ದಾರಿದೀಪ ಇಲ್ಲದಿರುವದು.
10. ವಿದ್ಯುತ್ ಇಲ್ಲದೆ ಕೈಗಾರಿಕೆ ಬೆಳೆಯದಿರುವುದು.

**2. ಸೌದೆ ಸಮಸ್ಯೆ :** ಕಾಡು ಅಳಿಯುತ್ತಾ ಬಂದರೂ ಸೌದೆ ಇಂಧನವಾಗಿ ಉಪಯೋಗಿಸುವವರ ಸಂಖ್ಯೆ ಈಗಲೂ ಅಧಿಕವಾಗಿರುವುದರಿಂದ ಕಟ್ಟಿಗೆಯ ಅಭಾವ ಬಂದಿರುವುದು. ಕಟ್ಟಿಗೆ ಸಂಗ್ರಹದಲ್ಲಿ ಸಮಯ, ಶಕ್ತಿ, ಹಾಳಾಗುವುದು. ಮಕ್ಕಳಿಗೆ ಅನಾವಶ್ಯಕ ಕೆಲಸವಾಗುವುದು. ವಿದ್ಯಾಭ್ಯಾಸ, ಅಭಿವೃದ್ಧಿ ಕುಂಠಿತಗೊಳ್ಳುವುದು ಮತ್ತು ಪ್ರಕೃತಿ ನಾಶವಾಗುವುದು.

**3. ಸೀಮೆ ಎಣ್ಣೆಯ ಅಲಭ್ಯತೆ :** ಕೃಷಿಗೆ, ಬೆಳಕಿಗೆ, ಅಡುಗೆಗೆ, ಹೋಟೇಲುಗಳಿಗೆ ತಕ್ಕ ಸಮಯದಲ್ಲಿ ಅಗತ್ಯವಿರುವಷ್ಟು ಸೀಮೆ ಎಣ್ಣೆ ಸಿಗದೆ ಪರದಾಡುವ ಪರಿಸ್ಥಿತಿ ಉಂಟಾಗಿರುವುದು.

**4. ಅಡುಗೆ ಅನಿಲ :** ಸೌಲಭ್ಯಕ್ಕೆ ವರ್ಷಗಳ ತನಕ ಕಾಯಬೇಕಾದ ಪರಿಸ್ಥಿತಿ. ಸಿಲಿಂಡರು ಸರಬರಾಜು ಸರಿಯಾಗಿ ಆಗದೆ ಇರುವುದು. ಅನಿಲ ಸರಬರಾಜಿನ ಕೇಂದ್ರ ದೂರದಲ್ಲಿರುವುದರಿಂದ ಕೊಂಡು ಹೋಗಲು ಕಷ್ಟವಾಗುವುದು.

**5. ಗೋಬರ್‌ಗ್ಯಾಸ್, ಬಯೋಗ್ಯಾಸ್ ಸ್ಥಾಪಿಸಲು ಸರಕಾರದ** ಸಹಾಯಧನ ಕಡಿಮೆ. ಆ ಬಗೆಗೆ ಮಾಹಿತಿ ಸರಿಯಾಗಿ ತಿಳಿಯದಿರುವುದೂ ಒಂದು ಅಡ್ಡಿಯಾಗಿದೆ.

ಇಂಧನ ಮೂಲಗಳ ಉಪಯೋಗ, ಇಂಧನ ಸಂರಕ್ಷಣೆ ಇವುಗಳನ್ನು ಪ್ರೋತ್ಸಾಹಿಸುವ ಅನರ್ಟ್, ಖಾದಿಬೋರ್ಡ್ ಮುಂತಾದ ಸಂಸ್ಥೆಗಳು ಈ ಪ್ರದೇಶದಿಂದ ಬಹಳ ದೂರದಲ್ಲಿರುವುದು. ಆ ಸಂಸ್ಥೆಗಳ ಪ್ರೋತ್ಸಾಹ, ಸಹಾಯಧನ, ಸರಬರಾಜು ಸಕಾಲದಲ್ಲಿ ಇಲ್ಲಿಯ ಜನರಿಗೆ ಸಿಗದಿರುವುದು.

## ಪರಿಹಾರಗಳು

ವಿದ್ಯುಚ್ಛಕ್ತಿಯ ಕ್ಷೇತ್ರದಲ್ಲಿ : ಪ್ರತಿಯೊಂದು ಕ್ಷೇತ್ರದಲ್ಲಿಯೂ ಇಂದು ವಿದ್ಯುತ್ ಉಪಯೋಗಿಸಲ್ಪಡುತ್ತದೆ. ವಿದ್ಯುತ್ ವ್ಯವಸ್ಥೆ ಸರಿಯಾದಲ್ಲಿ ಅಭಿವೃದ್ಧಿಗೆ ದಾರಿ ತೆರೆದಂತಾಗುವುದು. ಬೆಳ್ಳೂರಿನ ಅಭಿವೃದ್ಧಿಯ ಪಥದಲ್ಲಿ ವಿದ್ಯುತ್ತನ್ನು ಒಂದು ಗುಣಾತ್ಮಕ ಘಟಕವಾಗಿ ಮಾಡಬೇಕಾದರೆ ಈ ಕ್ರಮಗಳನ್ನು ಕೈಗೊಳ್ಳಬೇಕು ಎಂಬುದರಲ್ಲಿ ಸಂಶಯವಿಲ್ಲ.

ಈ ಗ್ರಾಮದಲ್ಲಿ ಅಗತ್ಯವಿರುವ ಎಲ್ಲಾ ವಿಭಾಗಗಳಿಗೆ ವಿದ್ಯುತ್ ಸೌಲಭ್ಯ ಏರ್ಪಡಿಸಬೇಕು.

**1. ವೋಲ್ಟೇಜ್ ಇಲ್ಲದಿರುವಿಕೆ :** ಅಘೋಷಿತ ವಿದ್ಯುತ್ ಕಡಿತ ಇಲ್ಲಿ ಪ್ರತಿದಿನ ಎಂಬಂತೆ ಕಂಡುಬರುವ ಸಮಸ್ಯೆ. ಸ್ಟೆಬಿಲೈಸರ್‌ಗಳ ಬಳಕೆಯೂ ವೋಲ್ಟೇಜ್ ಕೊರತೆಯ ಸಮಸ್ಯೆಯನ್ನು ಬಿಗಡಾಯಿಸುತ್ತದೆ. ಮುಳ್ಳೇರಿಯಾದಲ್ಲಿ ಕೆಲಸ ಪ್ರಾರಂಭಿಸಿ ಅರ್ಧದಲ್ಲಿ ನಿಲ್ಲಿಸಿದ 110 ಕೆ. ವಿ. ಸಬ್‌ಸ್ಟೇಶನ್‌ನು ಕಾಮಗಾರಿಯನ್ನು ಪೂರ್ಣಗೊಳಿಸಬೇಕು. ಈ ಗ್ರಾಮದ ವಿದ್ಯುತ್ ಸರಬರಾಜಿಗೆ ತಕ್ಕಷ್ಟು ಟ್ರಾನ್ಸ್‌ಫಾರ್ಮರ್‌ಗಳನ್ನು ನೆಲೆಗೊಳಿಸಬೇಕು. ಕೃಷಿ ಪಂಪಿಗೂ ಅಗತ್ಯವಿರುವಷ್ಟು ವಿದ್ಯುತ್ತನ್ನು ಒದಗಿಸಬೇಕು. ಈ ಗ್ರಾಮದಲ್ಲಿ ಯಾವುದೇ ರೀತಿಯ ಕೈಗಾರಿಕೆ ಅಭಿವೃದ್ಧಿಯಾಗದಿರುವುದಕ್ಕೆ ವಿದ್ಯುತ್‌ನ ಅಭಾವವೇ ಪ್ರಧಾನ ಕಾರಣ. ಆದುದರಿಂದ ಅಭಿವೃದ್ಧಿಯ ದಾರಿ ತೆರೆಯಲು ತ್ರಿಫೇಸ್ ವಿದ್ಯುತ್ ಸೌಕರ್ಯವನ್ನು ಪ್ರಾರಂಭಿಸಬೇಕು.

2. ವಿದ್ಯುತ್ ಕಛೇರಿ ಈಗ 20 ಕಿ. ಮಿ. ದೂರದ ಚೆರ್ಕಳದಲ್ಲಿರುವುದು. ವಿದ್ಯುತ್ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು, ಹಣ ಪಾವತಿಗೆ, ಜನ ಸಂಪರ್ಕಕ್ಕೆ ಬಹಳಷ್ಟು ಸಮಯ, ಹಣ ಪೋಲಾಗುವುದು. ಆದುದರಿಂದ ಮುಳ್ಳೇರಿಯಾದಲ್ಲಿ ಒಂದು ವಿದ್ಯುತ್ ಇಲಾಖೆಯ ಕಛೇರಿಯನ್ನು ತೆರೆಯಬೇಕು.

3. ವಿದ್ಯುತ್ ದೋಷದ ಬಗೆಗೆ ದೂರುಗಳನ್ನು ದುರಸ್ತಿಕಾರ್ಯಗಳ ಬಗೆಗೆ ಅಹವಾಲುಗಳನ್ನು ಸಕಾಲದಲ್ಲಿ ತಿಳಿಸಿದರೂ ತಿಂಗಳು ತನಕ ಕ್ರಿಯಾತ್ಮಕವಾಗಿ ಪ್ರತಿಕ್ರಿಯಿಸುವುದಿಲ್ಲ. ಆದುದರಿಂದ ವಿದ್ಯುತ್ ದೋಷ, ದುರಸ್ತಿ ಕಾರ್ಯಗಳ ಪಟ್ಟಿಯನ್ನು ಪಂಚಾಯುತು ಮುಖೇನ ಇಲಾಖೆಗೆ ತಲುಪಿಸಿ ಕ್ರಮಾಗತ ದುರಸ್ತಿಕಾರ್ಯ ಕೈಗೊಳ್ಳುವಂತೆ ಮಾಡಬೇಕು. 15 ದಿವಸಗಳ ಒಳಗಾಗಿ ದುರಸ್ತಿಯಾಗದ ವ್ಯವಸ್ಥೆಯ ಕುರಿತಾದ ದೂರುಗಳನ್ನು ವಿದ್ಯುತ್ ಇಲಾಖೆಯ ವಿಚಾರಣಾ ಆಯೋಗಕ್ಕೆ ತಲುಪಿಸಿ ತಕ್ಕ ಕ್ರಮ ಕೈಗೊಳ್ಳುವಂತೆ ಒತ್ತಾಯಿಸುವುದು.

4. ದಾರಿದ್ರ್ಯ ರೇಖೆಗಿಂತ ಕೆಳಗಿರುವವರಿಗೆ ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರಿಗೆ ಉಚಿತ ವಿದ್ಯುತ್ ದೀಪ ಒದಗಿಸುವ ವ್ಯವಸ್ಥೆ ಕೈಗೊಳ್ಳುವುದು. ಕಡಿಮೆ ವೋಲ್ಟೇಜಿನಲ್ಲಿ ಉರಿಯುವ ಬಲ್ಬು (ಪ್ಲೋರಸೆಂಟ್ ಲ್ಯಾಂಪ್), ಟ್ಯೂಬ್‌ಗಳನ್ನು ಕಡಿತ ಬೆಲೆಯಲ್ಲಿ ವಿತರಿಸುವ ಕಾರ್ಯ ಈಗಲೇ ಪ್ರಾರಂಭಿಸಬೇಕು.

5. ಪ್ರಧಾನ ರಸ್ತೆಗಳ ಬದಿಯಲ್ಲಿ ತಕ್ಷಣ ವಿದ್ಯುತ್ ದಾರಿದೀಪ ಏರ್ಪಡಿಸಬೇಕು. ವಿದ್ಯುತ್ ಇಲ್ಲದ ಕಡೆಗೆ ದಾರಿದೀಪವಾಗಿ ಸೌರದೀಪ ಅಳವಡಿಸಬೇಕು.

6. ಕಟ್ಟಿಗೆ ಇಂಧನದ ಅಭಾವ ನೀಗಿಸಲು ಉರುವಲು ಕಾಡು ಬೆಳೆಸುವ ಯೋಜನೆ ತಯಾರಾಗಬೇಕು. ಕಾಡು ಬೆಳೆಸಲು ಪ್ರೋತ್ಸಾಹ ನೀಡಬೇಕು.

7. ವಿದ್ಯುತ್ ಸೋರಿಕೆ ತಡೆಗಟ್ಟಲು ಮರದ ಕೊಂಬೆಗಳನ್ನು, ಅಗತ್ಯವಾದರೆ ವರ್ಷವೂ ಕಡಿಯಬೇಕು. ಅಪಾಯಕಾರೀ ವಿದ್ಯುತ್ ಕಂಬಗಳನ್ನು ಗುರುತಿಸಿ ಹೊಸಕಂಬ ಹಾಕಿಸಬೇಕು.

8. ಅಡುಗೆಗೆ, ಕೃಷಿ ಪಂಪಿಗೆ, ಬೆಳಕಿಗೆ ಸೀಮೆಎಣ್ಣೆ ಅನಿವಾರ್ಯ. ಕೃಷಿ ಪಂಪಿಗೆ ನವೆಂಬರ್‌ನಿಂದ ಪ್ರಾರಂಭಿಸಿ ಮೇ ಕೊನೆಯತನಕ ಪರ್ಮಿಟ್‌ನಲ್ಲಿ ಸೀಮೆಎಣ್ಣೆ ವಿತರಿಸುವ ವ್ಯವಸ್ಥೆ ಆಗಬೇಕು.

9. ಪರ್ಮಿಟ್ಟನ್ನು ಪಂಚಾಯತ್ ಮಟ್ಟದಲ್ಲಿ ವಿತರಿಸಬೇಕು.

10. ಅಗತ್ಯವಿರುವವರಿಗೆಅಡುಗೆ ಅನಿಲದ ಸರಬರಾಜು ಕ್ರಮ ಕೈಗೊಳ್ಳಬೇಕು. ಈಗಿನ ಕೇಂದ್ರವಾದ ಕುಂಬಳೆ ಇಲ್ಲಿಂದ 30 ಕಿ. ಮಿ. ದೂರದಲ್ಲಿದೆ. ಆದುದರಿಂದ ಈ ಪಂಚಾಯತ್ ವ್ಯಾಪ್ತಿಯಲ್ಲಿ ಇನ್ನೊಂದು ಕೇಂದ್ರ ಸ್ಥಾಪನೆಯಾಗಬೇಕು.

11. ಗೋಬರ್ ಗ್ಯಾಸ್, ಬಯೋಗ್ಯಾಸ್ ಸ್ಥಾವರ ಸ್ಥಾಪಿಸಲು ಈಗ ಇರುವ ಸಹಾಯಧನವನ್ನು 75% ಹೆಚ್ಚಿಸಬೇಕು. ಈ ಸ್ಥಾವರ ರಚಿಸಲು ಸ್ಥಳೀಯರಿಗೆ ತಾಂತ್ರಿಕ ಶಿಕ್ಷಣ ನೀಡುವ ವ್ಯವಸ್ಥೆ ಕೈಗೊಳ್ಳಬೇಕು.

12. ಸೌರದೀಪಗಳ ಬಗ್ಗೆ ಜನರ ಒಲವು, ಬೇಡಿಕೆ ಹೆಚ್ಚುತ್ತಿದೆ. ಆದರೆ ಸೌರದೀಪ ಸರಬರಾಜು ಮಾಡುತ್ತಿರುವ ಅನರ್ಟ್ ಕಾರ್ಯಾಲಯ ಈಗ ಇಲ್ಲಿಂದ 50 ಕಿ. ಮಿ. ದೂರದಲ್ಲಿದೆ. ಅನರ್ಟ್‌ನ ಕಾರ್ಯಕ್ರಮಗಳು, ಅದರ ಸೌಲಭ್ಯಗಳು ಈ ಪ್ರದೇಶದ ಜನರ ಗಮನಕ್ಕೆ ಬರುವುದೇ ಇಲ್ಲ. ಆದುದರಿಂದ ಅನರ್ಟ್‌ನಲ್ಲಿ ಸಿಗುವ ಎಲ್ಲಾ ಸಾಮಗ್ರಿಗಳನ್ನು ಪಂಚಾಯತು ಜನರಿಗೆ ತಿಳಿಸಿ ಜನರಿಂದ ಅಗತ್ಯ ವಸ್ತುಗಳ ಪಟ್ಟಿ ಪಡೆದು ಪಂಚಾಯತಿನಲ್ಲೇ ವಿತರಿಸುವ ಕ್ರಮವನ್ನು ತಿಂಗಳಿಗೊಮ್ಮೆಯಾದರೂ ಕೈಗೊಳ್ಳಬೇಕು. ಇದೇ ವ್ಯವಸ್ಥೆಯನ್ನು ಹೊಗೆರಹಿತ ಒಲೆ, ಬಯೋಗ್ಯಾಸ್ ಒಲೆಗಳು

ಹಾಗೂ ದೀಪ, ಘರ್ಷಣಾ ರಹಿತ ಫುಟ್‌ವಾಲ್‌ಗಳು, ಸೌರದೀಪ, ಕಾಂಬೇಕ್ಸ್, ಫ್ಲೋರೆಸೆಂಟ್ ಲ್ಯಾಂಪ್‌ಗಳು, ಟ್ಯೂಬ್ ಲೈಟುಗಳು, ಇಲೆಕ್ಟ್ರಾನಿಕ್ ಟಾರ್ಚ್ ಇತ್ಯಾದಿಗಳಿಗೂ ವಿಸ್ತರಿಸಬೇಕು.

13. ಖಾದಿ ಬೋರ್ಡ್‌ನ ಕೆಲಸ, ವಿವರ, ಸೌಲಭ್ಯ ತಿಳಿಸಬೇಕು.

14. ಗಾಳಿಯಂತ್ರ ಸ್ಥಾಪಿಸಲು ಧನ ಸಹಾಯ, ಮಾರ್ಗದರ್ಶನ, ತಾಂತ್ರಿಕ ಸಹಾಯದ ವ್ಯವಸ್ಥೆ ಮಾಡಬೇಕು.

15. ಇಂಧನ ಹಾಳಾಗದ ರೀತಿಯಲ್ಲಿ ಪರಿಷ್ಕೃತ ಅಸ್ತ್ರ ಒಲೆಯನ್ನು ನಿರ್ಮಿಸಲು ಬೇಕಾದ ತರಬೇತಿ ನೀಡಬೇಕು. ಪಂಚಾಯತಿನ ಜನರು ಪೂರ್ಣವಾಗಿ ಇದರ ಪ್ರಯೋಜನ ಪಡೆಯುವಂತೆ ಯೋಜನೆ ತಯಾರಿಸಿ ಕಡಿಮೆ ಖರ್ಚಿನಲ್ಲಿ ಜನ ಸಾಮಾನ್ಯರಿಗೆ ಅದು ದೊರೆಯುವಂತೆ ಮಾಡಬೇಕು.

$$$$$$$$

# 13

# ವಸತಿ ಮತ್ತು ಸಾಮಾಜಿಕ ಕ್ಷೇಮ

## ವಸತಿ :

ಬೆಳ್ಳೂರು ಗ್ರಾಮ ಪಂಚಾಯತು ಕೃಷಿಕರು ಹಾಗೂ ಕೃಷಿ ಕೂಲಿ ಕಾರ್ಮಿಕರು ವಾಸಿಸುತ್ತಿರುವ ಪ್ರದೇಶವಾಗಿದೆ. ಈ ಪ್ರದೇಶದ ಗುಡ್ಡೆ ಇಳಿಜಾರು ಮತ್ತು ಕಣಿವೆಗಳಲ್ಲಿ ಜನರು ವಾಸಿಸುವರು. ಈ ಪಂಚಾಯತಿನಲ್ಲಿ ಒಟ್ಟು 2132 ಕಟ್ಟಡಗಳ ಪೈಕಿ ಸುಮಾರು 2040 ಕಟ್ಟಡಗಳು ಮನೆಗಳಾಗಿವೆ ಈ ಮನೆಗಳಲ್ಲಿ ಹದಿನಾರು ಶೇಕಡಾದಷ್ಟು ಮುಳಿ ಹಾಕಿದ ಸಣ್ಣ ಗುಡಿಸಲುಗಳಾಗಿವೆ. ಹಂಚು ಛಾವಣಿ ಮನೆಗಳಲ್ಲಿನ ಶೇಕಡಾ ಹತ್ತರಷ್ಟು ಮಣ್ಣಿನಗೋಡೆ ಮತ್ತು ಬಿದಿರನ್ನು ಉಪಯೋಗಿಸಿ ನಿರ್ಮಿಸಿದ ಮಾಡಿನದ್ದಾಗಿದೆ. ಈ ಮನೆಗಳು ಪೂರ್ಣ ಸೌಕರ್ಯವನ್ನು ಹೊಂದಿದವುಗಳಲ್ಲ. ಈ ಪಂಚಾಯತು ಪ್ರದೇಶದಲ್ಲಿ 868 ಕುಟುಂಬಗಳು ದಾರಿದ್ರ್ಯರೇಖೆಗಿಂತ ಕೆಳಮಟ್ಟದಲ್ಲಿವೆ

ಈ ಪಂಚಾಯತಿನ ಕಟ್ಟಡಗಳ ವಿವರವನ್ನು ತೋರಿಸುವ ತುಖ್ತೆಯನ್ನು ಕೆಳಗೆ ಕೊಡಲಾಗಿದೆ

| ವಾರ್ಡು ನಂಬ್ರ | ಒಂದು ಅಂತಸ್ತಿಕ್ಕಿಂತ ಹೆಚ್ಚಿರುವ ಕಟ್ಟಡಗಳ ಸಂಖ್ಯೆ | ಮಾಡಿನ ಬಗೆ | | | ಕಟ್ಟಡಗಳ ಒಟ್ಟು ಸಂಖ್ಯೆ |
|---|---|---|---|---|---|
| | | ತಾರಸಿ | ಹಂಚು | ಮುಳಿಹುಲ್ಲು | |
| I | 2 | 1 | 208 | 24 | 233 |
| II | 3 | 1 | 251 | 4 | 256 |
| III | 3 | 5 | 256 | 58 | 319 |
| IV | 1 | 5 | 251 | 6 | 262 |
| V | 2 | 2 | 225 | 40 | 277 |
| VI | - | 2 | 210 | 41 | 253 |
| VII | 2 | 2 | 176 | 68 | 246 |
| VIII | - | 4 | 254 | 28 | 286 |
| ಒಟ್ಟು | 13 | 32 | 1831 | 269 | 2132 |

ಈ ಪಂಚಾಯತಿನಲ್ಲಿ IRDP ಸರ್ವೆ ಪ್ರಕಾರ ವಸತಿ ನಿರ್ಮಾಣದ ವಿವರಗಳನ್ನು ತೋರಿಸುವ ತುಖ್ತೆಯನ್ನು ಕೆಳಗೆ ಕೊಡಲಾಗಿದೆ

| ವಾರ್ಡು ನಂಬ್ರ | ವಸತಿ ಆಗತ್ಯವಿರುವ ಕುಟುಂಬ ಗಳ ಸಂಖ್ಯೆ (IRDP ಸರ್ವೆ ಪ್ರಕಾರ ) | ವಿವಿಧಯೋಜನೆಗಳ ಮೂಲಕ ನೀಡಿದ ಮನೆಗಳು | ಪೂರ್ತೀಕರಿಸಿದ ಮನೆಗಳು | ಪೂರ್ತೀ ಕರಿಸಲಿರುವ ಮನೆಗಳ ಸಂಖ್ಯೆ | ನೀಡಲಿರುವ ಮನೆಗಳ ಸಂಖ್ಯೆ |
|---|---|---|---|---|---|
| I | 46 | 5 | 5 | - | 32 |
| II | 53 | 10 | 9 | 1 | 38 |
| III | 43 | 7 | 5 | 2 | 30 |
| IV | 34 | 8 | 8 | - | 17 |
| V | 44 | 8 | 7 | 1 | 25 |
| VI | 40 | 5 | 4 | 1 | 31 |
| VII | 27 | 5 | 5 | - | 18 |
| VIII | 26 | 2 | 2 | - | 15 |
| ಒಟ್ಟು | 313 | 50 | 45 | 5 | 206 |

ಈ ಮೇಲಿನ ತಖ್ತೆಯಿಂದ ನಮ್ಮೀ ಪಂಚಾಯತಿಗೆ ಸರಕಾರದ ವಿವಿಧ ಯೋಜನೆಗಳ ಮೂಲಕ ನೀಡಲ್ಪಟ್ಟ ಮನೆಗಳ ಸಂಖ್ಯೆ ಬಹಳ ಕಡಿಮೆ ಎಂಬುದನ್ನು ತಿಳಿಯಲು ಸಾಧ್ಯ. ಈ ಪಂಚಾಯತು ಪ್ರದೇಶದಲ್ಲಿ ಗೃಹ ನಿರ್ಮಾಣಕ್ಕೆ ಸಾಲ ಕೊಡುವ ಬೇಂಕುಗಳು ಅಥವಾ ಸೊಸೈಟಿಗಳು ಇಲ್ಲದೆಯಿರುವುದರಿಂದ ಸಾಧಾರಣ ಕಡಿಮೆ ವರಮಾನದವರಿಗೆ ಮನೆ ಕಟ್ಟಲು ಸಾಧ್ಯವಾಗುವುದಿಲ್ಲ.

## ವಸತಿ ನಿರ್ಮಾಣದಲ್ಲಿರುವ ಸಮಸ್ಯೆಗಳು :

1. ವಸತಿ ನಿರ್ಮಾಣದ ಸಾಮಗ್ರಿಗಳ ಬೆಲೆಯೇರಿಕೆ.
2. ವಸತಿ ನಿರ್ಮಾಣ ಸಾಮಗ್ರಿಗಳನ್ನು ಸಾಗಿಸಲು ಸಾರಿಗೆ ವ್ಯವಸ್ಥೆ ಯಿಲ್ಲದಿರುವುದರಿಂದ ಸಾಗಣೆ ಖರ್ಚು ಅಧಿಕವಾಗುವುದು.
3. ವಸತಿ ನಿರ್ಮಾಣದ ಸಾಮಗ್ರಿಗಳು ಸ್ಥಳೀಯವಾಗಿ ದೊರೆಯದೇ ಇರುವುದು.
4. ಕಡಿಮೆ ಖರ್ಚಿನಲ್ಲಿ ವಸತಿ ನಿರ್ಮಾಣಕ್ಕಿರುವ ಮಾಹಿತಿಯ ಕೊರತೆ.
5. ಭೂಮಿ ಸಮತಲಗೊಳಿಸಲು ತಗಲುವ ವೆಚ್ಚ.
6. ವಸತಿ ನಿರ್ಮಾಣಕ್ಕೆ ಅಗತ್ಯವಾದ ಸ್ಥಳ ಹಾಗೂ ಆರ್ಥಿಕ ಕೊರತೆ.
7. ವಸತಿ ನಿರ್ಮಿಸಲು ಸಾಲ ಕೊಡುವ ಸಂಸ್ಥೆಗಳ ಕೊರತೆ ಹಾಗೂ ಸಾಲದ ಮೊತ್ತ ಕಡಿಮೆಯಾಗಿರುವುದು. ಬಡ್ಡಿ ದರದ ಹೆಚ್ಚಳ ಮತ್ತು ಸಾಲ ಪಡೆಯುದಕ್ಕಿರುವ ಸಂಕೀರ್ಣವಾದ ನಿಬಂಧನೆಗಳು.
8. ವಸತಿಗಳ ದುರಸ್ತಿಗೆ ಧನ ಸಹಾಯ ಲಭಿಸದೆಯಿರುವುದು.
9. ಪ್ರಕೃತಿ ವಿಕೋಪದಿಂದ ಮನೆ ಕಳಕೊಂಡವರಿಗೆ ಮತ್ತು ನಷ್ಟ ಸಂಭವಿಸಿದವರಿಗೆ ಸಿಗುವ ಸಾಹಾಯಧನವನ್ನು ಹೆಚ್ಚಿಸದೇ ಇರುವುದು.
10. ಸರಕಾರದ ವಿವಧ ಯೋಜನೆ ಮೂಲಕ ದೊರೆಯುವ ವಸತಿ ನಿರ್ಮಾಣಕ್ಕಿರುವ ಸಾಂಪತ್ತಿಕ ಅಡಚಣೆ.

## ವಸತಿ ನಿರ್ಮಾಣದಲ್ಲಿನ ಸಮಸ್ಯೆಗಳ ಪರಿಹಾರಗಳು:

1. ಪಂಚಾಯತು ಮಟ್ಟದಲ್ಲಿ ಗೃಹ ನಿರ್ಮಾಣ ಸಹಕಾರಿ ಸಂಘವನ್ನು ರೂಪೀಕರಿಸಿ ಇಂಜಿನಿಯರರು ಮೊದಲ್ಗೊಂಡು ಕೂಲಿಯವರವರೆಗಿನ ಸೇವೆಯನ್ನು ನೀಡುವುದರೊಂದಿಗೆ, ಸರಕಾರದಿಂದ ವಿವಿಧ ಯೋಜನೆಗಳ ಮೂಲಕ ದೊರಕುವ ಮನೆಗಳ ನಿರ್ಮಾಣ ಕಾರ್ಯ ನಿರ್ವಹಿಸುವುದು.
2. ವಸತಿ ನಿರ್ಮಾಣಕ್ಕೆ ಬೇಕಾದ ಸಿಮೆಂಟು, ಕಬ್ಬಿಣ ಮೊದಲಾದ ವಸ್ತುಗಳನ್ನು ನಾಗರಿಕ ಪೂರೈಕೆ ಇಲಾಖೆಯ ಮೂಲಕ ವಿತರಣೆ ಮಾಡುವುದು.
3. ಕೋಲನಿಗಳ ಸಮಸ್ಯೆಗಳನ್ನು ಕಂಡು ಹಿಡಿದು ಪರಿಹರಿಸಲು ಯೋಜನೆಗಳನ್ನು ರೂಪೀಕರಿಸಬೇಕು.
4. ಪಂಚಾಯತ್ ಮಟ್ಟದಲ್ಲಿ ಕಡಿಮೆ ಖರ್ಚಿನ ವಸತಿಗಳನ್ನು ನಿರ್ಮಿಸುವುದಕ್ಕಿರುವ ಸಾಮಗ್ರಿಗಳನ್ನು ತಯಾರಿಸಿ ವಿತರಣೆ ಗೊಳಿಸಲಿರುವ ಸಹಕಾರಿ ಸಂಘವನ್ನು ಆರಂಭಿಸುವುದು.
5. ಸ್ವಂತ ಭೂಮಿ ಇಲ್ಲದ ನಿರ್ವಸಿತರಿಗೆ ಸರಕಾರದ ಅಧೀನ ದಲ್ಲಿರುವ ಭೂಮಿಯಲ್ಲಿ ವಸತಿ ನಿರ್ಮಿಸುವಷ್ಟಾದರೂ ಜಾಗ ವನ್ನು ಉಚಿತವಾಗಿ ನೀಡುವುದು.
6. ನಿರ್ಮಾಣ ಕಾರ್ಮಿಕರ ವಿವಿಧ ಸೇವಾ ಗುಂಪುಗಳನ್ನು ರೂಪೀಕರಿಸಿ ಅವರಿಗೆ ತರಬೇತಿ ನೀಡುವುದು.
7. ಅವಧಿ ಬಾಧಿತ ಕಾರ್ಯಕ್ರಮ ರೂಪೀಕರಿಸಿ ಪಂಚಾಯತಿನ ವಸತಿ ರಹಿತರಾದ ಎಲ್ಲಾ ವರ್ಗದ ಜನರಿಗೂ ವಸತಿ ನಿರ್ಮಿಸಲಿಕ್ಕಿರುವ ಯೋಜನೆಯನ್ನು ತಯಾರಿಸುವುದು.
8. ಸರಕಾರದಿಂದ ವಸತಿ ನಿರ್ಮಾಣಕ್ಕೆ ಸದ್ಯ ನಿಗದಿಪಡಿಸಿದ ಸಾಲದ ಮೊತ್ತವನ್ನು ಹೆಚ್ಚಿಸುವುದು.
9. ವಸತಿ ನಿರ್ಮಾಣದ ಸಾಲ ಯೋಜನೆಯ ಮೇಲ್ನೋಟವನ್ನು ನಿರ್ವಹಣೆಯನ್ನೂ ಪಂಚಾಯತಿನ ಆಧೀನಕ್ಕೆ ಬಿಟ್ಟು ಕೊಡುವುದು.
10. IAY, MMS, JRY, RLEGI ಎಂಬೀ ಸ್ಕೀಮುಗಳಲ್ಲಿ ವಸತಿ ನಿರ್ಮಾಣಕ್ಕಿರುವ ಮೊಬಲಗನ್ನು ರೂ. 35000ಕ್ಕೆ ಏರಿಸುವುದು.
11. ರಾಜೀವ್ ದಶಲಕ್ಷ ವಸತಿ ನಿರ್ಮಾಣ ಯೋಜನೆಯನುಸಾರ ನೀಡುವ ಸಾಲವನ್ನು ರೂ. 26400 ರಿಂದ ರೂ.50000 ಕ್ಕೆ ಹೆಚ್ಚಿಸುವುದು.
12. ಪ್ರಕೃತಿ ವಿಕೋಪಕ್ಕೆ ತುತ್ತಾದ ವಸತಿಗಳ ಪುನರ್ ನಿರ್ಮಾಣಕ್ಕೆ ಮೀಸಲಿಟ್ಟ ಮೊಬಲಗು ರೂ.15000ವನ್ನು ಹೆಚ್ಚಿಸಿ ರೂ.3500 ಸಿಗುವಂತೆ ಮಾಡುವುದು.
13. ವಸತಿ ನಿರ್ಮಾಣ, ವಸತಿ ದುರಸ್ತಿ ಅಥವಾ ಪುನರ್ ವಸತಿ ನಿರ್ಮಾಣ ಮುಂತಾದುವುಗಳ ಬಗ್ಗೆ ಸರಕಾರ ಸಹಾಯ ಹಸ್ತ ನೀಡುವಾಗ ಎಲ್ಲಾ ವರ್ಗದ ಅರ್ಹ ಫಲಾನುಭವಿಗಳನ್ನು ಗುರುತಿಸಲು ಪಂಚಾಯತಿಗೆ ಪೂರ್ಣ ಅಧಿಕಾರ ನೀಡುವುದು.
14. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರ ವಸತಿ ನಿರ್ಮಾಣಕ್ಕೆ ನೀಡುವ ಎಲ್ಲಾ ಸೌಲಭ್ಯಗಳು ದಾರಿದ್ರ್ಯ ರೇಖೆಯ ಕೆಳಗಿರುವ ಇನ್ನಿತರ ಸಮುದಾಯದವರಿಗೂ ಸಿಗುವಂತೆ ಮಾಡುವುದು.
15. ದುರಸ್ತಿಗೆ ಹಾಗೂ ಪುನರ್ ನಿರ್ಮಾಣಕ್ಕೆ ಎಲ್ಲಾ ವರ್ಗದ ಜನರಿಗೂ ಸಹಾಯಧನದೊಂದಿಗೆ ಸಾಲ ನೀಡುವ ಯೋಜನೆ ತಯಾರು ಮಾಡುವುದು.
16. ಸಮತಲ ಭೂಮಿಯಲ್ಲಿ ಮನೆ ನಿರ್ಮಾಣಕ್ಕೆ ಸಹಾಯಧನ ಹಾಗೂ ಸಾಲವಾಗಿ ಒದಗಿಸುವ ಮೊತ್ತಕ್ಕಿಂತ ಹೆಚ್ಚಿನ ಮೊತ್ತವನ್ನು ಏರು ತಗ್ಗುಗಳ ಜಾಗದಲ್ಲಿ ಮನೆ ನಿರ್ಮಿಸುವವರಿಗೆ ಒದಗಿಸಬೇಕು.

## ಸಾಮೂಹಿಕ ಕ್ಷೇಮ

ಸಾಮೂಹಿಕ ಕ್ಷೇಮ ಕಾರ್ಯಕ್ರಮದನ್ವಯ ದಾರಿದ್ರ್ಯ ರೇಖೆಗಿಂತ ಕೆಳಗಿರುವವರ ಜೀವನ ಮಟ್ಟವನ್ನು ಸುಧಾರಿಸಲು ಮತ್ತು ಸಂಘಟಿತ ಹಾಗೂ ಅಸಂಘಟಿತ ಕಾರ್ಮಿಕರ ಕ್ಷೇಮಕ್ಕಾಗಿ ಕ್ಷೇಮಾಭಿವೃದ್ಧಿ ಕಾರ್ಯಕ್ರಮಗಳಿರುವುವು.

ಈ ಕಾರ್ಯಕ್ರಮಗಳನ್ವಯ ಪ್ರಥಮವಾಗಿ ಕೇಂದ್ರ ಹಾಗೂ ರಾಜ್ಯ ಸರಕಾರಗಳು ನಡೆಸುವ ದಾರಿದ್ರ್ಯ ನಿರ್ಮೂಲನ ಯೋಜನೆಯೂ ಎರಡನೆಯದಾಗಿ ಕಾರ್ಮಿಕರು ಮತ್ತು ಉದ್ಯಮಿಗಳ ಸಹಕಾರೊದೊಂದಿಗೆ ಕ್ಷೇಮನಿಧಿ ಮಂಡಳಿಗಳು ನಡೆಸುವ ಯೋಜನೆಗಳೂ ಇವೆ.

ಈ ಯೋಜನೆಗಳಲ್ಲದೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರ ಉದ್ಧಾರಕ್ಕಾಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಅಭಿವೃದ್ಧಿ ನಿಗಮಗಳೂ ಕಾರ್ಯವೆಸಗುತ್ತಿವೆ. ಸ್ತ್ರೀಯರ ಪುರೋಗಮನಕ್ಕಾಗಿ ವನಿತಾ ಅಭಿವೃದ್ಧಿ ನಿಗಮಗಳೂ ಕಾರ್ಯವೆಸಗುತ್ತಿವೆ.

ಈ ಮೇಲಿನ ಯೋಜನೆಗಳಲ್ಲಿ ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರಗಳು ನಡೆಸುವ ದಾರಿದ್ರ್ಯ ನಿರ್ಮೂಲನ ಕಾರ್ಯಕ್ರಮದನ್ವಯ ಸಿಗುವ ಪ್ರಯೋಜನವೇ ಈ ಪಂಚಾಯ ತಿನಲ್ಲಿ ಹೆಚ್ಚಾಗಿರುವುದು, ಉಳಿದ ಕ್ಷೇಮ ಕಾರ್ಯಕ್ರಮಗಳಿಂದ ಈ ಪಂಚಾಯತಿನ ಬಹಳ ಕಡಿಮೆ ಜನರಿಗೆ ಮಾತ್ರ ಪ್ರಯೋಜನವಾಗಿದೆ. ಕ್ಷೇಮ ಕಾರ್ಯಕ್ರಮಗಳ ಬಗ್ಗೆ ತಿಳುವಳಿಕೆಯಿಲ್ಲದಿರುವುದು ಅರ್ಹತೆಯಿದ್ದವರಿಗೆ ಸೌಲಭ್ಯ ದೊರಕದೇಯಿರುವುದು, ಸಮಯಕ್ಕೆ ಸರಿಯಾಗಿ ದೊರೆಯದೇ ಇರುವುದು ಮತ್ತು ನಿಬಂಧನೆಗಳ ತೊಂದರೆ ಯಿಂದ ಪಡೆಯಲು ಸಾಧ್ಯವಾಗದೇ ಇರುವುದು, ಕ್ಷೇಮ ಕಾರ್ಯ ಕ್ರಮಗಳ ಪ್ರಯೋಜನ ಪಡೆಯುವುದರಲ್ಲಿ ಎದುರಿಸುವ ಸಮಸ್ಯೆ ಗಳಾಗಿವೆ.

ಸಾಮೂಹಿಕ ಕ್ಷೇಮ ಕಾರ್ಯಕ್ರಮದಲ್ಲಿ ಮುಖ್ಯವಾಗಿ ಕಾರ್ಯನಿರ್ವಹಿಸುತ್ತಿರುವುದು ಬ್ಲೋಕ್ ಪಂಚಾಯತ್‌ಗಳಾಗಿವೆ. ಮಂಜೇಶ್ವರ ಬ್ಲೋಕ್ ಪಂಚಾಯತಿನ ಬೆಳ್ಳೂರು ವಿಲೇಜ್ ಸರ್ಕಲ್ ಈ ಪಂಚಾಯತಿನ ಪ್ರದೇಶವಾಗಿದೆ. ಈ ವಿಲೇಜ್ ಸರ್ಕಲ್ ಮುಖಾಂತರ ದಾರಿದ್ರ್ಯ ರೇಖೆಗಿಂತ ಕೆಳಗಿನವರಿಗೆ ದೊರಕಿದ ಸಾಂಪತ್ತಿಕ ಸಹಾಯವನ್ನು ಕೆಳಗಿನ ತಖ್ತೆಯಲ್ಲಿ ತೋರಿಸಲಾಗಿದೆ.

**IRDP ಸರ್ವೆಪ್ರಕಾರ ದಾರಿದ್ರ್ಯ ನಿರ್ಮೂಲನ ರೇಖೆಗಿಂತ ಕೆಳಗಿರುವವರ ವಿವರ**

| ವಾರ್ಡ್ ನಂಬ್ರ | ಸರ್ವೆ ಪ್ರಕಾರ ಕಂಡು ಹಿಡಿದ ಒಟ್ಟು ಕುಟುಂಬಗಳ ಸಂಖ್ಯೆ | ಇದರಲ್ಲಿ S/C S/T ಕುಟುಂಬಗಳು | ಈವರೆಗೆ ಸಾಂಪತ್ತಿಕ ಸಹಾಯ ದೊರೆತ ಕುಟುಂಬಗಳು | ಇದರಲ್ಲಿ S/C S/T ಕುಟುಂಬಗಳು | ಸಹಾಯ ದೊರೆತು ದಾರಿದ್ರ್ಯ ರೇಖೆಗಿಂತ ಮೇಲೆ ಬಂದ ಕುಟುಂಬಗಳ ಸಂಖ್ಯೆ | ದಾರಿದ್ರ್ಯರೇಖೆಗಿಂತ ಕೆಳಗಿರುವ ಕುಟುಂಬಗಳು (ಸಹಾಯ ಸಿಕ್ಕಿದವರು ಸೇರಿ) |
|---|---|---|---|---|---|---|
| 1 | 2 | 3 | 4 | 5 | 6 | 7 |
| I | 104 | 64 | 12 | 9 | 7 | 97 |
| II | 135 | 54 | 14 | 10 | 10 | 125 |
| III | 146 | 48 | 16 | 8 | 12 | 134 |
| IV | 104 | 22 | 14 | 8 | 13 | 91 |
| V | 81 | 47 | 12 | 8 | 8 | 73 |
| VI | 139 | 44 | 8 | 5 | 6 | 133 |
| VII | 85 | 39 | 11 | 5 | 9 | 76 |
| VIII | 74 | 15 | 10 | 6 | 9 | 65 |
| ಮೊತ್ತ | 868 | 333 | 97 | 59 | 74 | 794 |

ಈ ಪಂಚಾಯತಿನ 868 ಕುಟುಂಬಗಳು ದಾರಿದ್ರ್ಯ ರೇಖೆಗಿಂತ ಕೆಳಗಿದ್ದು 156 ಕುಟುಂಬಗಳಿಗೆ ಮಾತ್ರ ಧನಸಹಾಯ ದೊರಕಿದೆ ಅಲ್ಲದೆ ಕೇವಲ 74 ಕುಟುಂಬಗಳಿಗೆ ಮಾತ್ರ ದಾರಿದ್ರ್ಯ ರೇಖೆಗಿಂತ ಮೇಲೆ ಬರಲು ಸಾಧ್ಯವಾಗಿದೆ ಎಂಬುದನ್ನು ತಿಳಿಯಬಹುದು.

**D. W. C. R. A. ಸಹಾಯ ಯೋಜನೆ**

ಐ. ಆರ್. ಡಿ. ಪಿ. ಸರ್ವೆ ಲಿಸ್ಟ್‌ನಲ್ಲಿರುವ ಕುಟುಂಬಗಳ ಪೈಕಿ 18 ರಿಂದ 35 ವರ್ಷ ಪ್ರಾಯದೊಳಗಿನ ಸ್ತ್ರೀಯರ ಗುಂಪುಗಳಿಗೆ ನೀಡುವ ಆದಾಯ ಯೋಜನೆ ಪ್ರಕಾರ ಈ ಪಂಚಾಯತಿನ ಎರಡು ಗುಂಪುಗಳಿಗೆ ಇದರ ಪ್ರಯೋಜನ ದೊರೆತಿದೆ.

**D. W. C. R. A. ಯೋಜನೆ ಪ್ರಕಾರ ರೂಪುಗೊಂಡ ಆದಾಯ ಯೋಜನೆ ವಿವರ**

| ವಾರ್ಡ್ | ಯೋಜನೆಯ ಹೆಸರು | ಪ್ರಾರಂಭಿಸಿದ ವರ್ಷ | ಕೆಲಸ ಮಾಡುವ ಸದಸ್ಯರ ಸಂಖ್ಯೆ | ಕಾರ್ಯದಕ್ಷತೆಯ ಬಗ್ಗೆ ವಿವರಣೆ |
|---|---|---|---|---|
| II | ಮಲ್ಲಿಗೆ ಕೃಷಿ | 1995-96 | 12 | ಉತ್ತಮ |
| V | ಜೇನು ವ್ಯವಸಾಯ | 1994-95 | 12 | ಉತ್ತಮ |

**ಟ್ರೈಸಂ :** ಈ ಯೋಜನೆಯ ಪ್ರಕಾರ ಐ. ಆರ್. ಡಿ. ಪಿ. ಸರ್ವೆ ಲಿಸ್ಟ್‌ನಲ್ಲಿರುವ ಕುಟುಂಬಗಳ 18 ರಿಂದ 35 ವರ್ಷ ಪ್ರಾಯ ಮಿತಿಯಲ್ಲಿರುವ ಯುವಕ ಯುವತಿಯರಿಗೆ ಸ್ವಯಂ ಉದ್ಯೋಗಕ್ಕಿರುವ ತರಬೇತಿ ನೀಡುವ ಕಾರ್ಯಕ್ರಮವಾಗಿದೆ. ಈ ಯೋಜನೆಯ ಮೂಲಕ ಈ ಪಂಚಾಯತಿನಲ್ಲಿ 15 ಮಂದಿಗೆ ಮಾತ್ರ ತರಬೇತಿ ದೊರೆತಿದೆ. ಇವರಲ್ಲಿ ಕೇವಲ 9 ಜನ ಸ್ವಯಂ ಉದ್ಯೋಗ ನಡೆಸುವರು. 3 ಜನರು ಇತರ ಉದ್ಯೋಗವನ್ನು ನಡೆಸುವರು. ಉಳಿದ ಮೂವರಿಗೆ ಯಾವುದೇ ಉದ್ಯೋಗವಿಲ್ಲ. 868 ಕುಟುಂಬಗಳು ಐ. ಆರ್. ಡಿ. ಪಿ. ಸರ್ವೆಲಿಸ್ಟ್‌ನಲ್ಲಿದ್ದರೂ ಕೇವಲ 15 ಜನರಿಗೆ ಈ ಯೋಜನೆಯ ಪ್ರಯೋಜನ ದೊರೆತಿದೆ. ಇದರಿಂದಾಗಿ ಯೋಜನೆಯ ಪ್ರಯೋಜನ ಈ ಪಂಚಾಯತಿಗೆ ದೊರೆತಿರುವುದು ಅತ್ಯಲ್ಪವೆಂದು ತಿಳಿಯುವುದು.

**ಟ್ರೈಸಂ ಉದ್ಯೋಗ ತರಬೇತಿ ಪಡೆದವರ ವಿವರ ತೋರಿಸುವ ತಖ್ತೆ**

| ವಾರ್ಡ್ | ತರಬೇತಿಯ ವಿವರ | ತರಬೇತಿ ಪಡೆದವರ ಸಂಖ್ಯೆ | ಉದ್ಯೋಗ ನಡೆಸುವವರ ಸಂಖ್ಯೆ | ಇತರ ಉದ್ಯೋಗದಲ್ಲಿರುವವ ಸಂಖ್ಯೆ | ಬಾಕಿ ಉಳಿದವರು |
|---|---|---|---|---|---|
| III | ಪ್ಲಾಸ್ಟಿಕ್ ವೈರ್ ಬೇಗ್ | 4 | 4 | - | - |
| IV | ಪ್ಲಾಸ್ಟಿಕ್ ವೈರ್ ಬೇಗ್ | 2 | 2 | - | - |
| V | ಪ್ಲಾಸ್ಟಿಕ್ ವೈರ್ ಬೇಗ್ | 2 | 1 | - | - |
| IV | ಪ್ಲಾಸ್ಟಿಕ್ ವಯರ್ ಬೇಗ್ | 7 | 2 | 2 | 5 |
| | ಒಟ್ಟು | 15 | 9 | 2 | 5 |

ತರಬೇತಿ ಪಡೆಯುವವರ ಸಂಖ್ಯೆಯನ್ನು ಹೆಚ್ಚಿಸಿ ಈಗ ನೀಡುತ್ತಿರುವ ಸ್ಟಯಿಪೆಂಡಿನ ಮೊತ್ತವನ್ನು ಏರಿಸಬೇಕು. ಈ ತರಬೇತಿಯು ಈ ಪಂಚಾಯತಿನಲ್ಲಿ ಸ್ವಯಂ ಉದ್ಯೋಗ ನಡೆಸಲು ಸಾಧ್ಯವಿರುವ ವಲಯಗಳಲ್ಲಾಗಿರಬೇಕು. (ಉದಾ ಪಂಪು ರಿಪೇರಿ, ಟಿ. ವಿ. ರಿಪೇರಿ, ಬೋರ್‌ವೆಲ್ ರಿಪೇರಿ, ಟೈಲರಿಂಗ್, ಡ್ರೈವಿಂಗ್)

ತರಬೇತಿ ಪಡೆದವರಿಗೆ ಸ್ವಯಂ ಉದ್ಯೋಗ ನಡೆಸಲು ಸಹಾಯ ಧನದೊಂದಿಗೆ ಸಾಲವನ್ನು ನೀಡಿ ಅವರ ಕಾರ್ಯದಕ್ಷತೆಯನ್ನು ಪರಿಶೀಲಿಸುವ ವ್ಯವಸ್ಥೆ ಮಾಡಬೇಕು.

**ಟೂಲ್ ಕಿಟ್:** ಐ. ಆರ್. ಡಿ. ಪಿ. ಸರ್ವೆಲಿಸ್ಟ್‌ನಲ್ಲಿರುವ ಗ್ರಾಮೀಣ ಕುಶಲ ಕರ್ಮಿಗಳಿಗೆ (ಕೈಕಸಬುದಾರರಿಗೆ) ಆಧುನಿಕ ಉಪಕರಣಗಳನ್ನು ನೀಡುವ ಯೋಜನೆ. ಈ ಯೋಜನೆಯ ಪ್ರಕಾರ ಈ ಪಂಚಾಯತಿಗೆ ದೊರೆತ ವಿವರವನ್ನು ಈ ಕೆಳಗಿನ ತಖ್ತೆಯಲ್ಲಿ ತೋರಿಸಲಾಗಿದೆ.

| ವಾರ್ಡು ನಂಬ್ರ | IRDP ಸರ್ವೆ ಪ್ರಕಾರ ಗ್ರಾಮೀಣ ಕೈಕಸಬುದಾರರ ಸಂಖ್ಯೆ | ಸಹಾಯ ಲಭಿಸಿದವರ ಸಂಖ್ಯೆ | ಇನ್ನು ಸಹಾಯ ಸಿಗಬೇಕಾದವರ ಸಂಖ್ಯೆ |
|---|---|---|---|
| I | 8 | 2 | 6 |
| II | 6 | 5 | 1 |
| III | 9 | 2 | 7 |
| IV | 6 | 5 | 1 |
| V | 8 | 2 | 6 |
| VI | 7 | 2 | 5 |
| VII | 2 | Nil | 2 |
| VIII | 4 | Nil | 4 |
| ಮೊತ್ತ | 50 | 18 | 32 |

**ಸಿ. ಆರ್. ಯಸ್. ಪಿ. :** ದಾರಿದ್ರ್ಯ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಕಕ್ಕುಸು ನಿರ್ಮಿಸುವುದಕ್ಕೆ ಸಹಾಯ ಧನ ನೀಡುವ ಯೋಜನೆಯಾಗಿದೆ ಈ ಯೋಜನೆಯ ಪ್ರಕಾರ ದೊರೆತ ಕಕ್ಕುಸಗಳ ವಿವರವನ್ನು ತೋರಿಸುವ ತಖ್ತೆ ಈ ಕೆಳಗಿನಂತಿದೆ

| ವಾರ್ಡು ನಂಬ್ರ | ಸಾನಿಟರಿ ಕಕ್ಕುಸುಗಳು ಇಲ್ಲದ ಮನೆಗಳ ಸಂಖ್ಯೆ IRDP ಸರ್ವೆ ಪ್ರಕಾರ | ವಿವಿಧ ಯೋಜನೆಗಳ ಮೂಲಕ ನೀಡಿದ ಕಕ್ಕುಸುಗಳ ಸಂಖ್ಯೆ | ಪೂರ್ತಿಕರಿಸಿದ ಕಕ್ಕುಸುಗಳ ಸಂಖ್ಯೆ | ಕಕ್ಕುಸುಗಳು ಅಗತ್ಯವಿರುವ ಕುಟುಂಬಗಳ ಸಂಖ್ಯೆ |
|---|---|---|---|---|
| I | 32 | 2 | 2 | 30 |
| II | 36 | 10 | 8 | 26 |
| III | 31 | 5 | 5 | 26 |
| IV | 34 | 10 | 9 | 24 |
| V | 46 | 5 | 5 | 41 |
| VI | 51 | 1 | 1 | 50 |
| VII | 45 | 3 | 2 | 42 |
| VIII | 38 | 3 | 3 | 35 |
| ಮೊತ್ತ | 313 | 39 | 35 | 274 |

ಪಂಚಾಯತಿನಲ್ಲಿರುವ ಅರ್ಹ ವ್ಯಕ್ತಿಗಳಿಗೆ ಈ ಯೋಜನೆಯ ಮೂಲಕ ಕಕ್ಕುಸುಗಳನ್ನು ನಿರ್ಮಿಸುವುದಕ್ಕೆ ಸಹಾಯಧನ ನೀಡಬೇಕು. ಮತ್ತು ಸಹಾಯಧನವನ್ನು ರೂ. 6000ಕ್ಕೆ ಹೆಚ್ಚಿಸಬೇಕು.

**ಮಿಲಿಯನ್ ವೆಲ್ :** ಇದು ಕೃಷಿ ಅಗತ್ಯಕ್ಕಾಗಿ ರಾಷ್ಟ್ರೀಯ ಮಟ್ಟದಲ್ಲ ಹಿಂದುಳಿದ ವಿಭಾಗದವರಿಗೆ ಆದ್ಯತೆ ನೀಡಿ ನಡೆಸುವ ಯೋಜನೆಯಾಗಿದೆ ಈ ಪದ್ಧತಿಯ ಪ್ರಕಾರ ನಮ್ಮ ಪಂಚಾಯತ್‌ಗೆ 14 ಮಿಲಿಯನ್ ವೆಲ್‌ಗಳು ದೊರೆತಿವೆ

**ಪೆನ್‌ಷನ್ :** ಈ ಪಂಚಾಯತು ಪ್ರದೇಶದಲ್ಲಿ ವಿವಿಧ ತರದ ಪೆನ್‌ಷನ್‌ಗಳು ದೊರಕುವ ತಖ್ತೆಯನ್ನು ಕೆಳಗೆ ಕೊಡಲಾಗಿದೆ

| ಅನಾಥರಿಗಿರುವ ಪೆನ್‌ಷನ್ | ವಿಧವಾ ಪೆನ್‌ಷನ್ | ವಿಕಲಾಂಗ ಪೆನ್‌ಷನ್ | ವಾರ್ಧಕ್ಯ ಕಾಲ ಪೆನ್‌ಷನ್ | ಕಲಾಕಾರರಿಗೂ ಸಾಹಿತ್ಯಕಾರರಿಗೂ ಪೆನ್‌ಷನ್ | ಕ್ಷಯರೋಗಿಗಳ ಪೆನ್‌ಷನ್ | ಕುಷ್ಠರೋಗಿ ಪೆನ್‌ಷನ್ | ಕ್ಯಾನ್ಸರ್ ರೋಗಿ ಪೆನ್‌ಷನ್ | ಕೃಷಿಕಾರ್ಮಿಕರಿಗಿರುವ ಪೆನ್‌ಷನ್ | ನಿರುದ್ಯೋಗಿ ಪೆನ್‌ಷನ್ |
|---|---|---|---|---|---|---|---|---|---|
| – | 44 | 10 | 33 | – | – | – | – | 77 | 7 |

**1. ವಿಧವಾ ಪೆನ್‌ಷನ್:** ಪ್ರಾಯ ಪೂರ್ತಿಯಾದ ಗಂಡು ಮಕ್ಕಳಿದ್ದರೆ ಸಿಗುವುದಿಲ್ಲ . ಆದುದರಿಂದ ಈ ನಿಯಮವನ್ನು ಬದಲಾಯಿಸಿ ವರಮಾನವನ್ನು ಹೊಂದಿಕೊಂಡು ಪೆನ್‌ಷನ್ ಸಿಗುವಂತೆ ಮಾಡಬೇಕು. ಮತ್ತು ಮೊತ್ತ ಹೆಚ್ಚಿಸಬೇಕು.

2. ವಿಕಲಾಂಗ ಪೆನ್‌ಷನು ಸಿಗುವುದಕ್ಕೆ ಬೇಕಾದ ದೃಢಪತ್ರಿಕೆಯನ್ನು ನೀಡುವ ಅಧಿಕಾರವನ್ನು ಸರಕಾರಿ ಪ್ರೈಮರಿ ಹೆಲ್ತ್ ಸೆಂಟರಿನ ವೈದ್ಯಾಧಿಕಾರಿಗಳಿಗೆ ನೀಡುವ ಮೂಲಕ ತೊಂದರೆಯನ್ನು ದೂರೀಕರಿಸ ಬಹುದು.

3. ಕೃಷಿ ಕಾರ್ಮಿಕರಿಗಿರುವ ಪೆನ್‌ಷನ್ ಪ್ರಯೋಜನವನ್ನು ಕೃಷಿ ಕಾರ್ಮಿಕರಲ್ಲದವರು ಪಡೆಯುವುದನ್ನು ಸಂಪೂರ್ಣ ನಿಷೇದಿಸಬೇಕು. ಹಾಗೂ ಅರ್ಹರಾದ ಕೃಷಿ ಕಾರ್ಮಿಕರನ್ನು ಕಂಡು ಹಿಡಿಯುವ ಅಧಿಕಾರವನ್ನು ಪಂಚಾಯತುಗಳಿಗೆ ನೀಡಬೇಕು.

4. ನಿರುದ್ಯೋಗ ವೇತನ: ನಮ್ಮ ಪಂಚಾಯತಿನಲ್ಲಿ ನಿರುದ್ಯೋಗ ವೇತನ ಪಡೆಯುವವರ ಸಂಖ್ಯೆ ಬಹಳ ಕಡಿಮೆಯಾಗಿದೆ. ಪಂಚಾಯತಿನ ಎಲ್ಲಾ ನಿರುದ್ಯೋಗಿಗಳಿಗೂ ನಿರುದ್ಯೋಗ ವೇತನ ಸಿಗಲು ಈಗಿರುವ ಕೆಲವು ನಿಬಂಧನೆಗಳನ್ನು ಸಡಿಲಗೊಳಿಸಬೇಕು. ನಿರುದ್ಯೋಗ ವೇತನಕ್ಕಾಗಿ ಅರ್ಹರಾದವರನ್ನು ಗುರುತಿಸುವ ಅಧಿಕಾರವನ್ನು ಪಂಚಾಯತುಗಳಿಗೆ ನೀಡಬೇಕು.

**ಅಂಗನವಾಡಿಗಳು :** ಗ್ರಾಮ ಅಭಿವೃದ್ಧಿ ಇಲಾಖೆಯ ಸಮಗ್ರ ಮಾತೃಶಿಶು ಸಂರಕ್ಷಣೆ ಯೋಜನೆಯಲ್ಲಿ 2 ಬಾಲವಾಡಿಗಳು ಮಾತ್ರ ಈ ಪಂಚಾಯತು ಪ್ರದೇಶದಲ್ಲದೆ. ಒಂದು 5ನೇ ವಾರ್ಡಿನ ಬೆಳ್ಳೂರಿನಲ್ಲೂ, ಇನ್ನೊಂದು 1ನೇ ವಾರ್ಡಿನಮ ಈಂದು ಮೂಲೆಯಲ್ಲಿಯೂ ಕಾರ್ಯವೆಸಗುತ್ತದೆ. ಈ ಬಾಲವಾಡಿಗಳು ಎಲ್ಲಾ ಬಗೆಯ ಪ್ರಾಥಮಿಕ ಸೌಕರ್ಯಗಳನ್ನು ಹೊಂದಿರುವುದಿಲ್ಲ.

**ಸಮಸ್ಯೆಗಳು :**

1. ಅರ್ಹತೆಯಿದ್ದವರಿಗೆ ಎಲ್ಲಾ ಪೆನ್‌ಷನ್ ಯೋಜನೆಗಳ ಪ್ರಯೋಜನ ದೊರೆಯುವುದಿಲ್ಲ.
2. ಅಂಗನವಾಡಿಗಳಿಲ್ಲ
3. ಎಲ್ಲಾ ವಾರ್ಡುಗಳಲ್ಲಿಯೂ ಮಹಾಳಾ ಸಮಾಜಗಳಿಲ್ಲ.
4. ಬಾಲವಾಡಿಗಳಲ್ಲಿ ಪ್ರಾಥಮಿಕ ಸೌಕರ್ಯಗಳಿಲ್ಲ.

ಸಾಧ್ಯತೆಗಳು.

1. ಪೆನ್‌ಷನ್ ಮೊಬಲಗನ್ನು ಹೆಚ್ಚಿಸಬೇಕು. ಮತ್ತು ಎಲ್ಲಾ ಪೆನ್‌ಷನ್‌ಗಳ ಫಲಾನುಭವಿಗಳನ್ನು ಕಂಡುಹಿಡಿಯುವ ಅಧಿಕಾರ ಪಂಚಾಯತಿಗೆ ನೀಡಬೇಕು.
2. ಪಂಚಾಯತು ಪ್ರದೇಶದಲ್ಲಿ ನೂತನ ಅಂಗನವಾಡಿಗಳನ್ನು ಆರಂಭಿಸ ಬೇಕು.
3. ಪಂಚಾಯತಿನ ಎಲ್ಲಾ ಮನೆಗಳಲ್ಲಿಯೂ ಹೊಗೆರಹಿತ ಒಲೆಯನ್ನು ಸ್ಥಾಪಿಸಬೇಕು.
4. ನಿರುದ್ಯೋಗ ನಿರ್ಮೂಲನಕ್ಕಾಗಿ ಪಂಚಾಯತಿನ ವಿವಿಧಭಾಗಗಳಲ್ಲಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಬೇಕು.
5. ಪಂಚಾಯತಿನ ಸಾಂಸ್ಕೃತಿಕ ಸಂಘಗಳನ್ನು ಒಂದುಗೂಡಿಸಲು ಒಂದು ಸಾಂಸ್ಕೃತಿಕ ಕೇಂದ್ರವನ್ನು ಸ್ಥಾಪಿಸಬೇಕು.
6. ಬಾಲವಾಡಿ, ನರ್ಸರಿಗಳ ನೌಕರರನ್ನು ಪ್ರೀ ಪ್ರೈಮರಿ ಟೀಚರುಗಳನ್ನಾಗಿ ಅಂಗೀಕರಿಸಬೇಕು. ಮತ್ತು ಅವರ ಭತ್ತೆಯನ್ನು ಹೆಚ್ಚಿಸಬೇಕು.
7. ಮಹಿಳಾ ಸಮಾಜಗಳನ್ನು ಎಲ್ಲಾ ವಾರ್ಡುಗಳಲ್ಲಿಯೂ ರೂಪೀಕರಿಸ ಬೇಕು.
8. ಎಲ್ಲಾ ರಂಗದ ಕಾರ್ಮಿಕರನ್ನು ಆಯಾ ರಂಗದ ಕ್ಷೇಮನಿಧಿಗಳಲ್ಲಿ ಸದಸ್ಯರಾಗುವಂತೆ ಮಾಡಬೇಕು.

**ಸಾರ್ವಜನಿಕ ವಿತರಣಾ ಕೇಂದ್ರ:**

ಬೆಳ್ಳೂರು ಗ್ರಾಮ ಪಂಚಾಯತಿನಲ್ಲಿ ನಾಲ್ಕು ರೇಶನ್ ಅಂಗಡಿಗಳಿವೆ ರೇಶನ್ ಕಾರ್ಡಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪಂಚಾಯತು ಮಟ್ಟದಲ್ಲಿ ಪರಿಹರಿಸಲು ಬೇಕಾದ ವ್ಯವಸ್ಥೆ ಮಾಡಬೇಕು. ರೇಶನ್ ಅಂಗಡಿಗಳಿಗೆ ಬೇಕಾದ ವಿತರಣಾ ವಸ್ತುಗಳನ್ನು ಸಮಯಕ್ಕೆ ಸರಿಯಾಗಿ ಸಾರ್ವಜನಿಕ ವಿತರಣಾ ಇಲಾಖೆಯು ಪೂರೈಸಬೇಕು. ಮತ್ತು ವಿತರಣೆಯಲ್ಲಾಗುವ ಅವ್ಯವಸ್ಥೆಗಳನ್ನು ಪರಿಹರಿಸಬೇಕು. ನಿತ್ಯೋಪಯೋಗಿ ವಸ್ತುಗಳನ್ನು ರೇಶನ್ ಅಂಗಡಿ ಮೂಲಕ ನ್ಯಾಯ ಬೆಲೆಗೆ ಸಾರ್ವಜನಿಕರಿಗೆ ಒದಗಿಸುವ ವ್ಯವಸ್ತೆ ಮಾಡಬೇಕು. ಸಾರ್ವಜನಿಕ ವಿತರಣಾ ಕೇಂದ್ರಗಳನ್ನು ಸಹಕಾರಿ ಸಂಸ್ಥೆಗಳಿಗೆ ನೀಡಲು ವ್ಯವಸ್ಥೆ ಮಾಡಬೇಕು.

###

# 14

# ಸಂಸ್ಕೃತಿ

ಈ ಎಲ್ಲಾ ಉತ್ಸವಗಳು, ಭೂತಾರಾಧನೆಗಳು, ಜನರನ್ನು ಒಟ್ಟು ಸೇರಿಸುವುದನ್ನು ಕಾಣಬಹುದು ಮಾತ್ರವಲ್ಲ ಇಲ್ಲಿ ವಿಷ್ಣುಮೂರ್ತಿ, ವಯನಾಟ್ ಕುಲವನ್, ಬೈನಾಡಿ, ಹುಲಿಭೂತ, ರಕ್ತೇಶ್ವರಿ, ಧೂಮಾವತಿ, ಬೀರ್ನಾಳ್ವ, ಪಂಜುರ್ಲಿ ಕೊರತ್ತಿ, ಕಲ್ಲುರ್ಟಿ, ಗುಳಿಗ, ರಕ್ತಚಾಮುಂಡಿ, ಭೈರವ, ಮೂಕಾಂಬಿಕ ಗುಳಿಗ, ಕೊರಗ ತನಿಯ, ಇರ್ವರ್ ದೈವರ್‌ಕ್ಕಳ್, ಮೊದಲಾದ ಮಲೆಯಾಳಿ ಹಾಗೂ ತುಳು ಪರಂಪರೆಯ ಭೂತಗಳನ್ನು ಕಾಣಲು ಸಾಧ್ಯವಿದೆ. ವಿವಿಧ ಭೂತಗಳನ್ನು ಕಟ್ಟುವ ಪಂಗಡಗಳೂ, ಅದಕ್ಕೆ ಸಹಾಯಕರಾಗುವ ಪಂಗಡದ ಜನರು ಒಟ್ಟು ಸೇರಿ ನೃತ್ಯ ನೇಮಗಳನ್ನು ನಡೆಸಿ ಕೊಡುತ್ತಾರೆ. ಉತ್ಸವಗಳಲ್ಲಿ ಯಾವುದೇ ತಾರತಮ್ಯವಿಲ್ಲದೆ ಎಲ್ಲಾ ವರ್ಗದವರೂ ದೈವ ಶಕ್ತಿಯನ್ನು ನಂಬುತ್ತಾರೆ ಮತ್ತು ಆರಾಧಿಸುತ್ತಾರೆ

ಭೂತಾರಾಧನೆಗಳ ಬಗ್ಗೆ ಗಮನಿಸಿದರೆ ಇಲ್ಲಿನ ಜನರು ಪರಂಪರಾಗತ ದೈವ ವಿಶ್ವಾಸಿಗಳು, ಸತ್ಯ, ನ್ಯಾಯ, ಧರ್ಮಪಾಲನೆಗಾಗಿ ನಿರಂತರವಾಗಿ ಶ್ರಮಿಸುತ್ತಿದ್ದರೆಂಬುದನ್ನು ತಿಳಿದುಕೊಳ್ಳಬಹುದು. ಮಾತ್ರವಲ್ಲ ಎಲ್ಲಾ ಸಮುದಾಯದ ಅನ್ಯೋನ್ಯತೆ, ಸೌಹಾರ್ದತೆ, ಒಗ್ಗಟ್ಟು ಪ್ರತಿಬಿಂಬಿಸುತ್ತದೆ.

ಅಲ್ಲಲ್ಲಿ ಕಂಬಳ ಕೋಣಗಳ ಓಟದ ಸ್ಪರ್ಧೆಗಳು ನಡೆಯುತ್ತಿತ್ತು. ಆದರೆ ಸ್ಥಳಾವಕಾಶದ ಕೊರತೆ, ಪ್ರೋತ್ಸಾಹಗಳ ಕೊರತೆಯಿಂದಾಗಿ, ಈ ಸ್ಪರ್ಧೆಗಳು ಇತ್ತೀಚೆಗೆ ಮಾಸಿ ಹೋಗುತ್ತಿವೆ. ಅಂತೆಯೇ ವರ್ಷಾವಧಿ ಉತ್ಸವಗಳು ಕಳೆದ ಬಳಿಕ ಕ್ಷೇತ್ರಗಳ ವಠಾರದಲ್ಲಿ ನಡೆದುಕೊಂಡು ಬರುತ್ತಿದ್ದ ಕೋಳಿ ಅಂಕವು ಜನರಿಗೆ ಒಂದು ರೀತಿಯ ಮನಃ ಶಾಂತಿಯನ್ನು ನೀಡುತ್ತಿತ್ತು. ಆದರೆ ಈಗ ಈ ಕಾರ್ಯಕ್ರಮ ಸಾಂಕೇತಿಕವಾಗಿ ಉಳಿದಿದೆ.

ವಣ್ಣನ್, ಪರವ, ನಲ್ಕೆದಾಯ ಕೋಪಾಳ ಮಲಯ ಮೊದಲಾದ ಪಂಗಡದ ಜನರು ಭೂತ ಕಟ್ಟುತ್ತಾರೆ. ವಿವಿಧ ಪಂಗಡಗಳಿಗೆ ಅನುಸರಿಸಿ ಭೂತಗಳ ಕಟ್ಟುಪಾಡುಗಳಲ್ಲಿ ನೇಮನೃತ್ಯಗಳಲ್ಲಿ ಬದಲಾವಣೆಯಿದೆ. ಪಂಚವಾದ್ಯಗಳು, ಚೆಂಡೆ, ಡೋಲು, ಎಂಬ ವಾದ್ಯ ಮೇಳಗಳನ್ನು ಇದರಲ್ಲಿ ಕಾಣಬಹುದಾಗಿದೆ. ಭೂತ ಕಟ್ಟಿದ ವ್ಯಕ್ತಿ ಆಯಾ ಭಾಷೆಗಳಿಗೆ ಹೊಂದಿಕೊಂಡು ವಿವಿಧ ಪಂಗಡಗಳನ್ನು ಗಂಧ ಪ್ರಸಾದ ಕೊಡುವಾಗಲೂ ಅಭಯ ಕೊಡುವಾಗಲೂ ಪರಂಪರೆಯ ಪಂಗಡದ ಹೆಸರನ್ನೆತ್ತಿ ಕರೆಯುವ

ಬೆಳ್ಳೂರು ಗ್ರಾಮ ಪಂಚಾಯತು ಪ್ರದೇಶವು ಉತ್ತರ ಕೇರಳದ ಜಿಲ್ಲೆಯಾದ ಕಾಸರಗೋಡು ಜಿಲ್ಲೆಯ ಒಂದು ಭಾಗವಾಗಿದೆ. ಇದು ನೆಟ್ಟಣಿಗೆ ಮತ್ತು ಬೆಳ್ಳೂರು ಎಂಬ ಗ್ರಾಮಗಳ ಸಮ್ಮಿಲನವಾಗಿದೆ. ನಿಟ್ಟೋಣಿ ಎಂಬ ಪರಿಶಿಷ್ಟ ವರ್ಗದ ವ್ಯಕ್ತಿಗೆ ಸ್ಥಳೀಯ ಶ್ರೀ ಕ್ಷೇತ್ರದ ಶಿವಲಿಂಗ ಮೊತ್ತ ಮೊದಲಾಗಿ ಕಾಣ ಸಿಕ್ಕಿದುದರಿಂದ ನಿಟ್ಟೋಣಿಗೆ ಎಂಬ ಹೆಸರು ಈ ಪ್ರದೇಶಕ್ಕೆ ಬಂತೆಂದೂ, ಕ್ರಮೇಣ ನೆಟ್ಟಣಿಗೆ ಎಂದು ಬದಲಾವಣೆಯಾಯಿತೆಂದು ಜನ ಪ್ರತೀತಿ. ಆದರೆ ಬೆಳ್ಳೂರು ಎಂಬ ಹೆಸರು ಹೇಗೆ ಪ್ರಚಲಿತವಾಯಿತೆಂಬುದರ ಬಗ್ಗೆ ಯಾವುದೇ ಪುರಾವೆಗಳಿಲ್ಲ. ಏನೇ ಇರಲಿ ಈ ಗ್ರಾಮಗಳು ಸೇರಿದ ಗ್ರಾಮ ಪಂಚಾಯತಿನ ಜನರು ಎಲ್ಲಾ ವಿಚಾರಗಳಲ್ಲೂ ಅನ್ಯೋನ್ಯರಾಗಿ ಹಿಂದಿನಿಂದಲೇ ಬಾಳಿ ಬದುಕಿದ ಪರಂಪರೆ ಇಲ್ಲಿಯದ್ದಾಗಿದೆ.

ನೆಟ್ಟಣಿಗೆಯಲ್ಲಿ ಶ್ರೀ ಮಹಾಲಿಂಗೇಶ್ವರನು ಪ್ರಧಾನವಾಗಿ ಆರಾಧಿಸಲ್ಪಡುವುದಾದರೆ ಬೆಳ್ಳೂರಿನಲ್ಲಿ ಶ್ರೀ ಗೋಪಾಲಕೃಷ್ಣನು ಪ್ರಧಾನ ಆರಾಧನಾ ಮೂರ್ತಿಯಾಗಿದ್ದನು. ಆದರೆ ಇತ್ತೀಚೆಗಿನ ಜೋತಿಷ್ಯ ಜಿಜ್ಞಾಸೆಯಂತೆ ಬೆಳ್ಳೂರಿನಲ್ಲಿ ಶ್ರೀ ಗೋಪಾಲಕೃಷ್ಣನು ಪ್ರಧಾನ ಆರಾಧ್ಯದೇವರಲ್ಲವೆಂದೂ, ಶ್ರೀ ಮಹಾವಿಷ್ಣುವೇ ಇಲ್ಲಿಯ ಪ್ರಧಾನ ದೇವರೆಂದೂ ತಿಳಿದುಬಂತು. ಅಂದಿನಿಂದ ಈ ಕ್ಷೇತ್ರಕ್ಕೆ ಶ್ರೀ ಮಹಾವಿಷ್ಣು ಗೋಪಾಲಕೃಷ್ಣಕ್ಷೇತ್ರವೆಂದು ಪುನರ್ನಾಮಕರಣವಾಗಿ ಜೀರ್ಣೋದ್ಧಾರ ಕಾರ್ಯ ಆರಂಭಗೊಂಡಿತು. ಇದರಂತೆ ಈ ಪಂಚಾಯತಿನ ಪನೆಯಾಲದಲ್ಲಿರುವ ಶ್ರೀ ಶಾಸ್ತಾರ ದೇವಾಲಯವೂ, ಕಲ್ಲೇರಿಮೂಲೆ ಎಂಬಲ್ಲಿರುವ ಶ್ರೀ ವಿಷ್ಣು ಮೂರ್ತಿ ದೇವಾಲಯಗಳು ಖಾಸಗಿ ಒಡೆತನಕ್ಕೆ ಸಂಬಂಧಿಸಿದ್ದಾಗಿವೆ. ಏನಿದ್ದರೂ ಈ ಕ್ಷೇತ್ರಗಳಲ್ಲಿನ ವರ್ಷಕ್ಕೊಮ್ಮೆ ನಡೆಯುವ ವಿಶೇಷ ಉತ್ಸವದಲ್ಲಿ ಎಲ್ಲಾ ಭಕ್ತಾದಿಗಳು ಪಾಲ್ಗೊಳ್ಳುತ್ತಾರೆ.

ದೇವತಾರಾಧನೆಯ ಹೊರತು ಈ ಪಂಚಾಯತಿನ ಹಲವು ಕಡೆಗಳಲ್ಲಿ ಭೂತಾರಾಧನೆಯ ಕ್ಷೇತ್ರಗಳನ್ನು ಕಾಣಬಹುದು. ಹೆಚ್ಚಿನೆಲ್ಲಾ ಭೂತಾರಾಧನೆಯ ಕ್ಷೇತ್ರಗಳು ಖಾಸಗಿ ಒಡೆತನಕ್ಕೆ ಸಂಬಂಧಿಸಿದ್ದು ವರ್ಷಕ್ಕೊಮ್ಮೆ ನಡೆಯುವ ಕೋಲ, ಒತ್ತೆಕೋಲ, ತಂಬಿಲ, ಮೊದಲಾದ ಭೂತಾರಾಧನೆಯ ಕಾರ್ಯದಲ್ಲಿ ಊರ, ಪರವೂರ, ಭಕ್ತಾದಿಗಳು ಪಾಲ್ಗೊಂಡು ತಮ್ಮ ಮನೋಭಿಲಾಷೆಯನ್ನು ಪೂರೈಸಿಕೊಳ್ಳುತ್ತಾರೆ. ಇಂತಹ ಕಾರ್ಯಕ್ರಮಗಳಲ್ಲಿ ಕುಳದ ಪಾರೆ ಎಂಬಲ್ಲಿನ ನಡೆಯುವ ವಿಷ್ಣುಮೂರ್ತಿ ದೈವದ ಒತ್ತೆ ಕೋಲ, ಎಡಮೊಗರು, ನೆಟ್ಟಣಿಗೆ ಮತ್ತು ಕಿನ್ನಿಂಗಾರು ಪರಿಸರಗಳಲ್ಲಿ ನಡೆಯುವ ಒತ್ತೆಕೋಲ ಇಲ್ಲವೇ ಬೈಲಕೋಲ ಎನ್ನುವ ಉತ್ಸವವೂ ನಡೆಯುತ್ತದೆ. ಮುಕ್ಕುಂಜ ಎಂಬಲ್ಲಿ ವೂಮಾಣಿ ಕಿನ್ನಿಮಾಣಿ ಉತ್ಸವವೂ ಕೆಲವು ವರ್ಷಗಳ ಹಿಂದಿನಿಂದಲೇ ನಡೆದುಕೊಂಡು ಬರುತ್ತಿತ್ತು. ಆದರೆ ಇತ್ತೀಚಿನ ಕೆಲವು ವರ್ಷಗಳಿಂದ ಈ ಉತ್ಸವವು ನಿಂತು ಹೋಗಿರುವುದು.

ರೂಢಿಯು ಇಂದಿಗೂ ಬಳಕೆಯಲ್ಲಿದೆ. ಒಟ್ಟಿನಲ್ಲಿ ಎಲ್ಲಾ ಪಂಗಡಗಳ ಗೌರವ ಹಾಗೂ ಸಮನ್ವಯದ ಪ್ರತೀಕವೂ ಇಲ್ಲಿ ಎದ್ದು ಕಾಣುತ್ತಿದೆ. ಹಿಂದುಗಳಂತೆ ಮುಸಲ್ಮಾನರೂ ಊರುಸು, ನೇರ್ಚೆ, ಮೊದಲಾದ ಧಾರ್ಮಿಕ ವಿಧಿಗಳನ್ನು ಆಚರಿಸುತ್ತಾರೆ. ಮತೀಯವಾಗಿ ಯಾವುದೇ ಆಚರಣೆಗಳನ್ನು ಮಾಡುವುದಿದ್ದರೂ, ಸಾಮಾಜಿಕವಾಗಿ ಎಲ್ಲಾ ಮತ ಪಂಗಡದವರು ಒಗ್ಗಟ್ಟಾಗಿ ಸಾಮಾಜಿಕ ಸಾಮರಸ್ಯವನ್ನು ಕಾಯ್ದುಕೊಂಡಿರುವುದನ್ನು ಕಾಣಬಹುದು. ಕೇವಲ ಬೆರಳೆಣಿಕೆಯಷ್ಟು ಕ್ರೈಸ್ತ ಕುಟುಂಬಗಳನ್ನು ಮಾತ್ರ ಈ ಪಂಚಾಯತಿನಲ್ಲಿ ಗುರುತಿಸಬಹುದು.

ದೇವಸ್ಥಾನಗಳ ಹೊರತಾಗಿ ಇನ್ನು ಕೆಲವೆಡೆ ಭಜನಾ ಮಂದಿರಗಳು, ಸೇವಾಸಮಿತಿಗಳು ಧಾರ್ಮಿಕ ಕಾರ್ಯಗಳಲ್ಲಿ ಮುತುವರ್ಜಿ ವಹಿಸುವುದನ್ನು ಕಾಣಬಹುದು. ಇಂತಹ ಸಮಿತಿಗಳು, ಸಾರ್ವಜನಿಕ ಸತ್ಯನಾರಾಯಣ ಪೂಜೆ, ಸಾರ್ವಜನಿಕ ಗಣೇಶೋತ್ಸವ, ಶ್ರೀಕೃಷ್ಣ ಜನ್ಮಾಷ್ಟಮಿ, ಶಾರದೋತ್ಸವ, ಮುಂತಾದ ಸಾರ್ವಜನಿಕ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜನರಲ್ಲಿ ಧಾರ್ಮಿಕ ಸಂಘಟನೆಯೊಂದಿಗೆ, ಏಕತಾ ಮನೋಭಾವವನ್ನು ಮೂಡಿಸುತ್ತವೆ.

ಸಾರ್ವಜನಿಕ ಸೇವೆಗಳಾದ ರಕ್ತದಾನ ಶಿಬಿರ, ಆರೋಗ್ಯ ತಪಾಸಣಾ ಶಿಬಿರ, ಶ್ರಮದಾನ, ಮಾಹಿತಿ ಶಿಬಿರ, ಮೊದಲಾದ ಕಾರ್ಯ ಚಟುವಟಿಕೆಗಳಿಂದ ಶ್ಲಾಘನೆಗೆ ಪಾತ್ರವಾಗಿವೆ. ಈ ಪಂಚಾಯತಿಗೆ ನಾಲ್ಕೈದು ವರ್ಷಗಳ ಹಿಂದೆ ಸರಕಾರದ ವತಿಯಿಂದ ಈಗಿನ ಪಂಚಾಯತು ಕಛೇರಿ ಬಳಿ ಸಾರ್ವಜನಿಕ ಪುಸ್ತಕ ಭಂಡಾರ ನಿರ್ಮಾಣಕ್ಕಾಗಿ ಶಂಕು ಸ್ಥಾಪನೆಯಾಗಿ ಈಗಲೂ ಓದುಗರ ಆಶೆಯು ಕಾಮನ ಬಿಲ್ಲಾಗಿ ನಿಂತಿದೆ. ಸದ್ಯದ ಸ್ಥಿತಿಯಲ್ಲಿ ನಮ್ಮ ಪಂಚಾಯತಿಗೆ ಸಂಬಂಧಿಸಿದಂತೆ ಯಾವುದೇ ಪುಸ್ತಕ ಭಂಡಾರ ಯಾ ವಾಚನಾಲಯಗಳು ಇಲ್ಲವೆನ್ನಬಹುದು.

ಕೆಲವೊಂದು ದಿನಪತ್ರಿಕೆಗಳನ್ನು ವಾರ ಪತ್ರಿಕೆಗಳನ್ನು ಹಾಗೂ ಮಾಸಿಕ ಪತ್ರಿಕೆಗಳನ್ನು ಮಾರುವ ಏಜೆಂಟರು ಇಲ್ಲಿರುವುದರಿಂದ ಕನ್ನಡ, ಮಲೆಯಾಳ, ಹಾಗು ಇಂಗ್ಲೀಷ್ ಪತ್ರಿಕೆಗಳನ್ನು ಕಾಣಲು ಸಾಧ್ಯವಿದೆ. ಇಲ್ಲಿ ಓದುಗರು ಕನ್ನಡಿಗರೇ ಹೆಚ್ಚಾದ ಕಾರಣ ಕನ್ನಡ ಪತ್ರಿಕೆಗಳ ಬೇಡಿಕೆ ಹೆಚ್ಚು. ಕೃಷಿ ವಾರ್ತೆಗೆ ಸಂಬಂಧಿಸಿದಂತೆ ಅಡಿಕೆ ಪತ್ರಿಕೆ ಎಂಬ ಕನ್ನಡ ಮಾಸಿಕವು ಕೆಲವೇ ಕೃಷಿಕರ ಕೈ ಸೇರುವುದು ಗಮನಾರ್ಹವಾಗಿದೆ.

ಜಾನಪದ ಕಲೆಗಳಿಗೂ ಈ ಪಂಚಾಯತಿನಲ್ಲಿ ಮಹತ್ವದ ಸ್ಥಾನವಿದೆ. ಭೂತಾರಾಧನೆಯಲ್ಲಿ ತುಳು ಭಾಷೆಯ ಕಥಾ ಸಂದಿಗೆ ಪಾಡ್ದನ ಎಂದೂ ಮಲಯಾಳ ಕಥಾ ಸಂದಿಗೆ ತೋಟಂ ಎಂದೂ ಕರೆಯುತ್ತಾರೆ. ಅಂತೆಯೇ ಕನ್ಯಾಪು, ಮರ್ದ, ಜೋಗಿ, ಬೇಡವ, ಕಳಂಜ ಮೊದಲಾದ ಜಾನಪದ ಶೈಲಿಯ ವೇಷಗಳು ಕೆಲವು ನಿಯಮಿತ ಸಮಯಗಳಲ್ಲಿ ಮನೆ ಮನೆಗೆ ಬಂದು ಕುಣಿದು ಮನೆಯವರು ಕೊಡುವ ಹಣ ಯಾ ವಸ್ತು ರೂಪದ ಕಾಣಿಕೆಗಳನ್ನು ಸ್ವೀಕರಿಸುವ ಪದ್ಧತಿ ಇತ್ತು. ಇಂತಲ್ಲಿ ಇಂದು ಕೇವಲ ಆಷಾಡ (ಆಟಿ) ತಿಂಗಳಲ್ಲಿ ಬರುವ ಆಟಿಕಳೆಂಜನನ್ನು ಮಾತ್ರ ಕಾಣಬಹುದಾಗಿದೆ. ಇದರಂತೆ ಯಕ್ಷಗಾನ ವೇಷಧಾರಿಗಳು ಮಳೆಗಾಲದಲ್ಲಿ ರಾತ್ರಿ ವೇಳೆ ಮನೆ ಮನೆಗಳಿಗೆ ತೆರಳಿ ಒಂದೆರಡು ಹಾಡುಗಳಿಗೆ ಕುಣಿತ, ಅರ್ಥ ಹೇಳುವ ಪರಿಪಾಠವಿತ್ತು. ಆದರೆ ಕೆಲವಾರು ವರ್ಷಗಳಿಂದ ಈ ಸಂಪ್ರದಾಯವು ಕಣ್ಮರೆಯಾಗಿದೆ.

ಆಧುನಿಕ ಜಗತ್ತಿನಲ್ಲಿ ಪ್ರಸಾರ ಮಾಧ್ಯಮಗಳ ಜಾಲವು ಬಹಳ ವಿಶಾಲವಾದುದು. ಪತ್ರಿಕೆಗಳು, ರೇಡಿಯೋಗಳಂತೆಯೇ ದೂರದರ್ಶನವು ತನ್ನ ಪಾತ್ರವನ್ನು ಉಳಿದೆಲ್ಲವುಗಳಿಗಿಂದಲೂ ಎತ್ತಿ ಹಿಡಿದಿದೆ. ದೃಶ್ಯ ಹಾಗೂ ಶ್ರವಣ ಮಾಧ್ಯಮಗಳೆರಡನ್ನೂ ಒಟ್ಟಿಗೆ ಒದಗಿಸುವ ಈ ವೈಜ್ಞಾನಿಕ ಚಮತ್ಕಾರದ ಯಂತ್ರವು ಅಬಾಲವೃದ್ಧರಾದಿಯಾಗಿ ಎಲ್ಲರನ್ನೂ ಸೂರೆಗೊಂಡಿದೆ. ಬೆಳ್ಳೂರು ಪಂಚಾಯತಿನಲ್ಲಿ ಇತ್ತೀಚಿನ ವರ್ಷಗಳಲ್ಲಿ ಮೂರು ಸಾರ್ವಜನಿಕ ದೂರದರ್ಶನ ಯಂತ್ರಗಳು ನೆಲೆಪಡೆದಿವೆ. ಅಂತೆಯೇ ಸುಮಾರು ಇಪ್ಪತ್ತೈದರಿಂದ ನಲ್ವತ್ತು ಮನೆಗಳಲ್ಲಿ ಖಾಸಗೀ ಟೆಲಿವಿಷನುಗಳನ್ನು ಕಾಣಬಹುದು.

**ಸಮಸ್ಯೆಗಳು**

1 ಜೀರ್ಣಸ್ಥಿತಿಯಲ್ಲಿರುವ ಪನೆಯಾಲ ಮತ್ತು ಕಲ್ಲೇರಿ ಮೂಲೆಯ ದೇವಸ್ಥಾನಗಳು. (ಖಾಸಗಿ)

2 ಜೀರ್ಣ ಸ್ಥಿತಿಯಲ್ಲಿರುವ ಭೂತಸ್ಥಾನಗಳು ಅಂದಾಜು ಸುಮಾರು 25

3 ಭೂತಗಳ ಆರಾಧನೆಯನ್ನು ನಿಯಮಿತವಾಗಿ, ವಾರ್ಷಿಕ ದೈವಾರ್ಷಿಕವಾಗಿ ಮಾಡುತ್ತಾ ಬಂದ ಕುಟುಂಬಗಳಿಗೆ ಭೂ ಮಸೂದೆಯ ಕಾರಣದಿಂದ ಹಾಗೂ ಆಸ್ತಿ ಪಾಲಾಗುವಿಕೆಯ ಕಾರಣದಿಂದ ಆದಾಯ ಕಡಿಮೆಯಾಗಿ ಭೂತಾರಾಧನೆಯ ನಿಯತವಾದ ನಿರ್ವಹಣೆಗೆ ಅಡಚಣೆ.

4 ಭೂತ ಕಟ್ಟುವ ಜನಾಂಗದವರ ಜಾನಪದ ಕಲೆಗಳಾದ ಕಳಂಜ ಜೋಗಿ, ಬೇಡ, ಇತ್ಯಾದಿಗಳಿಗೆ ಪ್ರೋತ್ಸಾಹದ ಕೊರತೆ.

5 ಗದ್ದೆಗಳು ಅಡಿಕೆ ತೋಟಗಳಾಗಿ ಮಾರ್ಪಟ್ಟಾಗ ಸಹಜವಾಗಿ ಆ ಸಂಬಂಧದ ಭೂತದ ಕೋಲಗಳ ಸ್ಥಗಿತ.

6 ಗದ್ದೆ ಬೇಸಾಯವು ಕಡಿಮೆಯಾಗುತ್ತಾ ಬಂದಂತೆ ಆ ಕೃಷಿ ಸಂದರ್ಭದಲ್ಲಿ ಬೇರೆ ಬೇರೆ ಕೆಲಸದ ಸಂದರ್ಭದಲ್ಲಿ ಹಾಡುವ ಜಾನಪದ ಹಾಡುಗಳು ಕಣ್ಮರೆ

7 ಜಾನಪದ ಕಲೆಗಳಾದ ಸಂಧಿ ಪಾಡ್ದನ ಲಾವಣಿ, ಕಥೆ ಮುಂತಾದುವುಗಳು ಕಣ್ಮರೆಯಾಗುತ್ತವೆ.

8 ಭೂತಾರಾಧನೆಯ ಸಂಪ್ರದಾಯವು ಕಡಿಮೆಯಾಗುತ್ತಿರುವಂತೆಯೇ ಆ ಸಂಬಂಧವಾಗಿ ಬಳಸುವ ಅಡಿಕೆ ಹಾಳೆಯಿಂದ ತಯಾರಿಸುವ ಮುಖವಾಡ, ತೆಂಗಿನ ಗರಿಗಳಿಂದ ಭೂತವನ್ನು ಅಲಂಕರಿಸುವ ವಿಧಿ ವಿಧಾನಗಳ ಕುಶಲತೆಯಲ್ಲಿ ನ್ಯೂನ್ಯತೆ.

9 ಯಕ್ಷಗಾನ ಅರ್ಥಗಾರಿಕೆ, ಬಣ್ಣಗಾರಿಕೆ, ವೇಷಗಾರಿಕೆ, ನೃತ್ಯ ಹಿಮ್ಮೇಳ ಕಲಾವಿದರಲ್ಲಿನ ಕಲಾಪಟುತ್ವ ಮೊದಲಾದ ಯಕ್ಷ ಗಾನ ಸಂಬಂಧಿ ಕಲೆಗಳು ಕ್ಷೀಣಿಸುತ್ತಿರುವುದು.

10 ಸಂಗೀತ, ಲಘುಸಂಗೀತ, ಮೊದಲಾದವುಗಳ ಹಾಡುಗಾರಿಕೆಯ ಕೌಶಲ್ಯ ನಾಟಕದಲ್ಲಿನ ಅಭಿನಯ ಕಲೆ, ದುರ್ಬಲವಾಗುತ್ತಾ ಬರುವುದು.

11 ಚಿತ್ರಕಲೆ, ಜಲವರ್ಣ, ಆವೆಮಣ್ಣಿನ ರಚನೆ ಮೊದಲಾದ ರಚನಾ ಕೌಶಲ್ಯಗಳ ನೈಪುಣ್ಯ ಕಡಿಮೆಯಾಗುತ್ತಾ ಬಂದಿರುವುದು.

12 ವಿವಿಧ ತರದ ಕ್ರೀಡೆಗಳು, ಓಟಗಳು, ಮೊದಲಾದ ಕ್ರೀಡಾ ಸಂಬಂಧೀ ಚಟುವಟಿಕೆಗಳಲ್ಲಿ ತರಬೇತಿಯ ಕೊರತೆ.

13 ಕ್ರೀಡೆಗಳು ಓಟಗಳ ಸ್ಪರ್ಧೆಗಳನ್ನು ಏರ್ಪಡಿಸಲು ಸರಿಯಾದ ಆಟದ ಬಯಲಿನ ಕೊರತೆ.

14 ದೈಹಿಕ ಆರೋಗ್ಯವನ್ನು ಕಾಪಾಡುವ ಈಜು ಕಲೆಗೆ ಪ್ರೋತ್ಸಾಹ ನೀಡಲು ಅವಶ್ಯವಾದ ಈಜುಕೊಳದ ಅಭಾವ.

15 ಎಲ್ಲಾ ಮನೆಗಳಲ್ಲಿಯೂ ರೇಡಿಯೋ ಇಲ್ಲ.

16 ಶಾರೀರಿಕ ಆರೋಗ್ಯ ವರ್ಧನೆಗೆ ಅನುಕೂಲಕರವಾದ ಕುಸ್ತಿ, ಗರಡಿ, ಯೋಗ, ಮೊದಲಾದ ಚಟುವಟಿಕೆಗಳನ್ನು ಜರಗಿಸುವ ಗರಡಿಶಾಲೆ ಯಾ ಯೋಗಕೇಂದ್ರ.

**ಸಾಧ್ಯತೆಗಳು.**

1 ಈಗಿರುವ ದೇವಸ್ವಂ ಬೋರ್ಡಿನ ಕಾರ್ಯಕ್ಷೇತ್ರವನ್ನು ವಿಸ್ತರಿಸಬೇಕು. ಜೀರ್ಣಾವಸ್ಥೆಯಲ್ಲಿರುವ ದೇವಾಲಯಗಳಿಗೆ ಅದರಿಂದ ಧನ ಸಹಾಯ ಒದಗುವಂತೆ ಮಾಡಿಸುವುದು.

2 ಭೂತಸ್ಥಾನ ಜೀರ್ಣೋದ್ಧಾರಕ್ಕೂ ದೇವಸ್ವಂ ಬೋರ್ಡಿನಂತೇ ಕಾರ್ಯ ನಿರ್ವಹಿಸುವ ಹೊಸ ಸಂಸ್ಥೆಯನ್ನು ಸ್ಥಾಪಿಸಿ, ಆ ಮೂಲಕ ಭೂತಸ್ಥಾನಗಳ ಜೀರ್ಣೋದ್ಧಾರ ಮಾಡಿಸುವುದು.

3 ಭೂತಾರಾಧನೆಯನ್ನು ಅಧಿಕೃತ ಆರಾಧನಾ ರೂಪವೆಂದು ಪರಿಗಣಿಸಿ, ಅದರ ನಿರ್ವಹಣೆಗಾಗಿ ಸರಕಾರ ಆರ್ಥಿಕ ಸಹಾಯವನ್ನೊದಗಿಸಬೇಕು. ಭೂತ ಕಟ್ಟಿಸುವವರು ಮತ್ತು ಭೂತ ಕಟ್ಟುವ ಕಲಾವಿದರು ಇದರಲ್ಲಿ ಫಲಾನುಭವಿಗಳಾಗಬೇಕು. ಅದಕ್ಕಾಗಿ ಪಂಚಾಯತಿನ ಒಂದು ಪ್ರದೇಶವನ್ನು ಕೇಂದ್ರವಾಗಿರಿಸಿ ಒಂದು ಸರಕಾರಿ ಕಾರ್ಯಾಲಯದ ಸ್ಥಾಪನೆ ಮಾಡಬೇಕು.

4 ಕಳಂಜ, ಜೋಗಿ, ಮರ್ದ, ಮೊದಲಾದ ಭೂತದ ಉಪಕಲೆಗಳಿಗೆ ಪ್ರಾಧಾನ್ಯತೆ ಕೊಟ್ಟು ಆ ಕಲೆಯ ಉಳಿವಿಗಾಗಿ ಧನ ಸಹಾಯವನ್ನೊದಗಿಸುವುದು.

5 ಸಂಧಿ ಪಾಡ್ದನ, ಕೋರಿನಲಿಕೆ ಮೊದಲಾದ ಜಾನಪದ ಹಾಡುಗಳಲ್ಲಿ ಪರಿಶ್ರಮವುಳ್ಳ ಕಲಾವಿದರಿಗೆ ಮಾಸಾಶನ, ಹಾಗೂ ಗೌರವಧನಗಳನ್ನು ಒದಗಿಸಬೇಕು. ಕಿರಿಯ ತಲೆಮಾರಿಗೆ ಅವರು ಅದನ್ನು ಹಸ್ತಾಂತರಿಸುವಂತೆ ಪ್ರೇರೆಪಿಸಬೇಕು. ಅದಕ್ಕಾಗಿ ಪರಿಶಿಷ್ಟ ಜಾತಿಯವರ ವಸತಿ ಕೇಂದ್ರಗಳಲ್ಲಿ ಸೂಕ್ತ ತರಬೇತಿ, ಶಾಲೆಗಳ ಸ್ಥಾಪನೆ ಹಾಗೂ ಅವುಗಳು ಚೆನ್ನಾಗಿ ಕೆಲಸ ನಿರ್ವಹಿಸುತ್ತವೆಯೋ ಎಂಬುದರ ಮೇಲ್ನೋಟಕ್ಕೆ ಒಂದು ಅಧಿಕಾರಿ ವರ್ಗವಿರಬೇಕು.

6 ಯಕ್ಷಗಾನ ಅರ್ಥಗಾರಿಕೆಯು ಮೊದಲಾದ ಅದರ ವಿವಿಧ ಅಂಗಗಳಿಗೆ ಸಂಬಂಧಿಸಿದ ಕಲಾಪ್ರಕಾರಗಳ ವಿವರವಾದ ಅಧ್ಯಯನ ಹಾಗೂ ಅಧ್ಯಾಪನಕ್ಕೆ ಅನುಕೂಲವಾಗುವಂತೆ ಕಲಾಕೇಂದ್ರವನ್ನು ತೆರೆಯುವುದು. ಪಂಚಾಯತ್ ಕಾರ್ಯ ವ್ಯಾಪ್ತಿಗೆ ಅದು ಸೇರಬೇಕು.

7 ಚಿತ್ರಕಲೆ ಜಲಕಲೆ ಜಲವರ್ಣ, ಆವೆ ಮಣ್ಣುನಿಂದ ಕಲಾಕೃತಿ, ಪಾತ್ರೆಗಳರಚನೆ ಮೊದಲಾದುವುಗಳಿಗೆ ತರಬೇತಿ ಕೇಂದ್ರಗಳನ್ನು ತೆರೆಯಬೇಕು. ತರಬೇತಿ ನೀಡಬಲ್ಲ ಸಮರ್ಥ ವ್ಯಕ್ತಿಗಳನ್ನು ಆರಿಸಬೇಕು. ಚಿತ್ರಕಲಾ ಅಧ್ಯಾಪಕರನ್ನು ಎಲ್ಲಾ ಶಾಲೆಗಳಲ್ಲಿ ನೇಮಿಸಬೇಕು.

8 ನಾಟಕ, ಯಕ್ಷಗಾನ ಇತ್ಯಾದಿಗಳ ಪ್ರದರ್ಶನಕ್ಕೆ ಯೋಗ್ಯವಾದ ಸಭಾಭವನದ ನಿರ್ಮಾಣವನ್ನು ಮಾಡಬೇಕು.

9 ವಾಚನಾಲಯದಲ್ಲಿಯೂ ಗೌರವಧನಕ್ಕೆ ಅರ್ಹರಾದ ಅಂಶ ಕಾಲಿಕ ಉದ್ಯೋಗಸ್ಥರನ್ನು ನೇಮಿಸಬೇಕು.

10 ಬೆಳ್ಳೂರು ಪಂಚಾಯತ್ ವ್ಯಾಪ್ತಿಯಲ್ಲಿ ಸಂಗೀತ ಶಾಲೆಯೊಂದನ್ನು ತೆರೆಯಬೇಕು. ಈ ಪಂಚಾಯತ್ ವ್ಯಾಪ್ತಿಯಲ್ಲಿರುವ ಶಾಲೆಗಳಲ್ಲಿ ಸಂಗೀತ ಅಧ್ಯಾಪಕರ ನೇಮಕಾತಿಯನ್ನು ಮಾಡಬೇಕು.

11 ವಾರ್ಡಿಗೊಂದರಂತೆ ಸಾರ್ವಜನಿಕ ಈಜುಕೊಳದ ನಿರ್ಮಾಣ.

12 ಪಂಚಾಯತಿನಲ್ಲಿ ಗರಡಿ, ಶಾಲೆ, ಯೋಗ ಶಿಕ್ಷಣಕೇಂದ್ರಗಳನ್ನು ಸ್ಥಾಪಿಸಿ ಸೂಕ್ತ ತರಬೇತಿ ನೀಡುವ ವ್ಯವಸ್ಥೆ ಮಾಡಬೇಕು.

13 ಪಂಚಾಯತಿನ ಪ್ರತಿವಾರ್ಡುಗಳಲ್ಲೂ ವಾಚನಾಲಯಗಳನ್ನು ತೆರೆಯಬೇಕು.

14 ಪಂಚಾಯತು ಪರಿಸರದಲ್ಲಿ ಒಂದು ಉತ್ತಮ ರೀತಿಯ ಗ್ರಂಥಾಲಯ ತೆರೆಯಬೇಕು.

15 ಪಂಚಾಯತಿನ ಪ್ರದೇಶದಲ್ಲೊಂದು ಸುಸಜ್ಜಿತ ಕ್ರೀಡಾಂಗಣವನ್ನು ನಿರ್ಮಿಸಬೇಕು.

16 ಕಿನ್ನಿಂಗಾರು ಮಿನಿ ಸ್ಟೇಡಿಯಂನ್ನು ವಿಸ್ತರಿಸಿ ಸುಸಜ್ಜಿತಗೊಳಿಸಬೇಕು.

@@@@@@

# 15

# ಮಹಿಳಾ ಕ್ಷೇಮ

"ಬೆಳ್ಳೂರು ಗ್ರಾಮ ಪಂಚಾಯತು" ಕಾಸರಗೋಡು ತಾಲೂಕಿನ ಉತ್ತರದ ತುದಿಯಲ್ಲಿರುವ ಪ್ರಕೃತಿ ರಮಣೀಯವಾದ ಪ್ರದೇಶ. ಇಲ್ಲಿ ಸಂಖ್ಯಾದೃಷ್ಟಿಯಿಂದ ಪುರುಷರಿಗಿಂತ ಸ್ತ್ರೀಯರೇ ಹೆಚ್ಚು. "ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್" ಎಂಬಂತೆ ಹಿಂದಿನ ಮಹಿಳಾ ಮಣಿಗಳು ಹೆಚ್ಚಿನವರು ಒಂದಲ್ಲ ಒಂದು ಕಲೆಯೂ ಕಸುಬುಗಳಲ್ಲಿ ಪಳಗಿದವರಾಗಿದ್ದರು. ಆದುದರಿಂದಲೇ ಪರಂಪರಾಗತವಾದ ಅನೇಕ ಪಾಡ್ದನ ಹಾಡುಗಳು ಹಿರಿಯ ವನಿತೆಯರಿಂದ ಇಂದೂ ಕೇಳಿ ತಿಳಿದುಕೊಳ್ಳಬಹುದು. ಭತ್ತ ಕುಟ್ಟುವಾಗ, ನೇಜಿ ನಡುವಾಗ, ತೊಟ್ಟಿಲು ತೂಗುವಾಗ ಹೀಗೆ ಅನೇಕ ಸಂದರ್ಭಗಳಲ್ಲಿ ತಮ್ಮದೇ ರಾಗದಲ್ಲಿ ವಿವಿಧ ಹಾಡುಗಳನ್ನು ಹಾಡುವಾಗ ಅದನ್ನು ಆಲಿಸಿ ತನ್ಮಯರಾಗುತ್ತೇವೆ. ಗುಡಿ ಕೈಗಾರಿಕೆಗಳಲ್ಲಿಯೂ ಇಲ್ಲಿನ ಮಹಿಳೆಯರು ಹಿಂದಿಲ್ಲ. ಉದಾಹರಣೆಯಾಗಿ ಚಾಪೆ ಹೆಣೆಯುವುದು, ಬುಟ್ಟಿ ತಯಾರಿಕೆ, ಮಣ್ಣಿನ ಪಾತ್ರೆಗಳ ತಯಾರಿ, ಹೀಗೆ ಅನೇಕ ನಿತ್ಯೋಪಯೋಗಿ ವಸ್ತುಗಳನ್ನು ತಯಾರಿಸುವುದರಲ್ಲಿ ಮುಂದುವರಿದು ಆದರ್ಶಪ್ರಾಯರಾಗಿದ್ದರು.

ಆಧುನಿಕ ವೈದ್ಯರು ಇಲ್ಲದ ಕಾಲದಲ್ಲಿಯೂ ಇಲ್ಲಿಯ ಹಿರಿಯ ಮಹಿಳೆಯರಲ್ಲಿ ಅನೇಕರು ನಾಟಿ ವೈದ್ಯ ಪದ್ಧತಿಯಲ್ಲಿ ಯಾ "ಅಜ್ಜಿ ಮದ್ದು" ಪದ್ಧತಿಯ ರೀತಿಯಲ್ಲಿಯೂ ಜನರ ರೋಗಗಳಿಗೆ ಕೊಟ್ಟ ಮದ್ದುಗಳು ರಾಮ ಬಾಣವಾಗುತ್ತಿತ್ತು. ಪ್ರಸೂತಿ ಕಾರ್ಯದಲ್ಲಿಯೂ ನಿಪುಣೆಯರಿದ್ದರು. ಹಿಂದಿನ ಹೆಚ್ಚಿನ ಕುಟುಂಬಗಳಲ್ಲೂ ಮಹಿಳೆಯರು ಪುರುಷರ ಆಣತಿಯಂತೆ ಪರಂಪರೆಗೆ ಹೊಂದಿಕೊಂಡೇ ಬದುಕಿ, ಕಿರಿಯರಿಗೆ ಮಾರ್ಗದರ್ಶಿಗಳಾಗಿ ಬಾಳುವುದೇ ಜೀವನದ ಸಾರ್ಥಕತೆ ಎಂಬುದಾಗಿ ನಂಬಿಕೊಂಡಿದ್ದರು. ಸ್ವಾತಂತ್ರ್ಯ ಪೂರ್ವದಲ್ಲಿ ಇಲ್ಲಿಯ ವನಿತೆಯರಿಗೆ ಆಧುನಿಕ ಶಿಕ್ಷಣದ ಪರಿಜ್ಞಾನವೇ ಬಹಳ ಕಡಿಮೆಯಾಗಿತ್ತು. ಮನೆ ಬಿಟ್ಟು ಸುತ್ತಾಡುವುದು, ಎಲ್ಲರೊಡನೆ ಬೆರೆತು ಬಾಳುವುದು ಊರ ಜಾತ್ರೆ, ಉತ್ಸವಗಳ ಸಂದರ್ಭಗಳಲ್ಲಿ ಮಾತ್ರವಾಗಿತ್ತು. ಪ್ರತಿಷ್ಠೆಯ ಜನ ಸಾಮಾನ್ಯರು ಸಮಾಜಿಕ ಕ್ಷೇತ್ರಗಳಲ್ಲಾಗಲೀ, ವಿದ್ಯಾ ಕ್ಷೇತ್ರಗಳಲ್ಲಾಗಲಿ ಔದ್ಯೋಗಿಕ ಕ್ಷೇತ್ರಗಳಲ್ಲಾಗಲೀ, ಆರ್ಥಿಕತೆಯ ಕ್ಷೇತ್ರಗಳಲ್ಲಾಗಲೀ ಮುಂದೆ ಬಂದರೆ ಉತ್ತಮವೆಂದು ಮಾರ್ಗದರ್ಶನ ನೀಡಬಲ್ಲ ವ್ಯಕ್ತಿಯಾ ಮಾಧ್ಯಮಗಳು ಇಲ್ಲಿ ತೀರಾ ಕಡಿಮೆ. ಆದುದರಿಂದ ಇಲ್ಲಿಯ ವನಿತೆಯರ ಸರ್ವತೋಮುಖ ಅಭಿವೃದ್ಧಿಗಾಗಿ ಬಹಳಷ್ಟು ಪ್ರಯತ್ನ ಬೇಕಾಗಿದೆ.

ಮನೆ ಕೆಲಸಗಳ ಒತ್ತಡದಿಂದಾಗಿ ಹೆತ್ತವರು ಮಕ್ಕಳನ್ನು ಶಾಲೆಗಳಿಗೆ ಕಳುಹಿಸಲು ಸ್ವಲ್ಪ ಮಟ್ಟಿಗೆ ಹಿಂದುಳಿದರು. ಇದಕ್ಕೆ ಮುಖ್ಯವಾದ ಕಾರಣಗಳೆಂದರೆ ಮಾತೆಯರು ಕೂಲಿಗಾಗಿ ಹೊರಗಡೆ ಹೋದಾಗ ಎಳೆಯ ಮಕ್ಕಳ ಲಾಲನೆ, ಪೋಷಣೆಯು ದೊಡ್ಡ ಮಕ್ಕಳ ಹೊಣೆಯಾಗಿತ್ತು. ಹೆಣ್ಣು ಮಕ್ಕಳು ತಾಯಿಗೆ ಅಡುಗೆ ಮತ್ತು ಚಿಕ್ಕಮಕ್ಕಳ ಆರೈಕೆ ಮಾಡಲು ಸಹಕರಿಸುವುದು ಅನಿವಾರ್ಯವಾಗಿತ್ತು. ವಿದ್ಯಾಭ್ಯಾಸಕ್ಕಾಗಿ ಹತ್ತಿರ ಶಾಲೆಗಳಾಗಲೀ, ವಸತಿ ಸೌಕರ್ಯಗಳಾಗಲೀ ಇರಲಿಲ್ಲ. ಅಲ್ಲದೆ ಸಾರಿಗೆ ಸೌಕರ್ಯಗಳೂ ಬಹಳ ಕಡಿಮೆ. ಹಿರಿಯರ ಪ್ರೋತ್ಸಾಹದ ಕೊರತೆಯೊಂದಿಗೆ ಸರಕಾರದಿಂದ ಯಾವುದೇ ಸೌಲಭ್ಯಗಳು ಇಲ್ಲದಿದ್ದುದೇ ಮಹಿಳಾ ವಿದ್ಯಾಭ್ಯಾಸಕ್ಕೆ ಬಂದ ತೊಂದರೆಗಳಾಗಿತ್ತು. ಅನಿಯಂತ್ರಿತ ಸಂತಾನದ ಬೆಳವಣಿಗೆಯು ಇದಕ್ಕೆ ಇನ್ನೊಂದು ಕಾರಣವೂ ಹೌದು. ಸಾಧಾರಣ 1970ನೇ ಇಸವಿಯ ಅನಂತರ ಹೆಚ್ಚಿನ ಸಂಖ್ಯೆಯಲ್ಲಿ ಶಾಲೆಗಳು ಪ್ರಾರಂಭಗೊಂಡದುದರಿಂದ ಸ್ತ್ರೀ ವಿದ್ಯಾಭ್ಯಾಸವು ಶೀಘ್ರಗತಿಯನ್ನು ಹೊಂದಿತು. ಬೀಡಿ ಕಾರ್ಮಿಕರೂ, ಕೃಷಿಕರೂ ಸಾಮಾನ್ಯ ಸ್ಥಿತಿವಂತರೂ ತಮ್ಮ ತಮ್ಮ ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸುವುದರಲ್ಲಿ ಮುಂದಾದರು. ಕೆಲವೇ ವರ್ಷಗಳಲ್ಲಿ ಹಿಂದುಳಿದ ವರ್ಗದ ಹಾಗೂ ಹಿಂದುಳಿದ ಜಾತಿಯ ಮುಸ್ಲಿಂ ಸಮುದಾಯದ ಹೆಣ್ಣು ಮಕ್ಕಳೂ ವಿದ್ಯಾಭ್ಯಾಸ ಪಡೆಯುವುದರಲ್ಲಿ ಮುಂದಾದರು.

ಇತ್ತೀಚೆಗೆ ಹೆಣ್ಣು ಮಕ್ಕಳ ಸಂಖ್ಯೆಯೇ ಶಾಲೆಗಳಲ್ಲಿ ಹೆಚ್ಚಾಗಿದೆ. ಆರೋಗ್ಯದ ದೃಷ್ಟಿಯಿಂದಲೂ ಕಲಿಯುವಿಕೆಯಲ್ಲಿಯೂ, ಇನ್ನಿತರ ಶಾಲಾ ಚಟುವಟಿಕೆಗಳಲ್ಲಿಯೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿಯೂ ಹೆಣ್ಣು ಮಕ್ಕಳೇ ಮುಂದಿರುವರು. ಪ್ರೌಢ ಶಾಲೆಗಳಲ್ಲಿ ಅವರಿಗೆ ಬೇಕಾದ ಶೌಚಾಲಯ, ಕ್ರೀಡಾಂಗಣ ಮತ್ತು ಮಹಿಳಾ ಶಾರೀರಿಕ ಶಿಕ್ಷಣ ಅಧ್ಯಾಪಿಕೆಯರ ಕೊರತೆ ಹೆಣ್ಣು ಮಕ್ಕಳ ಉನ್ನತ ವಿದ್ಯಾಭ್ಯಾಸಕ್ಕೆ ತೊಂದರೆಗಳಾಗಿವೆ. ಇದರಿಂದಾಗಿ ಹೆಣ್ಣು ಮಕ್ಕಳು ಬಹಳ ತೊಂದರೆ ಅನುಭವಿಸಬೇಕಾಗಿದೆ. ಆದರೂ ಪ್ರಸ್ತುತ ಪಂಚಾಯತಿನಲ್ಲಿ 4529 ಮಂದಿ ಸ್ತ್ರೀಯರಿದ್ದಾರೆ ಅವರಲ್ಲಿ ಅನಕ್ಷರಸ್ಥರು ಕೇವಲ 20 ಶತಮಾನ ಎಂದು ಕಂಡು ಬಂದಿದೆ. ಬಡ ಕುಟುಂಬದ ಸ್ತ್ರೀಯರೂ, ಮುಸ್ಲಿಂ ಕುಟುಂಬದ ಸ್ತ್ರೀಯರೂ ಸ್ವಲ್ಪ ಮಟ್ಟಿಗೆ ವಿದ್ಯಾಭ್ಯಾಸದಿಂದ ವಂಚಿತರಾಗಿದ್ದಾರೆ ಎನ್ನಬಹುದು. ಮಾತ್ರವಲ್ಲದೆ ಈ ಪ್ರದೇಶದ ಪ್ರಾಯ 20 ರಿಂದ ಮೇಲ್ಪಟ್ಟ ಸ್ತ್ರೀಯರಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಪಡೆದವರ ಶೇಕಡಾವಾರು ಪ್ರಮಾಣ ಬಹಳ ಕಡಿಮೆ ಎಂದೇ ಹೇಳಬಹುದು.

ಪ್ರಸ್ತುತ ಗ್ರಾಮ ಪಂಚಾಯತಿನ ಸ್ತ್ರೀಯರಲ್ಲಿ ಸರಕಾರ ಅರೆಸರಕಾರದ ಉದ್ಯೋಗದಲ್ಲಿ ಜೀವಿಸುವವರು ಕೇವಲ ಬೆರಳಣಿಕೆಯಷ್ಟು ಮಂದಿ ಮಾತ್ರ. ಒಟ್ಟು ಸಂಖ್ಯೆಯ ಮೂರರಲ್ಲಿ ಎರಡಾಂಶ ಸ್ತ್ರೀಯರು ದಿನ ಕೂಲಿ ಹಾಗೂ ಕೃಷಿ ಕಾರ್ಮಿಕ ವೃತ್ತಿಯಲ್ಲಿ ನಿರತರಾಗಿರುತ್ತಾರೆ. ಮೂರರಲ್ಲಿ ಒಂದಾಂಶ ಸ್ತ್ರೀಯರು ಗೃಹಿಣಿಯರಾಗಿ ಗೃಹ ಕಾರ್ಯಗಳನ್ನು ಸಮೃದ್ಧಗೊಳಿಸುತ್ತಾರೆ. ಕಾರ್ಮಿಕರಾಗಿ ಜೀವಿಸುವವರು ಬೀಡಿ ಕಟ್ಟುವುದರಲ್ಲೋ, ಇನ್ನಿತರ ಕೆಲಸಗಳಲ್ಲಿಯೋ ನಿರತರಾಗಿರುವಾಗ ಕೂಲಿ ಕೆಲಸವು ಹೆಚ್ಚಾಗಿ ಕೃಷಿಯನ್ನು ಅವಲಂಬಿಸಿದೆ. ದನಕರುಗಳ ಸಾಕಣೆಯಲ್ಲಿ ನಿರತರಾಗಿರುವ ಸ್ತ್ರೀಯರೆಂದರೆ ಬಹಳ ಕಡಿಮೆ. ಬಡಕುಟುಂಬದಲ್ಲಿ, ಕುಟುಂಬದ ಸಂಪೂರ್ಣ ಭಾರವನ್ನು ಸ್ತ್ರೀಯರೇ ಹೊರುವ ಕಾರಣ ಅವರ ಪರಿಸ್ಥಿತಿಯು ಇನ್ನಷ್ಟು ಶೋಚನೀಯವಾಗುತ್ತದೆ. ತಕ್ಕ ಸಮಯಕ್ಕೆ ಆಹಾರ ತಯಾರಿಸುವುದರ ಜೊತೆಗೆ, ಕಟ್ಟಿಗೆಗಳನ್ನು ಶೇಖರಿಸುವುದು, ಜಾನುವಾರುಗಳ ಮೇಲ್ನೋಟ, ಮನೆಯ ಸುತ್ತುಮುತ್ತಲಿನ ಕೃಷಿಗೆ ಸಂಬಂಧಪಟ್ಟ ಹಲವಾರು ಕೆಲಸಗಳಲ್ಲಿ ಬಹು ಮಟ್ಟಿಗೆ ಸ್ತ್ರೀಯರ ಪಾಲಾಗಿರುತ್ತದೆ. ಬೆಳಗ್ಗಿನಿಂದ ಸಂಜೆಯವರೆಗೆ ಅಡುಗೆ ಮನೆಯಲ್ಲಿಯೇ ಇರುವಂತಹ ಹೆಂಗಸರಿಗೆ ಭರವಸೆ ನೀಡಬಲ್ಲ ಆಧುನಿಕ ಒಲೆಗಳು ನಮ್ಮ ಈ ಪ್ರದೇಶಕ್ಕೆ ಇಣಿಕಿಯೂ ನೋಡಲಿಲ್ಲ. ಆಧುನಿಕ ರೀತಿಯ ಒಲೆಗಳು ಇರುತ್ತಿದ್ದರೆ ದಿನದಿಂದ ದಿನಕ್ಕೆ ಹೆಚ್ಚುತ್ತಿರುವಂತಹ ಇಂಧನದ ಸಮಸ್ಯೆಯು ಸ್ವಲ್ಪ ಮಟ್ಟಿಗೆ ಕಡಿಮೆಯಾಗುತ್ತಿತ್ತು. ಮಾತ್ರವಲ್ಲ ಹೆಂಗಸರ ದುಡಿಮೆಯೂ ಸ್ವಲ್ಪ ಮಟ್ಟಿಗೆ ಇಳಿಮುಖವಾಗುತ್ತಿತ್ತು.

## ಸಮಸ್ಯೆಗಳು

1 ತಂದೆ ತಾಯಿಂದಿರಿಗೆ ವಿದ್ಯಾಭ್ಯಾಸ ಇಲ್ಲದಿರುವುದರಿಂದ ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಇಲ್ಲ.

2 ಆರ್ಥಿಕ ಸ್ಥಿತಿಯು ಬಹಳ ಹಿಂದುಳಿದಿರುವುದರಿಂದ ಮಹಿಳೆಯರ ವಿದ್ಯಾಭ್ಯಾಸವು ಸಾಧ್ಯವಾಗುವುದಿಲ್ಲ.

3 ವಿದ್ಯಾಕೇಂದ್ರಗಳು ಬಹಳ ದೂರವಿರುವುದರಿಂದ ಹುಡುಗಿಯರಿಗೆ ಹೋಗಿ ಬರಲು ಅನುಕೂಲವಿಲ್ಲ.

4 ಹೆಚ್ಚಾಗಿ ಹೆಣ್ಣು ಮಕ್ಕಳು ಮನೆ ಕೆಲಸಕ್ಕಾಗಿ ಶಿಕ್ಷಣವನ್ನು ಅರ್ಧದಲ್ಲೇ ಬಿಡುತ್ತಾರೆ.

5 ಕೃಷಿ ಕಾರ್ಮಿಕರ ಮಕ್ಕಳು ಕೃಷಿ ಸಮಯದಲ್ಲಿ ಶಾಲೆಗಳಿಗೆ ಗೈರು ಹಾಜರಿಯಾಗಿ ಮುಂದೆ ವಿದ್ಯಾಭ್ಯಾಸ ನಿಲ್ಲಿಸುತ್ತಾರೆ.

6 ವನಿತೆಯರಿಗೆ ಉದ್ಯೋಗ ರಂಗದಲ್ಲಿ ಹೆಚ್ಚಿನ ತರಬೇತಿ ಮತ್ತು ಉದ್ಯೋಗ ಅವಕಾಶವಿಲ್ಲ.

7 ಶಾರೀರಿಕವಾದ ಆರೋಗ್ಯ ವಿಷಯದಲ್ಲಿ ವನಿತೆಯರಿಗೆ ತಿಳಿವಳಿಕೆ ಕಡಿಮೆ.

8 ಸ್ವಯಂ ಉದ್ಯೋಗದಲ್ಲಿ ವನಿತೆಯರು ಹೆಚ್ಚು ಪರಿಣಿತರಲ್ಲ ಮತ್ತು ಅದಕ್ಕೆ ಬೇಕಾದ ತರಬೇತಿ ಮತ್ತು ಸೌಲಭ್ಯಗಳಿಲ್ಲ.

9 ಮಹಿಳಾ ಉದ್ಯೋಗಿಗಳಿಗೆ ದುಡಿಮೆಗೆ ಸರಿಯಾದ ವೇತನ ಸಿಗುವುದಿಲ್ಲ.

10 ವಿದ್ಯಾ ಕೇಂದ್ರಗಳನ್ನು ಬಿಟ್ಟು ಉಳಿದೆಡೆಗಳಲ್ಲೆಲ್ಲಾ ಸ್ತ್ರೀಯರು ಉದ್ಯೋಗದಲ್ಲಿ ಹಿಂದುಳಿದಿದ್ದಾರೆ.

11 ಸಮಾಜ ಸೇವಾ ಕ್ಷೇತ್ರದಲ್ಲಿ ಸ್ತ್ರೀಯರು ಹಿಂದುಳಿದಿದ್ದಾರೆ.

12 ಸ್ವ ಉದ್ಯೋಗ ಕ್ಷೇತ್ರದಲ್ಲಿ ಸ್ತ್ರೀಯರು ಸಾಕಷ್ಟು ಆಸಕ್ತಿ ತೋರಿಸದಿರುವುದರಿಂದ ಸ್ವ ಉದ್ಯೋಗದ ಕೆಲವು ಸಂದರ್ಭಗಳು ಇದರಿಂದ ನಷ್ಟವಾಗಬಹುದು.

13 ಕೆಲಸಕ್ಕೆ ತಕ್ಕ ಪ್ರತಿಫಲ ದೊರಕದೆ, ಕೂಲಿ ಕೆಲಸದಲ್ಲಿ ಸಿಗುವ ವೇತನದಲ್ಲಿ ಸ್ತ್ರೀಯರಲ್ಲೂ ಪುರುಷರಲ್ಲೂ ಬಹಳ ತಾರತಮ್ಯ ಇದೆ.

14 ಆರ್ಥಿಕ ಮುಗ್ಗಟ್ಟು ಸ್ವ ಉದ್ಯೋಗ ಆರಂಭ ಮಾಡುವುದಕ್ಕೊಂದು ಅತ್ಯಂತ ದೊಡ್ಡ ಸಮಸ್ಯೆ.

15 ಸರಕಾರದಿಂದ ಸಿಗುವ ಸಹಾಯ ಯೋಜನೆಗಳ ಕುರಿತು ತಿಳುವಳಿಕೆ ಇಲ್ಲದಿರುವುದು ಸ್ತ್ರೀಯರ ಸಮಸ್ಯೆಗಾಗಿದೆ.

16 ಅಂಗನವಾಡಿಗಳ ಕೊರತೆ ಹಾಗೂ ಇರುವ ಅಂಗನ ವಾಡಿಗಳಲ್ಲಿರುವ ಸೌಕರ್ಯಗಳ ಕೊರತೆ.

17 ಸ್ತ್ರೀಯರಲ್ಲಿ ಸಾಮಾನ್ಯ ವಿದ್ಯಾಭ್ಯಾಸವಿದ್ದರೂ ಮೂಡ ನಂಬಿಕೆಗಳಿಂದ ಪ್ರೇರಿತರಾಗುವುದರಿಂದ ಹೊಸ ವಿಷಯಗಳಲ್ಲಿ ಆಸಕ್ತಿ ತೋರಿಸುವುದಿಲ್ಲ.

## ಸಾಧ್ಯತೆಗಳು

1. ಗ್ರಾಮ ಪಂಚಾಯತಿನ ಪ್ರತಿವಾರ್ಡಿನಲ್ಲೂ ಮಹಿಳಾ ಸಂಸ್ಥೆಯನ್ನು ಸ್ಥಾಪಿಸಲು, ಅದರ ಆಶ್ರಯದಿಂದ ವಿವಿಧ ಕಾರ್ಯಕ್ರಮಗಳನ್ನು ನಡೆಸುವಂತೆ ಪ್ರೋತ್ಸಾಹಿಸಬೇಕು.

2 ಸ್ತ್ರೀಯರಿಗೆ ಬೇಕಾಗಿ ಉದ್ಯೋಗಕ್ಕೆ ಸಂಬಂಧಪಟ್ಟ ಮಾಹಿತಿಗಳನ್ನು ಕೊಡಲು ತರಬೇತಿ ಕೇಂದ್ರ ಆರಂಭಿಸಬೇಕು.

3 ಕೆಲಸಕ್ಕೆ ತಕ್ಕ ವೇತನಗಳನ್ನು ನೀಡುವುದು.

4 ಸ್ವ ಉದ್ಯೋಗವನ್ನು ಆರಂಭ ಮಾಡಲು ಧನ ಸಹಾಯ ನೀಡುವುದು.

5 ಕಡಿಮೆ ಬಡ್ಡಿಯ ಸಾಲ ಮೊದಲಾದ ಧನ ಸಹಾಯಗಳ ಕುರಿತು ಮಾಹಿತಿ ನೀಡುವುದು.

6 ವಿಧವಾ ಮಾಸಾಶನ, ಮಾತೃ ಸಹಾಯ ಪದ್ಧತಿಯ ಅನುಕೂಲ ಗಳನ್ನು ಅರ್ಹತೆ ಪಡೆದ ಎಲ್ಲಾ ಸ್ತ್ರೀಯರಿಗೂ ದೊರಕಿಸಿ ಕೊಡುವುದು.

7 ಪ್ರತಿ ವಾರ್ಡ್‌ಗಳ ಅಗತ್ಯವಿರುವ ಇನ್ನಿತರ ಪ್ರದೇಶಗಳಲ್ಲಿ ಅಂಗನವಾಡಿಗಳನ್ನು ಸ್ಥಾಪಿಸಿ ಮಕ್ಕಳ ಮತ್ತು ಮಹಿಳೆಯ ಮನೋರಂಜನೆಗೆ, ಆರೋಗ್ಯಕ್ಕೆ, ವಿಶ್ರಾಂತಿಗೆ ಸಂಬಂಧ ಪಟ್ಟ ವ್ಯವಸ್ಥೆಯನ್ನು ನೀಡುವುದು.

8 ಸ್ತ್ರೀಯರಿಗೆ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಧನ ಸಹಾಯ ವಿವಿಧ ಕ್ಲಬ್‌ಗಳ ಹಾಗೂ ಸಮಾಜ ಸೇವಾ ಸಮಿತಿಯವರಿಂದ ಪ್ರೋತ್ಸಾಹ ಮತ್ತು ಅತ್ಯಂತ ಹೆಚ್ಚು ಅಂಕಗಳನ್ನು ಗಳಿಸುವ ಹೆಣ್ಣು ಮಕ್ಕಳಿಗೆ ವಿಶೇಷ ಪ್ರೋತ್ಸಾಹವನ್ನು ನೀಡುವುದು.

9 ಸ್ತ್ರೀಯರ ಆರೋಗ್ಯ ದೃಷ್ಟಿಯಿಂದ ಅವರಿಗೆ ಆರೋಗ್ಯದ ಬಗ್ಗೆ ತಿಳುವಳಿಕೆಗಳನ್ನು ನೀಡುವುದು. (ಉದಾ ಮಕ್ಕಳ ಆರೋಗ್ಯದ ಕುರಿತು, ಮತ್ತು ತಾಯಂದಿರ ಆರೋಗ್ಯದ ಕುರಿತು)

10 ಎಲ್ಲಾ ಸಾಮಾಜಿಕ ಹಾಗೂ ಸಾಮೂಹಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಮಹಿಳೆಯರು ಸಕ್ರಿಯವಾಗಿ ಭಾಗವಹಿ ಸುವಂತೆ ಕಾರ್ಯಕ್ರಮವನ್ನು ಗ್ರಾಮ ಪಂಚಾಯಿತು ಮುಖೇನ ರೂಪಿಸುವುದು.

11 ಜಿಲ್ಲಾ ಕೇಂದ್ರ ಅಥವಾ ಬ್ಲಾಕ್ ಕೇಂದ್ರದಿಂದ ಸಂಬಂಧಪಟ್ಟ ಮಾಹಿತಿಗಳನ್ನು ಸಕಾಲದಲ್ಲಿ ತಲುಪಿಸುವುದಕ್ಕಾಗಿ ಮಾಹಿತಿ ಕೇಂದ್ರವನ್ನು ಗ್ರಾಮ ಪಂಚಾಯತು ಮಟ್ಟದಲ್ಲಿ ಸ್ಥಾಪಿಸುವುದು ಅಗತ್ಯ.

12 D. W. C. R. A ಸಂಸ್ಥೆಗಳನ್ನು ಪ್ರತೀ ವಾರ್ಡಿನಲ್ಲಿ ತೆರೆಯುವುದು ಅಗತ್ಯ. ಇದಕ್ಕಿರುವ ಆರ್ಥಿಕ ಆದಾಯ ಮಿತಿಯನ್ನು 25000/- ಹೆಚ್ಚಿಸಬೇಕು.

13 ಪಂಚಾಯತಿನ ಎಲ್ಲಾ ಆಸಕ್ತಿಯುಳ್ಳ ಮಹಿಳೆಯರಿಗೆ DWCRA ಸವಲತ್ತನ್ನು ಗ್ರಾಮ ಪಂಚಾಯತು ಮುಖೇನ ಒದಗಿಸುವ ವ್ಯವಸ್ಥೆ ಅತಿ ಅಗತ್ಯ.

14 ತಯಾರಿಸಲ್ಪಡುವ ಯಾವುದೇ ವಸ್ತುಗಳಿಗೆ ಅಗತ್ಯವೆನಿಸಿದ ಕಚ್ಚಾ ವಸ್ತುಗಳನ್ನು ಒದಗಿಸುವುದು, ಉತ್ಪಾದನೆಯನ್ನು ಸಂಗ್ರಹಿಸಿ ವಿಕ್ರಯಿಸುವ ವ್ಯವಸ್ಥೆ ಮಾಡಬೇಕು.

15 ಆರೋಗ್ಯ ಖಾತೆಯ ಗೃಹ ಸಂದರ್ಶನವನ್ನು ನಡೆಸುವ ಅಧಿಕಾರಿಗಳಿಗೆ ಸ್ಥಳೀಯ ಭಾಷೆಗಳು ತಿಳಿದಿರಬೇಕು. ಅದಕ್ಕೋಸ್ಕರ ಆಯಾ ಗ್ರಾಮ ಪಂಚಾಯತಿಗೆ ಒಳಪಟ್ಟ ಸ್ತ್ರೀಯರಿಗೆ ಸೂಕ್ತ ತರಬೇತಿಯನ್ನಿತ್ತು ನೇಮಿಸಬೇಕು. ಈ ರೀತಿ ಮುಂದುವರಿದಲ್ಲಿ ಮಹಿಳಾ ಕಾರ್ಯಕ್ರಮಗಳು, ಉದ್ಯೋಗ ಅವಕಾಶಾದಿ ಅವರ ಪುರೋಗತಿಗಳು ಯಶಸ್ವಿ ಯಾಗಿ ನಡೆಯುವುದರಲ್ಲಿ ಸಂಶಯವಿಲ್ಲ.

******

# 16

# ಸಹಕಾರಿ ಕ್ಷೇತ್ರ

ಈ ಪ್ರದೇಶದ ಕೃಷಿಕರಿಗೆ ಉತ್ತಮ ಸಹಾಯ, ಸೌಕರ್ಯಗಳನ್ನು ಒದಗಿಸುವ ಉದ್ದೇಶದಿಂದ 1972ರಲ್ಲಿ ಬೆಳ್ಳೂರು ಮತ್ತು ನೆಟ್ಟಣಿಗೆ ಗ್ರಾಮಗಳನ್ನು ತನ್ನ ಕಾರ್ಯವ್ಯಾಪ್ತಿಯಲ್ಲಿ ಸೇರಿಸಿಕೊಂಡು, ಬೆಳ್ಳೂರು ಸೇವಾ ಸಹಕಾರಿ ಸಂಘವನ್ನು ಸ್ಥಾಪಿಸಲಾಯಿತು. ಈ ಸಂಘವು 1-9-1972ರಿಂದ ತನ್ನ ಸೇವೆಯನ್ನು ಪ್ರಾರಂಭಿಸಿತು. ಈ ಸಹಕಾರಿ ಸಂಘವು 1981ರಲ್ಲಿ ಸ್ವಂತ ಕಟ್ಟಡದಲ್ಲಿ ಬೆಳ್ಳೂರಿನಲ್ಲಿ ತನ್ನ ಕಛೇರಿಯನ್ನು ಪ್ರಾರಂಭಿಸಿತು. ಈ ಪಂಚಾಯತಿನ ಎಲ್ಲಾ ಜನರ ಸಹಾಯ ಸಹಕಾರಗಳೊಂದಿಗೆ 1981ರಲ್ಲಿ ಬೆಳ್ಳೂರು ಸೇವಾ ಸಹಕಾರಿ ಸಂಘವು ಬೆಳ್ಳೂರು ಸೇವಾ ಸಹಕಾರಿ ಬೇಂಕಾಗಿ ಪರಿವರ್ತನೆಗೊಂಡಿತು. ಅನಂತರದ ದಿನಗಳಲ್ಲಿ ಇಲ್ಲಿನ ಜನರಿಗೆ ಸೂಕ್ತ ಸಾಲದ ಸೌಲಭ್ಯವನ್ನು ಒದಗಿಸಿ ಉತ್ತಮ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಾ ಇದೆ.

ಬೆಳ್ಳೂರು ಗ್ರಾಮ ಪಂಚಾಯತಿನಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರು ಅಧಿಕ ಸಂಖ್ಯೆಯಲ್ಲಿದ್ದಾರೆ. ಅವರ ಅಭಿವೃದ್ಧಿಯನ್ನು ಉದ್ದೇಶವಾಗಿರಿಸಿಕೊಂಡು ದಿನಾಂಕ 17-11-83ರಂದು ಬೆಳ್ಳೂರು ಪಂಚಾಯತು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಸೇವಾ ಸಹಕಾರಿ ಸಂಘವು ಸ್ಥಾಪನೆಯಾಯಿತು. ಮೊದಲಿಗೆ ಈ ಸಂಘವು ನಾಟೆಕಲ್ಲಿನಲ್ಲಿ ಬಾಡಿಗೆ ಕಟ್ಟಡವೊಂದರಲ್ಲಿ ಕಾರ್ಯಾರಂಭಿಸಿತು. ಬಳಿಕ ಕೇರಳ ಸರಕಾರವು ನೀಡಿದ ಧನ ಸಹಾಯದಿಂದ ಸ್ಥಳ ಖರೀದಿಸಿತು. ನೂತನವಾದ ಕಟ್ಟಡವನ್ನು ನಿರ್ಮಿಸಿತು. 1993ನೇ ಇಸವಿ ಮೇ ತಿಂಗಳಿನಲ್ಲಿ ಬೆಳ್ಳೂರಿನಲ್ಲಿ ಸ್ವಂತ ಕಟ್ಟಡವೊಂದರಲ್ಲಿ ತನ್ನ ಸೇವಾ ಕಾರ್ಯವನ್ನು ಪುನರಾರಂಭಿಸಿತು. ಸಂಘದ ಸದಸ್ಯರು ಆರ್ಥಿಕ ಪರಿಸ್ಥಿತಿಯನ್ನು ಉತ್ತಮ ಪಡಿಸುವ ಉದ್ದೇಶದಿಂದ ಸರಕಾರವು ಕೆಂಪುಕಲ್ಲು ಕಡಿಯಲು, ರೇಷ್ಮೆ ಬೆಳೆಸಲು, ಹೊಲಿಗೆ ತರಬೇತಿ ನೀಡಲು ಹಾಗೂ ರಾಸಾಯನಿಕ ಗೊಬ್ಬರದ ವ್ಯಾಪಾರ ನಡೆಸಲು ಈ ಮೊದಲಾದ ಉದ್ದೇಶಗಳಿಗೆ ಸಹಾಯ ಧನವನ್ನು ನೀಡಿತು. ಕೃಷಿ ಇಲಾಖೆಯ ಧನ ಸಹಾಯದೊಂದಿಗೆ ಸಂಘಕ್ಕೆ ಎರಡು ಉಳುಮೆ ಯಂತ್ರಗಳು ಲಭಿಸಿರುತ್ತದೆ.

ಪ್ರಾಥಮಿಕ ಸೇವಾ ಸಹಕಾರಿ ಬೇಂಕು ಎಂಬ ನೆಲೆಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಬೆಳ್ಳೂರು ಸೇವಾ ಸಹಕಾರಿ ಬೇಂಕು ಹೆಚ್ಚಿನ ಸಂಪನ್ಮೂಲವನ್ನು ಹೊಂದಿಲ್ಲ. ಆದ ಕಾರಣ ಈ ಪ್ರದೇಶದ ಜನರ ಎಲ್ಲಾ ಬಗೆಯ ಸಾಲದ ಅವಶ್ಯಕತೆಗಳನ್ನು ಪೂರೈಸಿಕೊಂಡು ಬರಲು ಸಾಧ್ಯವಾಗುವುದಿಲ್ಲ. ಈ ಬೇಂಕು ಸಾಲವನ್ನು ನೀಡಲು ಜಿಲ್ಲಾ ಬೇಂಕನ್ನೇ ಅವಲಂಬಿಸಿದೆ. ಆದರೂ ಕೂಡ ಸದಸ್ಯರ ಸಾಲದ ಅವಶ್ಯಕತೆಯನ್ನು ಪೂರೈಸಲು ಸಾಧ್ಯವಾಗುವುದಿಲ್ಲ. ಆದರೆ ಈ ವರೆಗೆ ಕೃಷಿ ಉದ್ದೇಶಕ್ಕಾಗಿಯೇ ಹೆಚ್ಚಿನ ಸಾಲಗಳನ್ನು ನೀಡಲಾಗಿದೆ. ಈ ಸಹಕಾರಿ ಬೇಂಕು ರಾಸಾಯನಿಕ ಗೊಬ್ಬರಗಳ ವ್ಯಾಪಾರವನ್ನು ನಡೆಸಿಕೊಂಡು ಬಂದಿದೆ. ಕೆಲವು ವರ್ಷಗಳ ಹಿಂದೆ ನಿತ್ಯೋಪಯೋಗಿ ವಸ್ತುಗಳ ಮಾರಾಟ ನಡೆಸಿಕೊಂಡು ಬಂತು ಆದರೆ, ಪೂರೈಕೆಯು ಅಸಮರ್ಪಕ ಕಾರಣದಿಂದ ಈ ವ್ಯಾಪಾರವನ್ನು ನಿಲ್ಲಿಸಬೇಕಾಯಿತು.

ಈ ಪಂಚಾಯಿನ ಎಲ್ಲಾ ಕೃಷಿಕರೂ, ಎಲ್ಲಾ ವರ್ಗದ ಜನರೂ ಬೇಂಕಿನ ವ್ಯವಹಾರಗಳಿಗೆ ಉತ್ತಮ ಸಹಾಯ ಸಹಕಾರಗಳನ್ನು ನೀಡುತ್ತಾ ಬಂದಿದ್ದಾರೆ. ಜನರ ಎಲ್ಲಾ ಬಗೆಯ ಆರ್ಥಿಕ ಅವಶ್ಯಕತೆಗಳನ್ನು ಪೂರೈಸುವಂತಾಗಬೇಕಾಗಿದೆ. ಆದುದರಿಂದ ಇಲ್ಲಿಯ ಜನರ ಎಲ್ಲಾ ಬಗೆಯ ಆರ್ಥಿಕ ಅವಶ್ಯಕತೆಗಳನ್ನು ಪೂರ್ತಿಸಲುನುವಾಗುವಂತೆ ಈ ಬೇಂಕನ್ನು ಬಲಪಡಿಸಬೇಕಾಗಿದೆ.

**ಬೆಳ್ಳೂರು ಗ್ರಾಮ ಪಂಚಾಯತಿನಲ್ಲಿರುವ ಸಹಕಾರಿ ಸಂಘಗಳ ವಿವರಗಳ ಪಟ್ಟಿ**

| ಕ್ರಮ ಸಂಖ್ಯೆ | ಸಂಸ್ಥೆಯ ಹೆಸರು | ಉದ್ದೇಶಗಳು | ಸ್ಥಾಪಿಸಿದ ವರ್ಷ | ಕಾರ್ಯ ಕ್ಷೇತ್ರ | ಸದಸ್ಯರು | ಅಂಗೀಕೃತ ಪಾಲು ಬಂಡವಾಳ | ಠೇವಣಿ |
|---|---|---|---|---|---|---|---|
| 1 | ಬೆಳ್ಳೂರು ಸೇವಾ ಸಹಕಾರಿ ಬೇಂಕು | ಸಾಲಪತ್ತಿನ ಸಹಕಾರಿ ಸಂಘ | 1972 | ಬೆಳ್ಳೂರು ನೆಟ್ಟಣಿಗೆ ಗ್ರಾಮ | 3452 | 18,05,000/- | 25,53,862/- |
| 2 | ಬೆಳ್ಳೂರು ಪಂಚಾಯತು ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಸೇವಾ ಸಹಕಾರಿ ಸಂಘ | ಪ್ರ.ಜಾ.ಪ.ವ ಸಾಲಪತ್ತಿನ ಸಹಕಾರಿ ಸಂಘ | 1983 | ಬೆಳ್ಳೂರು ನೆಟ್ಟಣಿಗೆ ಗ್ರಾಮ | 642 | 75,000/- | — |

| ಸಾಲಗಳು | | ಸ್ವೀಕೃತ ಪಾಲು ಬಂಡವಾಳ | ಲಾಭ ನಷ್ಟ | ನೌಕರರ ಸಂಖ್ಯೆ | |
|---|---|---|---|---|---|
| ಕೃಷಿ | ಕೃಷಿಯೇತರ | | | ಖಾಯಂ | ತಾತ್ಕಾಲಿಕ |
| 54,58,479/- | 16,28,999/- | 600010/- | ನಷ್ಟ | 4 | 1 |
| — | 1230/- | 10,250/- | ನಷ್ಟ | 2 | — |

## ಸಮಸ್ಯೆಗಳು

1 ಆಡಳಿತ ಮಂಡಳಿಯ ಕಾಲಾವಧಿಯು ಕೇವಲ ಮೂರು ವರ್ಷಗಳು. ಆದುದರಿಂದ ಸಹಕಾರಿ ಬೇಂಕಿಗೆ ದೂರಗಾಮಿ ಯೋಜನೆಗಳನ್ನು ಕೈಗೊಳ್ಳಲು ಸಾಧ್ಯವಾಗುವುದಿಲ್ಲ.

2 ಸಹಕಾರಿ ಬೇಂಕಿನ ನಿಯಮಗಳಿಗೆ ಕಾಲಾನುಗುಣವಾಗಿ ಬೇಕಾದ ತಿದ್ದುಪಡಿಗಳನ್ನು ತರುವುದಿಲ್ಲ. ಆಡಳಿತ ಮಂಡಳಿಯ ಸದಸ್ಯರಿಗೆ ನಿಯಮಗಳ ಬಗೆಗೆ ಸೂಕ್ತವಾದ ಮಾಹಿತಿಗಳನ್ನೂ, ತರಬೇತಿಗಳ ಮೂಲಕ ನೀಡುವುದಿಲ್ಲ. ಆದುದರಿಂದ ಆಡಳಿತೆಯಲ್ಲಿ ವೈಫಲ್ಯ ಕಂಡುಬರುವುದು.

3 ಕೃಷಿ ಸಂಬಂಧೀ ಸಾಲಗಳನ್ನು ಕ್ಲಪ್ತ ಸಮಯದಲ್ಲಿ ನೀಡದೇ ಇರುವುದು. ಹಾಗೂ ಸಾಲ ನೀಡುವಲ್ಲಿ ಉಂಟಾಗುವ ವಿಳಂಬ.

4 ಕೃಷಿಗೆ ಸಂಬಂಧಿಸಿದ ಅಲ್ಪಾವಧಿ ಸಾಲವನ್ನು ನೀಡಲು ತಯಾರಿಸುವ ತಖ್ತೆಯಿಂದಾಗಿ ಉಂಟಾಗುವ ತೊಂದರೆಗಳಿಂದ ಸರಿಯಾಗಿ ಸಾಲ ಸಿಗದಿರುವುದು.

5 ಸಹಕಾರಿ ಬೇಂಕಿನ ಲೆಕ್ಕ ಪರಿಶೋಧನಾ ಕಾರ್ಯವನ್ನು ಸರಕಾರವು ಸಕಾಲದಲ್ಲಿ ನೆರವೇರಿಸದೆ ಇರುವುದು.

6 ಸಹಕಾರಿ ಬೇಂಕಿನ ಮಹಾಸಭೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರು ಭಾಗವಹಿಸದೇ ಇರುವುದು.

7 ವಿದೇಶೀ ಠೇವಣಿಗಳನ್ನು ಸ್ವೀಕರಿಸುವ ಸೌಲಭ್ಯವಿಲ್ಲದಿರವುದರಿಂದ ಠೇವಣಿಗಳ ಸಂಗ್ರಹ ಕಡಿಮೆಯಾಗುವುದು.

8 ಗುಡಿ ಕೈಗಾರಿಕೆ, ಸ್ವಂತ ಉದ್ಯೋಗ ಮೊದಲಾದ ಉದ್ದೇಶಗಳಿಗಾಗಿ, ಕಡಿಮೆ ಬಡ್ಡಿ ದರದಲ್ಲಿ ಎಲ್ಲರಿಗೂ ಸಾಲದ ವಿವರಣೆ ಸಹಕಾರಿ ಬೇಂಕಿನ ಮೂಲಕ ಇಲ್ಲದಿರುವುದು.

9 ಕೃಷಿ ಉತ್ಪನ್ನಗಳನ್ನು ಸಮರ್ಪಕವಾಗಿ ಮಾರಾಟ ಮಾಡುವ ವ್ಯವಸ್ಥೆಯು ಇಲ್ಲದೆ ಇರುವುದು ಹಾಗೂ ಅವುಗಳನ್ನು ಈಡಾಗಿರಿಸಿ ತಾತ್ಕಾಲಿಕ ಮುಂಗಡ ನೀಡುವ ವ್ಯವಸ್ಥೆ ಇಲ್ಲದಿರುವುದು.

10 ನ್ಯಾಯ ಬೆಲೆಯಲ್ಲಿ ನಿತ್ಯೋಪಯೋಗೀ ವಸ್ತುಗಳ ವಿತರಣೆ ಸಾಧ್ಯವಾಗದಿರುವುದು. ರಾಸಾಯನಿಕ ಗೊಬ್ಬರಗಳು, ಕ್ರಿಮಿನಾಶಕಗಳ ಸಮರ್ಪಕ ವಿತರಣಾ ವ್ಯವಸ್ಥೆಯ ವೈಫಲ್ಯ.

## ಅವಶ್ಯಕತೆಗಳು

1 ಕೃಷಿ ಅಲ್ಪಾವಧಿ ಸಾಲದ ಗರಿಷ್ಠ ಮಿತಿಯನ್ನು ರೂ. 25000 ದವರೆಗೆ ಏರಿಸುವುದು.

2 ಈಗ ಕಾರ್ಯ ನಿರ್ವಹಿಸುತ್ತಿರುವ ಸಹಕಾರಿ ಬೇಂಕಿನ ಮೂಲಕವೇ ಗೃಹ ನಿರ್ಮಾಣ, ವಾಹನ ಖರೀದಿ ಮೊದಲಾದ ಉದ್ದೇಶಗಳಿಗೆ ಸಾಲವನ್ನು ನೀಡುವುದು.

3 ಕೃಷಿಕರ ಉತ್ಪನ್ನಗಳನ್ನು ದಾಸ್ತಾನು ಮಾಡುವ ಸೌಕರ್ಯ ಹಾಗೂ ಅದರ ಮೇಲೆ ಸಾಲ ನೀಡುವ ವ್ಯವಸ್ಥೆ ಉಂಟಾಗಬೇಕು.

4 ಕೃಷಿಕರಿಗೆ ಸಾಲವನ್ನು ನೀಡುವಾಗ ಯಾವುದೇ ರೀತಿಯಲ್ಲಿ ವಿಳಂಬ ಆಗದಂತೆ ಸಾಲದ ಧೋರಣೆಯಲ್ಲಿ ವ್ಯತ್ಯಾಸವಾಗಬೇಕು.

5 ಸಾಲಗಳ ಮೇಲಿನ ಬಡ್ಡಿಯನ್ನು ಕಡಿಮೆ ಮಾಡಬೇಕು. ಹಾಗೂ ವಾಯ್ದೆ ದಾಟಿದ ಸಾಲದ ವಸೂಲಿಯನ್ನು ತ್ವರಿತಗೊಳಿಸಲು ಆಡಳಿತ ಮಂಡಳಿಗೆ ಅಧಿಕಾರ ನೀಡಬೇಕು.

6 ನಿತ್ಯೋಪಯೋಗೀ ವಸ್ತುಗಳನ್ನು ಕೃಷಿ ಸಾಮಾಗ್ರಿಗಳನ್ನು ವಿತರಿಸಲು ಸಹಕಾರಿ ಬೇಂಕಿನ ಮೂಲಕ ವ್ಯವಸ್ಥೆಯಾಗಬೇಕು.

7 ಗ್ರೂಪ್ ಡಿಪಾಸಿಟ್ ಪದ್ಧತಿಯನ್ನು ಜ್ಯಾರಿಗೊಳಿಸುವುದು.

8 ಗುಡಿ ಕೈಗಾರಿಕೆ, ಕ್ಷೀರೋತ್ಪಾದನೆ ಹಾಗೂ ಮಹಿಳಾ ಟೈಲರಿಂಗ್ ಶಾಲಾ ಸಹಕಾರಿ ಸಂಘ ರಂಗಗಳಲ್ಲಿ ಸಹಕಾರಿ ಸಂಘಗಳನ್ನು ರೂಪಿಸುವುದು ಹಾಗೂ ಈ ಮೂಲಕ ಪಂಚಾಯತಿನ ಜನರ ಆರ್ಥಿಕ ಮಟ್ಟವನ್ನು ಸುಧಾರಿಸಲು ಸಹಕರಿಸುವುದು.

9 ಸಹಕಾರಿ ಬೇಂಕಿನಲ್ಲಿಯೇ ಈ ಪಂಚಾಯತಿನ ಜನರ ಠೇವಣಿಗಳನ್ನು ಇರಿಸಿ ಇಲ್ಲಿನ ಆರ್ಥಿಕವಾಗಿ ಹಿಂದುಳಿದ ಜನರಿಗೆ ಸಹಾಯ ನೀಡುವಂತೆ ಮಾಡಬೇಕು.

10 ವಾರ್ಡುಗಳ ತಳಹದಿಯಲ್ಲಿಯೇ ಸಹಕಾರಿ ಬೇಂಕಿನ ಚುನಾವಣೆಗಳನ್ನು ನಡೆಸಬೇಕು.

# 17

# ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗ

ಭೆಳ್ಳೂರು ಗ್ರಾಮ ಪಂಚಾಯತಿನ ಒಟ್ಟು ಜನ ಸಂಖ್ಯೆಯ 26.9% ಮಂದಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಕ್ಕೆ ಸೇರಿದ ವರಾಗಿದ್ದಾರೆ. ಈ ಗ್ರಾಮ ಪಂಚಾಯತಿನಲ್ಲಿ ಪ್ರಧಾನವಾಗಿ ಎರಡು ಗ್ರಾಮಗಳಿವೆ ಒಂದು ನೆಟ್ಟಣಿಗೆ ಗ್ರಾಮ, ಮತ್ತೊಂದು ಬೆಳ್ಳೂರು ಗ್ರಾಮ. ನೆಟ್ಟಣಿಗೆ ಗ್ರಾಮದಲ್ಲಿ ಗಂಡಸರು ಮತ್ತು ಹೆಂಗಸರು ಒಟ್ಟಾಗಿ 912 ಮಂದಿ ಇದ್ದಾರೆ. ಬೆಳ್ಳೂರು ಗ್ರಾಮದಲ್ಲಿ ಗಂಡಸರು ಹೆಂಗಸರು ಒಟ್ಟಾಗಿ 523 ಮಂದಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಜನರಿದ್ದಾರೆ. 1996-97ರ ಗ್ರಾಮ ಪಂಚಾಯತಿನ ಆಡಳಿತ ಸಮಿತಿಯಲ್ಲಿ ಒಬ್ಬರು ಪರಿಶಿಷ್ಟ ಜಾತಿ, ಮತ್ತೊಬ್ಬರು ಪರಿಶಿಷ್ಟ ವರ್ಗದ ಸದಸ್ಯರುಗಳಿದ್ದಾರೆ. ಹಾಗೂ ಗ್ರಾಮ ಪಂಚಾಯತಿನ ಅಧ್ಯಕ್ಷರು ಪರಿಶಿಷ್ಟ ಜಾತಿಯವರಾಗಿದ್ದಾರೆ.

ಈ ಪಂಗಡದ ಹೆಚ್ಚಿನವರು ದಾರಿದ್ರ್ಯರೇಖೆಗಿಂತ ಕೆಳಗೆ ಇರುವರು ಹಾಗೂ ಕೃಷಿ ಕಾರ್ಮಿಕರಾಗಿ ದುಡಿಯುವವರು. ಹಿಂದಿನ ಕಾಲದಲ್ಲಿ ಇವರು ಬೆಳಗ್ಗಿನಿಂದ ಸಂಜೆಯ ತನಕ ಕೃಷಿಕನ ಮನೆಯಲ್ಲಿ ಕೂಲಿಯಾಳಾಗಿ ದುಡಿಯುತ್ತಿದ್ದರು. ಆದುದರಿಂದ ತಮ್ಮ ಜಾಗದಲ್ಲಿ ಯಾವ ರೀತಿಯ ಕೃಷಿಯನ್ನೂ ಇವರು ಮಾಡಿಲ್ಲ. ಕೃಷಿ ಮಾಡುವಷ್ಟು ಸಮಯವೂ ಇವರಿಗೆ ಸಿಗುತ್ತಿರಲಿಲ್ಲ. ಅದೇ ರೀತಿ ಇವರ ಮಕ್ಕಳು ಸಹ ಬಾಲ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದರು. ಶಿಕ್ಷಣವಂತೂ ಇವರಿಗೆ ಇಲ್ಲವೇ ಇಲ್ಲ. ಶಾಲೆಗಳು ಹತ್ತಿರ ಇಲ್ಲದೇ ಇದ್ದುದು ಇವರ ನಿರಕ್ಷರತೆಗೆ ಇನ್ನೊಂದು ಕಾರಣವೆನ್ನಬಹುದು. ಅದಕ್ಕೆ ಬೇಕಾದ ಸೌಕರ್ಯಗಳೂ ಇರಲಿಲ್ಲ. ಆದುದುದರಿಂದ ಇವರ ಮಕ್ಕಳಿಗೆ ಕೂಡಾ ವಿದ್ಯೆ ಸಿಗದೇ ಹೋಯಿತು.

ಈ ಪಂಗಡದ ಜನರು ಗುಂಪುಗಳಾಗಿ ಗುಡ್ಡ ಪ್ರದೇಶದಲ್ಲಿ ವಾಸಿಸುವುದು ಕಂಡು ಬರುತ್ತದೆ. ಸ್ವಂತ ಕೃಷಿ ಮಾಡಲು ಯೋಗ್ಯ ವಾದ ಸ್ಥಳ ಇವರಿಗೆರಲಿಲ್ಲ. ಇರುವಂತಹ ಸ್ಥಳ ಸಹ ಕಡಿಮೆ ಈಗ ಕೃಷಿ ಕಾರ್ಮಿಕರಾಗಿ ದುಡಿಯುವುದನ್ನು ಬಿಟ್ಟು ಹೆಂಗಸರು ಬೀಡಿ ಕೈಗಾರಿಕೆ ರಂಗದಲ್ಲಿ ತೊಡಗಿಸಿಕೊಂಡಿರುವರು. ಇವರಿಂದ ಸಿಗುವ ಸಂಬಳ ಹೆಚ್ಚು. ಸೌಕರ್ಯಗಳು ಒಂದೊಂದಾಗಿ ಹೆಚ್ಚಾದಾಗ ತಮ್ಮ ತಮ್ಮ ಮಕ್ಕಳನ್ನು ಶಾಲೆಗಳಿಗೆ ಸೇರಿಸಿದರು. ವಿದ್ಯಾಭ್ಯಾಸದ ಬಗ್ಗೆ ಒಂದು ಅರಿವು ಸಹ ಮೂಡಿತು. 1996-97ರ ಶೈಕ್ಷಣಿಕ ವರ್ಷದಲ್ಲಿ ಬೆಳ್ಳೂರು ಗ್ರಾಮ ಪಂಚಾಯತಿನ ವ್ಯಾಪ್ತಿಯ ಶಾಲೆಗಳಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ಮಕ್ಕಳು ವ್ಯಾಸಂಗ ಮಾಡುತ್ತಿರುವ ಅಂಕೆ ಸಂಖ್ಯೆಗಳನ್ನು ಕೆಳಗೆ ಸೂಚಿಸಲಾಗಿದೆ.

| ಶಾಲೆಗಳ ಹೆಸರು | ಹೆಣ್ಣು | ಗಂಡು | ಒಟ್ಟು |
|---|---|---|---|
| ಬೆಳ್ಳೂರು ಪ್ರೌಢಶಾಲೆ | 19 | 26 | 45 |
| U.P. | 31 | 48 | 79 |
| L. P. | 34 | 37 | 71 |
| ನೆಟ್ಟಣಿಗೆ L. P. | 22 | 21 | 43 |
| ಪನೆಯಾಲ ಐಡೆಡ್ | 11 | 12 | 23 |
| ಕಕ್ಕೆಬೆಟ್ಟು ಐಡೆಡ್ | 15 | 19 | 34 |

ಮೂಲ : ಸೆಕಂಡರಿ ಡಾಟಾ

## ಸಾಮಾಜಿಕ ಮತ್ತು ಸಾಂಸ್ಕೃತಿಕ ಗುಣಮಟ್ಟ:

ಇದೀಗ ವಿದ್ಯಾಭ್ಯಾಸ ರಂಗದಲ್ಲಿ ಸಾಧಾರಣ ಪ್ರಗತಿ ಉಂಟಾಗಿದೆ. ಪಂಚಾಯತ್ ಕ್ಷೇತ್ರವು ಪುರೋಗಾಮಿಯಾದರೂ ಈ ಪಂಗಡದ ಜನರು ಮುಂದೆ ಬಂದಿಲ್ಲ. ಪುರುಷರಿಗಿಂತ ಸ್ತ್ರೀಯರೇ ಕುಟುಂಬದ ಹೊಣೆಯನ್ನು ಹೊರುತ್ತಾರೆ. ಶರಾಬು ನಿಶೇಧವು ಈ ಜನಾಂಗದ ಮೇಲೆ ವಿಶೇಷ ಪ್ರಭಾವ ಬೀರಿದೆ.

## ಆಚರಣೆ:

ಪರಂಪರಾಗತ ಕೆಲವು ಆಚರಣೆಗಳಿಂದ ಜೀವನ ನಡೆಸುವವರು ಇದ್ದಾರೆ. ಉದಾ: ಗುಳಿಗ, ಕೊರಗತನಿಯ, ಕಲ್ಲುರ್ಟಿ, ಪಂಜುರ್ಲಿ ಎಂಬೀ ಭೂತ ಕಟ್ಟುವವರು ಅದರಿಂದ ಸಿಗುವ ಸಂಬಳದಿಂದ ಜೀವನ ಸಾಗಿಸುತ್ತಾರೆ. ಅದಕ್ಕೆ ಬೇಕಾದ ಸಲಕರಣೆಗಳನ್ನು ಹೊಂದಿಸಿ ಕೊಳ್ಳಲು ಸರಕಾರ ಧನ ಸಹಾಯ ನೀಡಬೇಕು. ಈ ಪಂಗಡದ ಜನರು ಶವವನ್ನು ಹೆಚ್ಚಾಗಿ ದಹನ ಮಾಡುತ್ತಾರೆ. ಒಂದು ವೇಳೆ ಆರ್ಥಿಕ ದೃಷ್ಟಿಯಲ್ಲಿ ಬಡವರಾದರೆ ಮಾತ್ರ ಶವವವನ್ನು ದಫನ ಮಾಡುವರು. ಹಿಂದಿನ ಕಾಲದಲ್ಲಿ ಒಂದು ಕಾಲನಿಗೆ ಒಬ್ಬ ಮುಖಂಡ (ಗುರಿಕ್ಕಾರ) ನಿದ್ದನು. ಆತನ ಮಾರ್ಗದರ್ಶನದ ಪ್ರಕಾರ ಕಾರ್ಯ ನಿರ್ವಹಿಸುತ್ತಿದ್ದರು. ಈಗ ಇತಂಹ ಪದ್ಧತಿಗಳಿಲ್ಲ. ಇವರ ಸಾಂಸ್ಕೃತಿಕ ಕಲೆಗಳು ಇದೀಗ ಸಾಧಾರಣ ನೆಲೆಯಲ್ಲಿವೆ. ಭೂತಾರಾಧನೆ, ಗೋಂದೊಳು ಪೂಜೆಗಳನ್ನು ಮಾಡುತ್ತಾರೆ. ದೇವಸ್ಥಾನ ಸಂದರ್ಶನವನ್ನು ಉಳಿದ ಸಮುದಾಯ ಗಳಂತೆ ನಡೆಸುತ್ತಾರೆ.

## ಕೃಷಿ :

ಕೃಷಿ ಮಾಡಲು ಈಗಿನ ಪರಿಸ್ಥಿತಿಯಲ್ಲಿ ಸಾಕಷ್ಟು ಸೌಕರ್ಯಗಳಿಲ್ಲ. ಸ್ವಲ್ಪ ಮಾತ್ರ ಸ್ಥಳ ಇದ್ದವರು ಕೃಷಿ ಮಾಡುತ್ತಾರೆ.

## ವಸತಿ :

ಸರಕಾರದ ಯೋಜನೆ, ಆರ್ಥಿಕ ನೆರವಿನ ಮೂಲಕ ವಸತಿ ನಿರ್ಮಾಣ ಕಾರ್ಯವು ಮಂದಗತಿಯಲ್ಲಿ ನಡೆಯುತ್ತಿದೆಯದರೂ ಇನ್ನಷ್ಟು ಸಾಧನೆ ಈ ದೃಷ್ಠಿಯಿಂದ ಅಗತ್ಯ. ಪರಿಶಿಷ್ಟಜಾತಿ, ವರ್ಗಗಳ ಜನರು ವಾಸಿಸುವ ಪ್ರದೇಶವನ್ನು ಕೊಲನಿ ಎಂದು ಘೋಶಿಸಿದರೂ, ಮನೆಗಳು ಅಲ್ಲೊಂದು ಇಲ್ಲೊಂದು ಎಂಬಂತಿರುವುದರಿಂದ ಸಾಕಷ್ಟು ಸೌಲಭ್ಯಗಳನ್ನು ಒದಗಿಸುವುದು ಕಷ್ಟವಾದುದರಿಂದ ಇದಕ್ಕಾಗಿ ಹೊಸ ಯೋಜನೆಯನ್ನು ರೂಪಿಸಿಕೊಳ್ಳಬೇಕು. ಪ್ರಸ್ತುತ ಮನೆಕಟ್ಟಲು ನೀಡುವಂತಹ ಧನ ಸಹಾಯ ಸದ್ವಿನಿಯೋಗ ಆಗುವುದೇ ಎಂದು ನೋಡಿಕೊಂಡು ಮಾರ್ಗದರ್ಶನ ನೀಡಬೇಕು. ಈಗಿನ ವೆಚ್ಚವನ್ನು ಗಮನದಲ್ಲಿರಿಸಿ ಒಂದು ಮನೆಗೆ ಕನಿಷ್ಟ 35ಸಾವಿರ ರೂಪಾಯಿ ಧನ ಸಹಾಯ ನೀಡಬೇಕು. ವಸತಿ ನಿರ್ಮಿಸಲು ಸ್ವಂತ ಭೂಮಿ ಇಲ್ಲದವರಿಗೆ 10ಸೆಂಟ್ಸ್ ಜಾಗವನ್ನೂ ಮತ್ತು ಮನೆ ನಿರ್ಮಿಸಲು ಬೇಕಾದ ಹಣವನ್ನೂ ಸರಕಾರ ಒದಗಿಸಬೇಕು. ಉಳಿದ ಸೌಕರ್ಯ ಗಳನ್ನು ಕಲ್ಪಿಸುವ ದೃಷ್ಟಿಯಿಂದ ಹೀಗೆ ಒದಗಿಸುವ ನೆಲವು ಕೊಲನಿಯ ವ್ಯಾಪ್ತಿಯಲ್ಲಿ ಬರುವಂತೆ ನೋಡಿಕೊಳ್ಳಬೇಕು.

## ಆರೋಗ್ಯ :

ಕಾಲನಿಗಳ ಹಲವು ಕುಟುಂಬಗಳು ಶುಚಿತ್ವ ವಿಷಯದಲ್ಲಿ ಸಾಕಷ್ಟು ಎಚ್ಚರ ವಹಿಸುವುದಿಲ್ಲ. ಪ್ರತಿಯೊಂದು ಮನೆಗಳಿಗೂ ಕಕ್ಕೂಸ್, ಕುಡಿಯುವ ನೀರು, ವಿದ್ಯುತ್ ಇವುಗಳನ್ನು ಒದಗಿಸಬೇಕು. ಇವುಗಳ ಉಪಯೋಗದ ಸರಿಯಾದ ಕ್ರಮವನ್ನು ತಿಳಿಸಿಕೊಡಬೇಕು. ರೋಗಿಗಳು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯರ ಸಹಾಯ ವನ್ನು ಪಡೆದುಕೊಳ್ಳುವಂತೆ ಸೂಚಿಸಬೇಕು.

## ಅತಿ ಅಗತ್ಯವಾಗಿ ನಡೆಸಬೇಕಾದ ಕೆಲವು ಕಾರ್ಯಕ್ರಮಗಳು:

ಕೆಮಣ ಕುಕ್ಕು, ಮದಕ್ಕ, ಭೂತಾನ - ಪರಿಶಿಷ್ಟ ಕಾಲನಿಯಲ್ಲಿರುವ ಟ್ಯಾಂಕ್‌ಗಳನ್ನು ರಿಪೇರಿ ಮಾಡಿ Over Lead Tank ನಿರ್ಮಿಸಿ ವಿದ್ಯುತ್ ಪೂರೈಸಿ ನಳ್ಳಿ ನೀರು ಒದಗಿಸಬೇಕು, ತೋಟದ ಮೂಲೆಯಲ್ಲಿ ಪ್ರಾಕೃತಿಕವಾಗಿ ಹರಿದು ಬರುವಂತಹ ನೀರನ್ನು ಒಂದು ಟ್ಯಾಂಕ್ ಮಾಡಿ ಸಂಗ್ರಹಿಸಿಟ್ಟು ಹೊಸವಳಿಕೆ ತೋಟದ ಮೂಲೆ ಎಂಬೀ ಕಾಲನಿಗಳಿಗೆ ಪೈಪು ಮುಖಾಂತರ ಆ ನೀರನ್ನು ಸರಬುರಾಜು ಮಾಡಬಹುದು. ಮತ್ತು ಪ್ರತಿಯೊಂದು ಕಾಲನಿಗೂ ಕುಡಿ ನೀರು ಅತಿ ಗತ್ಯ. ಪ್ರತಿಯೊಂದು ಕಾಲನಿಗೂ ಬಾವಿ ನಿರ್ಮಿಸಬೇಕು. ಪ್ರಸ್ತುತ ಇರುವ ಎಲ್ಲಾ ಕಾಲನಿಗಳಿಗೆ ವಿದ್ಯುತ್ ಅತೀ ಅಗತ್ಯ. ವಿದ್ಯುತ್ ಸಂಪರ್ಕ ಸಿಗದೇ ಇದ್ದರೆ ಪ್ರತಿಯೊಂದು ಕುಟುಂಬಕ್ಕೂ ಉಚಿತವಾಗಿ Solar Light ಒದಗಿಸಬೇಕು. ನಿರುದ್ಯೋಗಿ ಯುವಕ-ಯುವತಿಯರಿಗೆ ಸ್ವ-ಉದ್ಯೋಗ ಮಾಡಲು ಬ್ಯಾಂಕುಗಳಿಂದ ಕಡಿಮೆ ಬಡ್ಡಿದರದಲ್ಲಿ ಸಬ್ಸಿಡಿರೂಪದಲ್ಲಿ ಸಾಲ ಒದಗಿಸಬೇಕು. ಪ್ರಸ್ತುತ ಕಾಲನಿಗಳ ರಸ್ತೆಗಳನ್ನು ದುರಸ್ತಿಗೊಳಿಸಿ ಸಂಚಾರಕ್ಕೆ ಯೋಗ್ಯವಾಗಿಸಬೇಕು, ಪರಿಶಿಷ್ಟ ಜಾತಿ ಕಾಲನಿಗಳ ವಿವರಗಳನ್ನು ತಃಖ್ತೆ 1ರಲ್ಲಿ ಸೂಚಿಸಲಾಗಿದೆ.

| ವಾರ್ಡು | ಕಾಲನಿಗಳ ಹೆಸರು | ಒಟ್ಟು ಕುಟುಂಬ | ಮನೆ | | ಕುಡಿ ನೀರು ಬಾವಿ ಕೊಳವೆ ಬಾವಿ | ಮಾರ್ಗ | ಕೃಷಿ ನೀರಾವರಿ |
|---|---|---|---|---|---|---|---|
| | | | ಹುಲ್ಲು | ಹಂಚು | | | |
| 1 | 1 ಕೊಲ್ಲಡ್ಕ | 10 | 6 | 4 | ಬಾವಿ ದುರಸ್ತಿ ಗೊಳಿಸಬೇಕು | ದುರಸ್ತಿ ಗೊಳಿಸ ಬೇಕು. | ಇಲ್ಲ |
| | 2 ಬೀಜದ ಗುತ್ತು | 12 | 10 | 2 | | | |
| 2 | 3 ಕೇರಿಕಾನ-ಬಜ | 15 | 13 | 2 | ಒಂದು ಕೊಳವೆ ಬಾವಿ | ದುರಸ್ತಿಗೊಳಿಸಬೇಕು | ಇಲ್ಲ |
| | 4 ನಾಕೂರು-ಕುಳ | 18 | 16 | 2 | ಒಂದು ಬಾವಿ ಬೇಕು | ದುರಸ್ತಿಗೊಳಿಸಬೇಕು | ಆಣೆಕಟ್ಟು ಬಜ ತೋಡಿಗೆ |
| | 5 ಮರದ ಮೂಲೆ | 7 | | 7 | ಒಂದು ಬಾವಿ ಬೇಕು | ದುರಸ್ತಿಗೊಳಿಸಬೇಕು | ಇಲ್ಲ |
| | 6 ಬಜ-ಪುಂಡಿ ಕಾಯಿ | 13 | 10 | 3 | ಬಾವಿ ಬೇಕು | ದುರಸ್ತಿ | ಇಲ್ಲ |
| 3 | 7 ಪಡ್ಡಯಿಮೂಲೆ | 10 | 4 | 6 | ಬಾವಿಬೇಕು | ಇಲ್ಲ | ಇಲ್ಲ |
| | 8 ಮುಕಡಂಗೋಳಿ ಭೂತಾನ | 58 | 37 | 21 | ಬಾವಿಬೇಕು | ಹೊಸ ರೋಡ್ ನಿರ್ಮಾಣ | ಟ್ಯಾಂಕ್ ನಿರ್ಮಿಸಿ ಪೈಪು ನೀರು ಒದಗಿಸಬೇಕು |
| | 9 ಬೈರ್ತಿಯಡ್ಕ-ಎಡಮೊಗೇರು | 11 | 3 | 8 | ಬೈರ್ತಿಯಡ್ಕ ಮತ್ತು ಮೊಗೇರ್‌ನಲ್ಲಿ ಒಂದು ಬಾವಿಬೇಕು | ಡಾಮಾರೀಕರಣ | ಎಡಮೊಗೇರಲ್ಲಿ ಒಂದು ಟ್ಯಾಂಕ್ ನಿರ್ಮಿಸಬೇಕು |
| 4 | 10 ಕೆಮಣಕುಕ್ಕು | 12 | 2 | 10 | ಬಾವಿಬೇಕು | ಡಾಮಾರೀಕರಣ | ಟ್ಯಾಂಕ್ ನಿರ್ಮಿಸಿ ಪೈಪು ನೀರು |
| | 11 ಮದಕ್ಕ | 11 | 4 | 7 | ಬಾವಿಬೇಕು | ಡಾಮಾರೀಕರಣ | ಟ್ಯಾಂಕ್ ನಿರ್ಮಿಸಿ ನಳ್ಳಿ ನೀರು |
| 5 | 12 ಮಣ್ಣಾಪು | 18 | 8 | 10 | ಬಾವಿ ದುರಸ್ತಿ ಗೊಳಿಸಬೇಕು | ಡಾಮಾರೀಕರಣ | ಟ್ಯಾಂಕ್ ನಿರ್ಮಿಸಿ ಪೈಪು ಮುಖಾಂತರ ನೀರುಒದಗಿಸಬೇಕು |
| | 13 ಬೀಜದ ಕಟ್ಟೆ | 12 | 9 | 3 | ಕೊಳವೆ ಬಾವಿ ದುರಸ್ತಿ ಗೊಳಿಸಬೇಕು | ಡಾಮಾರೀಕರಣ | ಇಲ್ಲ ಅಗತ್ಯ |
| 6 | 14 ಕಕ್ಕೆಬೆಟ್ಟು | 12 | 10 | 2 | ಒಂದು ಕೊಳವೆ ಬಾವಿಬೇಕು | ದುರಸ್ತಿಗೊಳಿಸ ಬೇಕು | ಟ್ಯಾಂಕ್ ನಿರ್ಮಿಸಿ ಪೈಪು ಮುಖಾಂತ ನೀರುಒದಗಿಸಬೇಕು |
| | 15 ಶಾಂತಿಗುರಿ | 12 | 10 | 2 | ಕೊಳವೆ ಬಾವಿಬೇಕು | ಮರ್ಪಂಗೋಡಿ ಶಾಂತಿಗುರಿ ರಸ್ತೆ | ಶಾಂತಿಗುರಿಯಲ್ಲಿ ಒಂದು ಟ್ಯಾಂಕ್ ನಿರ್ಮಿಸಿ ಪೈಪು ನೀರು ಒದಗಿಸಬೇಕು |
| | 16 ಗುತ್ತಿಯಡ್ಕ | 10 | 10 | | ಒಂದು ಕೊಳವೆ ಬಾವಿ ಬೇಕು | ಹೊಸ ಮಾರ್ಗ ನಿರ್ಮಿಸಬೇಕು | ಇಲ್ಲ |
| 7 | 17 ತೋಟದ ಮೂಲೆ | 15 | 12 | 3 | ಒಂದು ಬಾವಿ ಬೇಕು | ಹೊಸವಳಿಕೆ 10 ತೋಟದ ಮೂಲೆ ಪ್ರಸ್ತುತ ಇರುವ ಮಾರ್ಗ ಸ್ಥಗಿತ ಗೊಂಡಿದೆನೀರು ಕೂಡಲೇ ಸರಿಪಡಿಸಿ ಸಂಚಾರ ಯೋಗ್ಯ ವಾಗಿಸಬೇಕು | ತೋಟದ ಮೂಲೆ ಯಲ್ಲಿ ಒಂದು ಟ್ಯಾಂಕ್ ನಿರ್ಮಿಸಿ ಪೈಪು ಮುಖಾಂತರ ಒದಗಿಸಬೇಕು |

| ವಾರ್ಡು | ಕಾಲನಿಗಳ ಹೆಸರು | ಒಟ್ಟು ಕುಟುಂಬ | ಮನೆ | | ಕುಡಿ ನೀರು ಬಾವಿ ಕೊಳವೆ ಬಾವಿ | ಮಾರ್ಗ | ಕೃಷಿ ನೀರಾವರಿ |
|---|---|---|---|---|---|---|---|
| | | | ಹುಲ್ಲು | ಹಂಚು | | | |
| 7 | 18 ಹೊಸವಳಿಗೆ | 10 | 6 | 4 | ಒಂದು ಬೋರ್‌ವೇಲ್ ಬೇಕು | ಹೊಸ ರೋಡ್ ನಿರ್ಮಿಸಬೇಕು | ಇಲ್ಲ |
| | 19 ನೂಜಿ | 14 | 13 | 1 | ಒಂದು ಬಾವಿಬೇಕು | ಎಯಿಪಂಜಿ ಗುರಿ-ನೂಜಿ ಮಾರ್ಗ ನಿರ್ಮಾಸಬೇಕು | ಇಲ್ಲ |
| | 20 ಕಾಯಿಮಲೆ | 16 | 4 | 12 | ಬಾವಿ ದುರಸ್ತಿ | ಡಾಮಾರೀಕರಣ | ಬಾವಿತೆಗೆದು ಟ್ಯಾಂಕ್ ನಿರ್ಮಿಸಿ ಪೈಪು ಮುಖಾಂತರ ನೀರು ಒದಗಿಸಬೇಕು |
| 8 | 21 ಗೋಳಿಕಟ್ಟೆ | 12 | 2 | 14 | ಬಾವಿಬೇಕು | ಕಾಯಿಮಲೆಮಾರ್ಗ ಮಾರ್ಗ ದುರಸ್ತಿ ಗೊಳಿಸಬೇಕು | " |

ಮೇಲೆ ಕಾಣಿಸಿದ ಎಲ್ಲಾ ಪರಿಶಿಷ್ಠ ಕಾಲನಿಗಳಲ್ಲಿ ಹಂಚು ಹಾಕಲು ಬಾಕಿ ಉಳಿದ ಮನೆಗಳಿಗೆ ಮನೆಕಟ್ಟಲು ಧನ ಸಹಾಯ ನೀಡಬೇಕು. ಮತ್ತು ನಿರ್ಮಿಸಿದ ಮನೆಗಳಿಗೆ ರಿಪೇರಿ ಮಾಡಲು ಧನ ಸಹಾಯ ಒದಗಿಸಬೇಕು ಪ್ರತಿಯೊಂದು ಮನೆಗೂ ಕಕ್ಕೂಸ್, ಕುಡಿನೀರು, ವಿದ್ಯುತ್, ಮಾರ್ಗ ದುರಸ್ತಿ, ಹೊಸ ಮಾರ್ಗ ನಿರ್ಮಾಣ, ಬಾವಿ, ದುರಸ್ತಿ, ಹೊಸ ಬಾವಿ ನಿರ್ಮಾಣ ಬೋರ್ ವೆಲ್ ನಿರ್ಮಾಣ, ಬೋರ್ ವೆಲ್ ದುರಸ್ತಿ, ಟ್ಯಾಂಕ್ ಇತ್ಯಾದಿಗಳನ್ನು ನೆರವೇರಿಸಬೇಕು.

**ಪರಿಶಿಷ್ಟ ವರ್ಗ ಕಾಲನಿಗಳ ಅಂಕೆ ಸಂಖ್ಯೆ ಪಟ್ಟಿ -2 ಕೆಳಗೆ ಕೊಡಲಾಗಿದೆ**

| ವಾರ್ಡು | ಕಾಲನಿಗಳ ಹೆಸರು | ಒಟ್ಟು ಕುಟುಂಬ | ಮನೆ | | ಕುಡಿ ನೀರು ಬಾವಿ, ಕೊಳವೆ ಬಾವಿ | ಮಾರ್ಗ | ಕೃಷಿ ನೀರಾವರಿ |
|---|---|---|---|---|---|---|---|
| | | | ಹುಲ್ಲು | ಹಂಚು | | | |
| | 1 ಕಜೆ | 30 | 12 | 18 | ಒಂದು ಬಾವಿಬೇಕು | ಹೊಸ ಮಾರ್ಗ ನಿರ್ಮಿಸಬೇಕು | ಕಜೆಯಲ್ಲಿ ಒಂದು ಬಾವಿ ತೆಗೆದು ಟ್ಯಾಂಕ್ ನಿರ್ಮಿಸಿ ಪೈಪು ಮುಖಾಂತರ ನೀರು ಒದಗಿಸ ಬೇಕು |
| 1 | 2 ಸರಳಿಮೂಲೆ | 25 | 9 | 16 | ಒಂದು ಬಾವಿಬೇಕು | ಹೊಸ ಮಾರ್ಗ ನಿರ್ಮಿಸಬೇಕು | ಇಲ್ಲ |
| | 3 ಬೀಜಂತಡ್ಕ ಪಟ್ಟ ಮೂಲೆ | 26 | 12 | 14 | ಒಂದು ಬಾವಿಬೇಕು | ಹೊಸ ಮಾರ್ಗ ನಿರ್ಮಿಸಬೇಕು | ಇಲ್ಲ |
| | 4 ಬೀರಮೂಲೆ | 10 | 9 | 1 | ಬಾವಿಬೇಕು | ದುರಸ್ತಿ | ಇಲ್ಲ |
| 2 | 5 ಮರದ ಮೂಲೆ<br>1HDP | 34 | | 34 | ಬೋರ್‌ವೆಲ್ ದುರಸ್ತಿ | ಕಾಯರ್ ಪದವು ಮರದ ಮೂಲೆ ಮಾರ್ಗ ಡಾಮಾರೀ ಕರಣಗೊಳಿಸಬೇಕು | ಕಾಯರ್ ಪದವಿನಲ್ಲಿ ಬೋರ್‌ವೆಲ್ ನಿಂದ ಟ್ಯಾಂಕ್‌ಮಾಡಿ ಪೈಪು ನೀರು ಒದಗಿಸ ಬೇಕು |
| 4 | 6 ಮುಗುಳ್ತಿ ಮೂಲೆ | 15 | | 15 | ಬಾವಿಬೇಕು | ದುರಸ್ತಿಗೊಳಿಸ ಬೇಕು | ಟ್ಯಾಂಕ್ ನಿರ್ಮಿಸಿ ಪೈಪು ಮುಂಖಾತರ ನೀರು ಒದಗಿಸಬೇಕು |
| 5 | 7 ಜವುನಿಗುಡ್ಡೆ | 18 | 6 | 12 | ಬಾವಿಬೇಕು | ದುರಸ್ತಿಗೊಳಿಸ ಬೇಕು | ಇಲ್ಲ |
| 8 | ಅಡ್ವಳ | 20 | 5 | 15 | ಬಾವಿಬೇಕು | ಹೊಸ ಮಾರ್ಗ ನಿರ್ಮಾಣ | ಇಲ್ಲ |

## ಸಮಸ್ಯೆಗಳು:

1. ಪರಿಶಿಷ್ಟ ಜಾತಿ, ಪರಿಶಿಷ್ಟವರ್ಗದ ಅನೇಕರಿಗೆ ಸ್ವಂತ ವಸತಿಯಿಲ್ಲ, ಮತ್ತು ಒಂದಿಷ್ಟು ಸ್ವಂತ ಭೂಮಿಯಿಲ್ಲ.
2. ಮನೆಯ ಪರಿಸರ ಶುಚಿತ್ವವಿಲ್ಲದಿದ್ದುದರಿಂದ ರೋಗ ಹೆಚ್ಚಾಗಿ ಬರುತ್ತದೆ. ಮತ್ತು ಹತ್ತಿರದಲ್ಲಿ ವಾಸಿಸುವ ಕುಟುಂಬಗಳಿಗೆ ಬಹಳ ತೊಂದರೆಯಾಗಿದೆ.
3. ಕಾಲನಿಗಳಿಗೆ, ಕಕ್ಕೂಸ್, ಕುಡಿನೀರು, ವಿದ್ಯುತ್ ಇಲ್ಲ.
4. ಇವರ ಆರೋಗ್ಯ ಗುಣಮಟ್ಟ ಒಳ್ಳೆಯದಾಗಿಲ್ಲ. ಈ ಕುಟುಂಬಗಳಿಗೆ ಉತ್ತಮ ಚಿಕಿತ್ಸೆ ಮಾಡಲು ಆರ್ಥಿಕ ಸಮಸ್ಯೆ ಇದೆ.
5. ಬಡಜನರ ಹೆಣ್ಣು ಮಕ್ಕಳನ್ನು ಮದುವೆ ಮಾಡಿಕೊಡಲು ಪ್ರಸ್ತುತ ಕೊಡುವ ಧನ ಸಹಾಯ ಕಡಿಮೆ ಅರ್ಹರಾದವರಿಗೆ ಹಾಗೂ ಸುಲಭ ರೀತಿಯಲ್ಲಿ ಸೂಕ್ತ ಸಮಯಕ್ಕೆ ಹಣ ಸಿಗುವುದಿಲ್ಲ.
6. I. R. D. P. ಯಂತಹ ದೇಶಿಯ ಪದ್ಧತಿ ಫಲಪ್ರದವಾಗುವುದಿಲ್ಲ.
7. ಪರಿಶಿಷ್ಟ ಜಾತಿ, ವರ್ಗದವರಿಗೆ ಕಾರ್ಪೊರೇಷನಿನಿಂದ ಸ್ವ ಉದ್ಯೋಗಕ್ಕೆ ದೊರಕುವ ಲೋನುಗಳ ಬಗ್ಗೆ ಸರಿಯಾದ ಮಾಹಿತಿಯಿಲ್ಲ.
8. ಪರಿಶಿಷ್ಟ ಜಾತಿ, ವರ್ಗದವರ ಕೈವಶವಿರುವ ಭೂಮಿಗಳಿಗೆ ಪಟ್ಟೆ ಸಿಗಲಿಲ್ಲ.
9. ಕೃಷಿ ಭವನಗಳಿಂದ ಹೆಚ್ಚು ತರಕಾರಿ ಬೀಜ ಒದಗಿಸಿದರೂ ಕಾಲನಿಗಳಲ್ಲಿ ತರಕಾರಿ ಬೆಳೆಸದಿದ್ದುದರಿಂದ ಸ್ವ ಉದ್ಯೋಗ ಇನ್ನಷ್ಟು ನಷ್ಟ ಹೊಂದಿತ್ತು. ಮತ್ತು ಕೃಷಿ ಭವನ ಮೂಲಕ ಸಿಗುವಂತಹ ಕೃಷಿ ಉಪಕರಣಗಳು ಯೋಗ್ಯ ರೀತಿಯಲ್ಲಿ ಲಭಿಸುವುದಿಲ್ಲ.
10. ಪರಿಶಿಷ್ಟ ಜಾತಿ, ಪರಿಶಿಷ್ಟವರ್ಗ, ಕ್ಷೇಮದಲ್ಲಿ ನಡೆಸುತ್ತಿರುವ ಕಾರ್ಯಕ್ರಮಗಳ ಕುರಿತು ಅರಿವು ಇಲ್ಲದಿರುವಿಕೆ.
11. ಪರಿಶಿಷ್ಟ ಜಾತಿ, ವರ್ಗದ, ಕಲಾ ಸಾಂಸ್ಕೃತಿಕ ಕ್ಲಬ್‌ಗಳಿಗೆ ಪ್ರೋತ್ಸಾಹ ನೀಡಿ ಇದರ ಮೂಲಕ ಕೆಲವು ಯೋಗ ಕ್ಷೇಮ ವಿಚಾರಗಳ ತಿಳುವಳಿಕೆ ಮೂಡಿಸದಿರುವುದು.

## ಸಾಧ್ಯತೆಗಳು

1. ನೆಲೆಯಲ್ಲಿರುವ ಎಲ್ಲಾ ಪರಿಶಿಷ್ಟಜಾತಿ, ಪರಿಶಿಷ್ಟವರ್ಗ, ಕಾಲನಿಗಳಗೆ, ವಿದ್ಯುತ್ ಕಕ್ಕೂಸ್, ಕುಡಿನೀರು, ಒದಗಿಸಬೇಕು.
2. ಸ್ವಂತವಾಗಿ ಮನೆ ಇಲ್ಲದ ಕುಟುಂಬಗಳಿಗೆ 10ಸೆಂಟ್ಸ್ ಭೂಮಿ ಮತ್ತು ಮನೆಕಟ್ಟಲು ಉಚಿತವಾಗಿ ಧನ ಸಹಾಯ ನೀಡಬೇಕು.
3. ಪ್ರಸ್ತುತ ಕೈವಶವಿರುವಂತಹ ಭೂಮಿಗಳಿಗೆ ಸರಿಯಗಿ "ಪಟ್ಟೆ" ವಿತರಿಸಬೇಕು.
4. ಈ ಪಂಗಡದವರಿಗೆ ಬೇಕಾಗಿ ಕೃಷಿಭವನದಿಂದ ತರಕಾರಿ ಬೀಜ ನೀಡಿ ಸ್ವಂತ ಕಾಲನಿಗಳಲ್ಲಿ ತರಕಾರಿ ಬೆಳೆಸಿ ಮಾರುವುದರಿಂದ ಸ್ವ ಉದ್ಯೋಗ ಮಾಡಬಹುದು. ಮತ್ತು ಕೃಷಿಭವನದ ಮೂಲಕ ಉಚಿತ ಕೃಷಿ ಉಪಕರಣಗಳನ್ನು ಅರ್ಹರಿಗೆ ನೀಡುವುದು.
5. ಈ ಪಂಗಡದವರ ಕೃಷಿ ಭೂಮಿಗೆ ಸುತ್ತಲೂ ಗೋಡೆ ನಿರ್ಮಿಸಲು ಸರಕಾರ ಯೋಜನೆ ತಯಾರಿಸಬೇಕು. ಮತ್ತು ಕಾಲನಿಗಳಿಂದ ಮಣ್ಣು ಕೊರೆತ ಉಂಟಾಗುವುದನ್ನು ತಡೆಗಟ್ಟಲು ಮಣ್ಣು ಸಂರಕ್ಷಣಾ ಇಲಾಖೆ ಒಂದು ಯೋಜನೆ ತಯಾರಿಸಬೇಕು.
6. ಕಾಲನಿಗಳಲ್ಲಿ ಕೃಷಿಗೆ ಬೇಕಾದ ನೀರನ್ನು ಒದಗಿಸಿಕೊಡಬೇಕು.
7. ಪ್ರಸ್ತುತ ಇರುವ ಮಾರ್ಗಗಳನ್ನು ದುರಸ್ತಿ ಮಾಡಿ ಡಾಮಾರೀಕರಣಗೊಳಿಸಬೇಕು. ಮತ್ತು Sep. Tsp ಸ್ಕೀಂಗಳಲ್ಲಿ ಹೊಸತಾಗಿ ಮಾರ್ಗ ನಿರ್ಮಾಣ ಮಾಡಬೇಕು.
8. ಸ್ವ ಉದ್ಯೋಗ ಮಾಡಲು ಅವಶ್ಯವಾದ ಬೇಂಕ್ ಲೋನ್ ಪೂರ್ಣವಾಗಿ ನೀಡುವುದು ಮತ್ತು ಬಡ್ಡಿದರ ಕಡಿಮೆಗೊಳಿಸುವುದು. ಇದರ ಕುರಿತು ತಿಳುವಳಿಕೆ ಮೂಡಿಸಿ ಹಣವನ್ನು ದುರುಪಯೋಗ ಆಗದಂತೆ ಮೇಲ್ನೋಟ ವಹಿಸಬೇಕು.
9. ಕಜೆ ಪರಿಶಿಷ್ಟ ವರ್ಗ ಕಾಲನಿಯಲ್ಲಿ ಒಂದು ಬೋರವಲ್ ನಳ್ಳಿ ಮುಖಾಂತರ ಕುಡಿ ನೀರು ಕಜೆ, ಬೀಜಂತಡ್ಕ, ಎಂಬಲ್ಲಿಗೆ ಸರಬುರಾಜು ಮಾಡಬೇಕು.
10. ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ಪ್ರತಿ ತಿಂಗಳಿಗೊಮ್ಮೆ ಕಾಲನಿಗಳಿಗೆ ಭೇಟಿ ನೀಡಿ ಆರೋಗ್ಯ ತಪಾಸಣೆ ನಡೆಸಬೇಕು.
11. ಸರಕಾರದ ಯೋಜನೆಗಳಿಗೆ ಫಲಾನುಭವಿಗಳನ್ನು ಆಯ್ಕೆ ಮಾಡುವ ಅಧಿಕಾರವನ್ನು ಗ್ರಾಮ ಪಂಚಾಯತಿಗೆ ನೀಡಬೇಕು. ಯೋಜನೆ ಮತ್ತು ಜ್ಯಾರಿ ಕ್ರಮಗಳ ಮೇಲ್ನೋಟವನ್ನು ಸಹ ಪಂಚಾಯತಿಗೆ ನೀಡಬೇಕು.

12 ಚಾಪೆ ತಯಾರಿ ಇನ್ನಿತರ ಗುಡಿ ಕೈಗಾರಿಕಾ ಕಾರ್ಮಿಕರನ್ನು ಒಗ್ಗೂಡಿಸಿ ಉದ್ಯೋಗ ವ್ಯಾಪ್ತಿ ಹೆಚ್ಚಿಸುವುದು. ಇದರ ಸಂರಕ್ಷಣೆಗಾಗಿ ಜಾತಿ, ಪರಿಶಿಷ್ಟ ವರ್ಗ ಅಬಿವೃದ್ಧಿ ಸಹಕಾರ ಸಂಘ ಸ್ಥಾಪಿಸುವುದು.

13. ಬಳಕೆದಾರರ ಸೊಸೈಟಿಗಳನ್ನು ಸ್ಥಾಪಿಸಿ ಉಪಯೋಗಿ ವಸ್ತುಗಳ ಬೆಲೆ ನಿಯಂತ್ರಿಸಲು ಕ್ರಮಕೈಗೊಳ್ಳುವುದು.

14. ಗ್ರಾಮ ಪಂಚಾಯತು ವ್ಯಾಪ್ತಿಯಲ್ಲಿ ಉತ್ಪನ್ನವಾಗುವ ವಸ್ತುಗಳ ಮಾರಾಟಕ್ಕಾಗಿ ಸೂಕ್ತವಾದ ಮಾರುಕಟ್ಟೆಗಳನ್ನು ಗ್ರಾಮ ಪಂಚಾಯತ್ ಯೋಗ್ಯ ಕೇಂದ್ರಗಳಲ್ಲಿ ತೆರೆಯಬೇಕು.

15. ಕೋ ಅಪರೇಟಿವ್ ಸೊಸೈಟಿಗಳ ಶಾಖೆಗಳನ್ನು ತೆರೆದು ನಿರ್ಮಾಣ ಕಾರ್ಯಗಳು ಬಂದಾಗ ಪರಸ್ಪರ ಹೊಂದಾಣಿಕೆ ಕಲ್ಪಿಸುವುದು.

16. ಮಾಂಸ, ಮೊಟ್ಟೆಗಳಿಗಾಗಿ ಕೋಳಿ ಮರಿಗಳನ್ನು ಸಹಕಾರ ಸಂಘಗಳ ಮೂಲಕ ವಿತರಿಸುವುದು. ಮತ್ತು ಇದಕ್ಕೆ ಬೇಕಾದ ಬೇಂಕ್ ಸಾಲವನ್ನು ಕಡಿಮೆ ಬಡ್ಡಿದರ ಮತ್ತು ಸಬ್ಸಿಡಿ ರೀತಿಯಲ್ಲಿ ಒದಗಿಸಬೇಕು.

17. ವಿದ್ಯುತ ಸಂಪರ್ಕ ಏರ್ಪಡದೇ ಇರುವಂತಹ ಮನೆಗಳಿಗೆ ತತ್ಕಾಲ ಸೋಲಾರ ಲೈಟ್ ಒದಗಿಸಬೇಕು.

18. ಪ್ರಸ್ತುತ ನೆಲೆಯಲ್ಲಿರುವ ಪರಿಶಿಷ್ಟ ಜಾತಿ, ಪರಿಶಿಷ್ಟವರ್ಗ ಕೋ ಅಪರೇಟಿವ್ ಸೊಸೈಟಿಗೆ ವಾರ್ಡುಮಟ್ಟದಲ್ಲಿ ಪ್ರತಿ ನಿಧಿಯನ್ನು ಆರಿಸಬೇಕು

()()()()()()

ಬೆಳ್ಳೂರು ದ್ವಿತೀಯ ದರ್ಜೆಯ ಗ್ರಾಮ ಪಂಚಾಯತು ಆಗಿದೆ. ಪಂಚಾಯತಿನ ಜನಸಂಖ್ಯೆಯಲ್ಲಿ ಹೆಚ್ಚಿನವರು ದಾರಿದ್ರ್ಯ ರೇಖೆಗಿಂತ ಕೆಳಗಿರುವವರು. ಈ ಪಂಚಾಯತಿನಲ್ಲಿ ಮುಖ್ಯವಾಗಿ ಕೃಷಿ ಕಾರ್ಮಿಕರಾಗಿ ದುಡಿಯುತ್ತಿರುವವರ ಸಂಖ್ಯೆಯೇ ಹೆಚ್ಚು. ಇನ್ನು ಕೆಲವು ಕುಟುಂಬಗಳವರು ಸಣ್ಣ ಹಿಡುವಳಿದಾರರಾಗಿರುವರು. ಮಹಿಳೆಯರಲ್ಲಿ ಕೂಡಾ ಬಹುಮಂದಿ ಕೃಷಿ ಕಾರ್ಮಿಕರಾಗಿರುವರು. ಇನ್ನು ಕೆಲವು ಮಹಿಳೆಯರು ಬೀಡಿ ಉದ್ಯಮದಲ್ಲಿಯೂ ತೊಡಗಿರುವರು. ಇತ್ತೀಚೆಗಿನ ವರ್ಷಗಳಲ್ಲಿ ಕೃಷಿರಂಗದಲ್ಲಿ ಉತ್ಪಾದನೆ ಕಡಿಮೆಯಾಗುತ್ತಿದೆ. ಬೀಡಿ ವ್ಯವಸಾಯದಲ್ಲಿ ಸಾಕಷ್ಟು ಕೆಲಸ ದೊರೆಯುತ್ತಿಲ್ಲ. ಆದುದರಿಂದ ಈ ಪ್ರದೇಶದಲ್ಲಿ ನಿರುದ್ಯೋಗ ಸಮಸ್ಯೆ ಹೆಚ್ಚುತ್ತಿದೆ. ಈ ಪಂಚಾಯತು ಪ್ರದೇಶದಲ್ಲಿ ಯಾವುದೇ ಕೈಗಾರಿಕಾ ಕೇಂದ್ರಗಳಿರುವುದಿಲ್ಲ.

ಗ್ರಾಮ ಪಂಚಾಯತಿಗೆ ಕಟ್ಟಡ ತೆರಿಗೆಯಲ್ಲಿ 1994-95 ರಲ್ಲಿ ರೂ. 50,249-00 ಮತ್ತು 1995-96ರಲ್ಲಿ ರೂ. 51,119-00 ಆದಾಯವಾಗಿ ದೊರಕಿದೆ. ಪ್ರತಿವರ್ಷವೂ ಕಟ್ಟಡಗಳು ನೂತನವಾಗಿ ನಿರ್ಮಾಣಗೊಳ್ಳುತ್ತವೆ. ಆದರೆ ಇವುಗಳಲ್ಲಿ ಹೆಚ್ಚಿನ ಕಟ್ಟಡಗಳೂ ಸ್ವಂತ ವಾಸದ ಚಿಕ್ಕ ಚಿಕ್ಕ ಮನೆಗಳಾಗಿವೆ. ಗ್ರಾಮ

# 18
# ಸಂಪನ್ಮೂಲಗಳ ಸಂಗ್ರಹ

ಪಂಚಾಯತಿನ ಇನ್ನೊಂದು ಮುಖ್ಯ ಆದಾಯ ವೃತ್ತಿ ತೆರಿಗೆ. 1994-95 ಪ್ರಥಮ ಅರ್ಧ ವರ್ಷದಲ್ಲಿ ರೂ. 31,605-00 ರೂಪ್ಯಾಗಳು ಹಾಗೂ ದ್ವಿತೀಯ ಅರ್ಧ ವರ್ಷದಲ್ಲಿ ರೂ. 40,055 ರೂಪ್ಯಾಗಳು ಆದಾಯವಾಗಿ ಲಭಿಸಿದೆ. ಈ ಪ್ರದೇಶದಲ್ಲಿ ಸರಕಾರಿ ಸಂಸ್ಥೆಗಳು ಹಾಗೂ ಖಾಸಗೀ ಸಂಸ್ಥೆಗಳು ಬೆರಳೆಣಿಕೆಯಷ್ಟು ಮಾತ್ರವಿದ್ದು ವೃತ್ತಿ ತೆರಿಗೆಯ ಹೆಚ್ಚಿನ ಭಾಗವನ್ನು ಕೃಷಿಕರಿಂದಲೇ ವಸೂಲು ಮಾಡಲಾಗುವುದು.

ಈ ಪಂಚಾಯತು ಪ್ರದೇಶದಲ್ಲಿ ದಿನೋಪಯೋಗೀ ಸಾಮಾಗ್ರಿಗಳನ್ನು ವಿಕ್ರಯಿಸುವ ಚಿಕ್ಕ ಚಿಕ್ಕ ಅಂಗಡಿಗಳು ಮಾತ್ರವೇ ಇರುವುದರಿಂದ ಲೈಸನ್ಸ್ ಫೀಸಾಗಿ ಕೇವಲ ರೂ. 4023-00 ಮಾತ್ರವೇ ಲಭಿಸುತ್ತದೆ.

ವರಮಾನಗಳ ತಃಖ್ತೆಯನ್ನು ಈ ಕೆಳಗೆ ಕೊಡಲಾಗಿದೆ.

| ವಿಭಾಗಗಳು | ತೆರಿಗೆ ಹೊರಿಸಿದ್ದು | ವಸೂಲಾತಿ | ಬಾಕಿ |
|---|---|---|---|
| ಕಟ್ಟಡ ತೆರಿಗೆ | ರೂ. 50249-65 | 50249-65 | ಇಲ್ಲ |
| ವೃತ್ತಿ ತೆರಿಗೆ | ರೂ. 31605-00 | 31605-00 | ಇಲ್ಲ |
| ಲೈಸೆನ್ಸ್ ಫೀಸು | ರೂ. 4023-00 | 4023-00 | ಇಲ್ಲ |
| ಭೂಪರಾ ಬಾಕಿ ತೆರಿಗೆ | ರೂ. 6798-40 | 6798-40 | ಇಲ್ಲ |
| ಸರಕಾರದ ಗ್ರೇಂಟ್ ಅಲ್ಲದು ಇತರ ವರಮಾನಗಳು | ರೂ. 6798-40 | 6798-40 | ಇಲ್ಲ |
| ಕೇವಣಿ | ರೂ. 8774-90 | 8774-90 | ಇಲ್ಲ |
| ಇನ್ನಿತರ | ರೂ. 9153-67 | 9153-67 | ಇಲ್ಲ |

ಸರಕಾರದಿಂದ ಗ್ರೇಂಟು ರೂಪದಲ್ಲಿ ಪಂಚಾಯತಿಗೆ ದೊರಕಿದ ವಿವರ. ಅನ್‌ಟೈಡ್ ಫಂಡ್ ರೂ. 4, 1,3 753 -00, ಜೆ . ಆರ್ . ವೈ . ರೂ. 4,43,753 - 00 ಎಸ್ಟಾಬ್ಲಿಷ್‌ಮೆಂಟ್ ಗ್ರಾಂಟು ರೂ. 67,955-00 ಗ್ರಾಮೀಣ ಮಾರ್ಗ ದುರಸ್ತಿಗೆ ರೂ. 15, 640- 00 ಮೈನರ್ ಇರಿಗೇಷನ್ ರೂ. 1,250 - 00 ಮತ್ತು ವೆಹಿಕಲ್ ಟೇಕ್ಸ್ ರೂ. 1,12,295 - 00.

ಬೆಳ್ಳೂರು ಗ್ರಾಮ ಪಂಚಾಯತಿನ ಆಡಳಿತ ವೆಚ್ಚ ರೂ. 4 ,37, 568-00 ಇದು ಪಂಚಾಯತಿನ ಒಟ್ಟು ವರಮಾನದ 90% ಆಗಿರುವುದು

1995- 96 ರಲ್ಲಿ ಎಸ್ಟಾಬ್ಲಿಷ್‌ಮೆಂಟ್ ಚಾರ್ಜ್ ರೂ. 3,41,937- 00 ಈ ಪಂಚಾಯತಿನ ಖಾಯಂ ವರಮಾನ ಮಾರ್ಗವನ್ನು ಈಗಿರುವ ತೆರಿಗೆಯನ್ನು ಹೆಚ್ಚಿಸಿ ಮಾಡಲು ಸಾಧ್ಯವಾಗದು.

ಈ ಪಂಚಾಯತು ಪ್ರದೇಶದಲ್ಲಿ ನೋರ್ತ್ ಮಲಬಾರು ಗ್ರಾಮೀಣ ಬೇಂಕ್ ಮತ್ತು ಸಹಕಾರಿ ಕೋ ಆಪರೇಟಿವ್ ಬೇಂಕ್ ಮಾತ್ರ ಕಾರ್ಯ ನಿರ್ವಹಿಸುವುದು.

ನಮ್ಮ ಪಂಚಾಯತಿನ ಅಭಿವೃದ್ಧಿಗೆ ಕೇವಲ ಸರಕಾರದಿಂದ ಸಿಗುವ ಧನಸಹಾಯವನ್ನು ಮಾತ್ರವೇ ಆಶ್ರಯಿಸಿ ಇರಬೇಕಾದ ದುಃಸ್ಥಿತಿ ಇದೆ.

**ನಮ್ಮ ಪಂಚಾಯತಿನ ಸಮಸ್ಯೆಗಳು :**

1. ಆಡಳಿತ ಖರ್ಚಿನಲ್ಲಾದ ಹೆಚ್ಚಳ.

2. ಸ್ವಯಂ ಸೇವಾ ಕೆಲಸಗಳಲ್ಲಿ ಕುಂಟಿತವಾಗುತ್ತಿರುವ ಆಸಕ್ತಿ.

3. ಸರಕಾರದಿಂದ ಸ್ವಯಂ ಆಡಳಿತ ಸಂಸ್ಥೆಗಳಿಗೆ ನೀಡುವ ಸಹಾಯ ಧನದ ಕೊರತೆ.

**ಸಾಧ್ಯತೆಗಳು:**

1. ಪಂಚಾಯತ್ ಪ್ರದೇಶದಲ್ಲಿ ಸಾಕು ನಾಯಿಗಳಿಗೆ ಪರವಾನಿಗೆಯನ್ನು ಖಡ್ಡಾಯಗೊಳಿಸುವುದು.

2. ಭೂತೆರಿಗೆ (ಬೇಸಿಕ್ ಟೇಕ್ಸ್) ಯನ್ನು ಸಂಪೂರ್ಣವಾಗಿ ಪಂಚಾಯತುಗಳಿಗೆ ನೀಡುವುದು.

3. ಭೂಮಿ ಪರಾಭಾಕೆ ಮಾಡುವ ಮೂಲಕ ಸಿಗುವ ತೆರಿಗೆ (ಸ್ಟ್ಯಾಂಪ್ ಡ್ಯೂಟಿ)ಯನ್ನು ಪೂರ್ಣ ಪಂಚಾಯತುಗಳಿಗೆ ಒದಗಿಸುವುದು.

4. ಶಿಕ್ಷಣ, ಆರೋಗ್ಯಕ್ಷೇಮ ಕಾರ್ಯಕ್ರಮಗಳಿಗಾಗಿ ನಿಧಿ ಸಂಗ್ರಹಿಸುವುದು.

5. ಕೆಂಪು ಕಲ್ಲನ್ನು ಕಡಿಯುವುದಕ್ಕಿರುವ ಪರವಾನಿಗೆಯನ್ನು ಪಂಚಾಯತಿಗೆ ನೀಡುವುದು.

6. ಖಾಸಗಿ ಒಡೆತನದ ಸಾರಿಗೆಯ ವಾಹನಗಳು ರಾತ್ರಿ ತಂಗುವ ಸ್ಥಳದಲ್ಲಿ ವೃತ್ತಿ ತೆರಿಗೆಯನ್ನು ಪಾವತಿಸುವ ನಿಯಮ ಮಾಡುವುದು.

7. ಪಂಚಾಯತು ಪ್ರದೇಶದಲ್ಲಿರುವ ವಾಹನಗಳ ವಾಹನ ತೆರಿಗೆಯ 25% ಪಂಚಾಯತುಗಳಿಗೆ ನೀಡುವಂತೆ ಮಾಡುವುದು.

8. ಶೇಂದಿ ಅಂಗಡಿ ಹರಾಜು ಮೂಲಕ ದೊರೆಯುವ ಹಣದ 50% ಪಂಚಾಯತುಗಳಿಗೆ ಲಭಿಸುವಂತೆ ಮಾಡುವುದು.

9. ಸೇಲ್ಸ್ ಟೇಕ್ಸ್ ಮತ್ತು ಪರ್‌ಚೇಸ್ ಟೇಕ್ಸ್‌ಗಳ ಮೂಲಕ ದೊರೆಯುವ ಮೊಬಲಗಿನ 25%ನ್ನು ಪಂಚಾಯತುಗಳಿಗೆ ನೀಡುವುದು.

10. ಕಟ್ಟಡದ ವಿಸ್ತೀರ್ಣವನ್ನು ಹೊಂದಿಕೊಂಡು ಕಟ್ಟಡ ತೆರಿಗೆಯ ಶೇಕಡಾವಾರುಗಳನ್ನು ಬದಲಾಯಿಸುವುದು. ಕಟ್ಟಡದ ಗಾತ್ರ ಹಾಗೂ ವಿಸ್ತೀರ್ಣಗಳ ನಿಷ್ಪತ್ತಿಯಲ್ಲಿ ಹೊರಿಸುವ ತೆರಿಗೆಯನ್ನು ನಿರ್ಣಯಿಸುವುದು.

11. ಹೊಸ ಸೇವೆಗಳನ್ನು ನೀಡಿ ಶುಲ್ಕ ವಸೂಲಿ ಮಾಡುವುದು.

12. ಸಾರ್ವಜನಿಕ ಮಾರ್ಗ, ಬಾವಿ, ಮೊದಲಾದವುಗಳ ಸಂರಕ್ಷಣೆ ಮತ್ತು ದುರಸ್ತಿಯ ವೆಚ್ಚವನ್ನು ಆಯಾ ಪ್ರದೇಶದ ಫಲಾನುಭವಿಗಳಿಗೆ ವಹಿಸುವಂತೆ ನಿಯಮ ತರುವುದು.

# 19

# ಉಪಸಂಹಾರ

ಬೆಳ್ಳೂರು ಗ್ರಾಮ ಪಂಚಾಯತಿನ ಈ ಅಭಿವದ್ಧಿಯನ್ನು ಈ ಪಂಚಾಯತಿನ ಜನಪ್ರತಿನಿಧಿಗಳು, ಅಧ್ಯಾಪಕರೂ, ಉದ್ಯೋಗಸ್ಥರು, ಅನುಭವಿಗಳು, ಹಿರಿಯರು, ಮತ್ತು ಸಂಬಂಧಿಕ ಕ್ಷೇತ್ರ ಪರಿಣತರು ಒಟ್ಟು, ಸೇರಿ ತಯಾರಿಸಿದ್ದಾರೆ. ಗ್ರಾಮಸಭೆಗಳಿಂದ ಬಂದ ಮಾಹಿತಿ, ಹಾಗೂ ದ್ವಿತೀಯ ಮಾಹಿತಿಗಳ ಆಧಾರದಲ್ಲಿ ಚರ್ಚಿಸಿ, ಅಭಿಪ್ರಾಯಗಳನ್ನು ಕ್ರೋಡೀಕರಿಸಿದ್ದಾರೆ. ಚರ್ಚೆಯಲ್ಲಿ ಪಾಲ್ಗೊಂಡ ಎಲ್ಲರ ಪ್ರಾಮಾಣಿಕ ಶ್ರಮ ಈ ಕೆಲಸಕ್ಕೆ ಲಭ್ಯವಾದುದರಿಂದ, ವರದಿಯಲ್ಲಿ ಅಡಕವಾದ ಸಮಸ್ಯೆಗಳು ಸೂಚಿತ ಪರಿಹಾರೋಪಾಯಗಳು, ಪರಿಪೂರ್ಣಲೆನ್ನುವ ಭರವಸೆ ನಮಗಿದೆ. ಈ ವರದಿಯ ಸಂಬಂಧವಾಗಿ ಜರಗುವುದಕ್ಕಿರುವ ವಿಚಾರ ಸಂಕೀರ್ಣದಲ್ಲಿ ವ್ಯಕ್ತವಾಗುವ ನಾಗರಿಕರ ಆರೋಗ್ಯಪೂರ್ಣ ಸಲಹೆ, ಸೂಚನೆ, ವಿಮರ್ಶೆಗಳಿಗೆ ಪೂರ್ಣಸ್ವಾಗತವಿದೆ.

0*0*0*0*00*0*0*0





4338





SAMATHA GRAPHICS, KARKALA